ನವೆಂಬರ್ 30, 2025
41ನೇ ವರ್ಷದಲ್ಲಿ
www.facebook.com/firstcrimenewspaper/
ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್

2013
ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ
ಬೆಲೆ : ₹20/-

## ಕುರ್ಚಿ ಬಿಡದ ಸಿದ್ದರಾಮಯ್ಯ!

## ಡಿ.ಕೆ.ಶಿ ಬಿಜೆಪಿಗೆ ಹೋಗ್ತಾರಾ?!








## ಅತ್ತಿಬೆಲೆ: 'ದೃಶ್ಯ' ಸಿನಿಮಾ ಸ್ಟೈಲ್ ಮರ್ಡರ್ ಕೇಸ್!

## ನರಸಾಪುರದಲ್ಲಿ ಸೆಕ್ಯೂರಿಟಿ ಗಾರ್ಡ್ ಕಗ್ಗೊಲೆ!









## ಜೈಲಿಗೆ ಹೊರಡಲಿದೆ ಬುರುಡೆ ಗ್ಯಾಂಗ್!

## ಮಹಿಳಾ ಸುರಕ್ಷತೆಗೆ 'ಸೇಫ್ಟಿ ಐಲ್ಯಾಂಡ್'

## ಸಂಪಾದಕರು ಸ್ಥಾಪಿಸಿದ ಪತ್ರಿಕೆಗಳು

**1975ರಲ್ಲಿ 'ಶಿಕ್ಷಣ ಸುಧಾರಕ'**
(ಮೊಟ್ಟ ಮೊದಲ ಶಿಕ್ಷಣ ಪಾಕ್ಷಿಕ)

**1984ರಲ್ಲಿ 'ಪ್ರದೇಶ ಸಮಾಚಾರ'**
(ದಿನಪತ್ರಿಕೆ)

**1985ರಲ್ಲಿ 'ಪೊಲೀಸ್ ನ್ಯೂಸ್'**
(ಕನ್ನಡ ವಾರಪತ್ರಿಕೆ)

**1987ರಲ್ಲಿ 'ಪೊಲೀಸ್ ನ್ಯೂಸ್'**
(ತಮಿಳು, ಹಿಂದಿ, ಇಂಗ್ಲೀಷ್)

**1989ರಲ್ಲಿ 'ಲೋಕವಾಣಿ'**
(ಕನ್ನಡ ದೈನಿಕ)

**1990ರಲ್ಲಿ 'ಮಂಗಳೂರು ಮಿತ್ರ'**
(ಮಂಗಳೂರಿನ ಮೊಟ್ಟ ಮೊದಲ ಸಂಜೆ ದೈನಿಕ)

**1992ರಲ್ಲಿ 'ಕರ್ನಾಟಕ ಮಲ್ಲ'**
(ಮುಂಬೈನಲ್ಲಿ ಪ್ರಕಟಿತ ಮೊಟ್ಟ ಮೊದಲ ಕನ್ನಡ ದೈನಿಕ)

**1996ರಲ್ಲಿ 'ಆದರ್ಶ ಗಂಡ ಹೆಂಡತಿ'**
(ಕನ್ನಡ ಮಾಸಪತ್ರಿಕೆ)

**1997ರಲ್ಲಿ 'ಕ್ರೀಡಾ ಸಮಯ'**
(ಕನ್ನಡ ಮಾಸಿಕ)

**1999ರಲ್ಲಿ 'ಶುಭದಿನ'**
(ಕನ್ನಡ ವಾಣಿಜ್ಯ ದೈನಿಕ)

**1999 ರಲ್ಲಿ 'ಸಿಟಿ ಟುಡೆ'**
(ಇಂಗ್ಲೀಷ್ ಸಂಜೆ ದೈನಿಕ)

**'ಪೊಲೀಸ್ ನ್ಯೂಸ್'**
(ಸಪ್ಲಿಮೆಂಟರಿ)

**'ದೇಗುಲ ಪ್ರಭೆ'**
(ಕನ್ನಡ ಮಾಸಿಕ)

**ಸಂಸ್ಥಾಪಕ ಸಂಪಾದಕರ ಸವಿನೆನಪಿನಲ್ಲಿ......**



## ಲಯನ್ ಎಂ. ಮಲ್ಲಿಕಾರ್ಜುನಯ್ಯ

**ಸಂಸ್ಥಾಪಕ ಸಂಪಾದಕರು**

**ಜನನ : 29-03-1954  ಮರಣ : 22-11-2005**

**ಸ್ಥಾಪಿಸಿದ ಹಾಗೂ ಸೇವೆ ಮಾಡಿದ ಸಂಘ-ಸಂಸ್ಥೆಗಳು**

- ಲಯನ್ಸ್ ಕ್ಲಬ್ ಮೆಜೆಸ್ಟಿಕ್ ಶಾಖೆ - ಅಧ್ಯಕ್ಷರು
- ಕಾರ್ಯನಿರ್ತ ಪತ್ರಕರ್ತರ ಸಂಘ - ರಾಜ್ಯ ಖಜಾಂಚಿ
- ದೇಗುಲ ಮಠ ಹಳೇ ವಿದ್ಯಾರ್ಥಿಗಳ ಸಂಘ - ಪ್ರಧಾನ ಕಾರ್ಯದರ್ಶಿ
- ವಿಶ್ವ ಸೇವಾ ಕೇಂದ್ರ - ಉಪಾಧ್ಯಕ್ಷರು
- ಕನ್ನಡ ವೈದ್ಯ ಸಾಹಿತ್ಯ ಪರಿಷತ್ತು - ಗೌರವ ಪ್ರಧಾನ ಕಾರ್ಯದರ್ಶಿ
- ಬಸವ ಬಳಗ - ಸಂಸ್ಥಾಪಕರು, ಅಧ್ಯಕ್ಷರು
- ಮಂಗಳೂರು ಪ್ರೆಸ್ ಕ್ಲಬ್ - ಸಂಸ್ಥಾಪಕರು
- ಕನ್ನಡ ಸಾಹಿತ್ಯ ಸಮ್ಮೇಳನ (ದಾವಣಗೆರೆ) - ಅಧ್ಯಕ್ಷರು

## ಸಂದ ಪ್ರಶಸ್ತಿ ಪುರಸ್ಕಾರಗಳು

**'ಸಾಧಕರು'**
(ಅಖಿಲ ಭಾರತ ಪತ್ರಕರ್ತರ ಸಮ್ಮೇಳನ)
ದಾವಣಗೆರೆ 1993-94

**'ವಿಶಿಷ್ಟ ಸೇವಾ ಪದಕ'**
(ಕರ್ನಾಟಕ ಪತ್ರಿಕಾ ಅಕಾಡೆಮಿ, ಕರ್ನಾಟಕ ಸರ್ಕಾರ)

**'ವೈದ್ಯ ಸಾಹಿತ್ಯ ಸಾಧಕ'**
(ಕನ್ನಡ ವೈದ್ಯ ಸಾಹಿತ್ಯ ಪರಿಷತ್)

**'ಮುದ್ರಣ ಕಲೆ ಸಾಧಕ'**
(ಯುರೋಪ್ ಕನ್ನಡ ಬಳಗ)

**'ಶಾಂತಿ ಧೂತ'**
(ಇಂಡಿಯನ್ ಕಲ್ಚರಲ್ ಅಕಾಡೆಮಿ)

**'ಕನ್ನಡ ರತ್ನ'**
(ಪೊಲೀಸ್ ಅಸೋಸಿಯೇಷನ್ ಕರ್ನಾಟಕ)

**'ಪತ್ರಿಕೋದ್ಯಮಿ ಶಿವರತ್ನ'**
(ವೀರಶೈವ ವಿಚಾರ ವೇದಿಕೆ)

**'ಕರ್ನಾಟಕ ಮಲ್ಲ'**
(ಮುಂಬೈ, ಕನ್ನಡ ಬಳಗ)

**'ಬಹುಮುಖಿ'**
(ಅಭಿಮಾನಿ ಪ್ರಕಾಶನ-
'ಈ ಸಂಜೆ' ಮತ್ತು 'ಅರಗಿಣಿ' ಪತ್ರಿಕೆ ಅಂಗ ಸಂಸ್ಥೆ)

**'ದುಬೈ, ಅಬುದಾಬಿ ಕನ್ನಡ ಬಳಗದಿಂದ ಗೌರವ ಸ್ವೀಕಾರ'**

# ಮಹಿಳಾ ಸುರಕ್ಷತೆಗೆ ಬಂದಿವೆ, ಸೇಫ್ಟಿ ಐಲ್ಯಾಂಡ್‌ಗಳು

ಬೆಂಗಳೂರು ನಗರ ಪೊಲೀಸ್ ಇಲಾಖೆಯು ತನ್ನ ಸುರಕ್ಷಿತ ನಗರ ಉಪಕ್ರಮದಡಿಯಲ್ಲಿ, ಮಹಿಳೆಯರ ಸುರಕ್ಷತೆಯನ್ನು ಹೆಚ್ಚಿಸಲು ಸೇಫ್ಟಿ ಐಲ್ಯಾಂಡ್ ಎಂಬ ಒಂದು ನವೀನ ಪರಿಹಾರವನ್ನು ಪರಿಚಯಿಸಿದೆ. ಇವುಗಳ ಆಕರ್ಷಕ ನೀಲಿ ಬಣ್ಣದ ದೂರವಾಣಿ ಬೂತ್‌ಗಳಾಗಿರುತ್ತವೆ. ಇವುಗಳು ಸಂಕಷ್ಟದಲ್ಲಿರುವ ಮಹಿಳೆಯರಿಗೆ ಜೀವಸೆಲೆಯಾಗಿದ್ದು, ತೊಂದರೆಗೆ ಸಿಲುಕಿದ ಮಹಿಳೆಯರು ಮೊಬೈಲ್ ಫೋನ್ ಅಗತ್ಯವಿಲ್ಲದೆ ಪೊಲೀಸರ ಸಹಾಯ ಪಡೆಯಬಹುದಾಗಿದೆ. ಇದಕ್ಕೆ ಈ ಸೇಫ್ಟಿ ಐಲ್ಯಾಂಡ್‌ಗಳು ತ್ವರಿತ ಪ್ರವೇಶವನ್ನು ಒದಗಿಸುತ್ತವೆ. ರಸ್ತೆಬದಿ ಸ್ಥಾಪಿಸಿರುವ ಬೂತ್‌ಗಳಲ್ಲಿ ಎಸ್ ಓಎಸ್ ಬಟನ್ ಇರುತ್ತದೆ. ಅದನ್ನು ಒತ್ತುವ ಮೂಲಕ ಬಳಕೆದಾರರು ನೇರವಾಗಿ ಪೊಲೀಸ್ ಕಮಾಂಡ್ ಸೆಂಟರ್ ಸಂಪರ್ಕ ಹೊಂದುತ್ತಾರೆ. ತ್ವರಿತ ಪ್ರಕ್ರಿಯೆ ಮತ್ತು ಹಸ್ತಕ್ಷೇಪವನ್ನು ಖಚಿತಪಡಿಸಿಕೊಳ್ಳುತ್ತಾರೆ.

ಈ ತುರ್ತು ಸ್ಥಳಗಳನ್ನು ಸುಲಭವಾಗಿ ಪ್ರವೇಶಿಸುವಂತೆ ಮಾಡಲು, ಸೇಫ್ಟಿ ಐಲ್ಯಾಂಡ್‌ಗಳನ್ನು Google ನಕ್ಷೆಗಳಲ್ಲಿ ಗುರುತಿಸಲಾಗಿದೆ ಮತ್ತು ನಗರದಾದ್ಯಂತ 50 ಪ್ರಮುಖ ಸ್ಥಳಗಳಲ್ಲಿ ಪ್ರಾಯೋಗಿಕ ಕಾರ್ಯತಂತ್ರವಾಗಿ ಸ್ಥಾಪಿಸಲಾಗಿದೆ. ಆದರೆ ಇವು ಸರಳ ಬೂತ್‌ಗಳಿಗಿಂತ ಹೆಚ್ಚಿನವುಗಳಾಗಿವೆ. ಅವುಗಳ AI ಸಕ್ರಿಯಗೊಳಿಸಿದ CCTV ಕ್ಯಾಮೆರಾಗಳು (3600 ವ್ಯಾಪ್ತಿಗೆ ಒಂದು ಸ್ಥಿರ ಮತ್ತ ಒಂದು PTZ), ಪೊಲೀಸರೊಂದಿಗೆ ನೈಜ-ಸಮಯದ ಸಂಹವನಕ್ಕಾಗಿ ದ್ವಿಮುಖ ಸಂವಹನ ವ್ಯವಸ್ಥೆಗಳ ಮತ್ತು ತುರ್ತು ಎಚ್ಚರಿಕೆಗಳು ಮತ್ತು ಸೂಚನೆಗಳಿಗಾಗಿ ಸಾರ್ವಜನಿಕ ಘೋಷಣೆ ಸ್ಪೀಕರ್ ಗಳನ್ನು ಹೊಂದಿವೆ. ಈ ಸುಧಾರಿತ ಸೆಟಪ್ ತ್ವರಿತ ERSS ವಾಹನ ರವಾನೆ ಮತ್ತು ತಕ್ಷಣದ ಸಹಾಯವನ್ನು ಖಾತರಿಪಡಿಸುತ್ತದೆ, ಬೆಂಗಳೂರಿನ ಬೀದಿಗಳನ್ನು ಮಹಿಳೆಯರಿಗೆ ಸುರಕ್ಷಿತ ಸ್ಥಳಗಳಾಗಿ ಪರಿವರ್ತಿಸುತ್ತದೆ.

ಈ ಯೋಜನೆ ದಿನಾಂಕ 30-6-2024ರಂದು ಪ್ರಾರಂಭವಾಗಿದ್ದು, ಇಲ್ಲಿಯವರೆಗೆ ಕಮಾಂಡ್-ಅಂಡ್ ಕಂಟ್ರೋಲ್ ಸೆಂಟರ್ ಮೊಬೈಲ್ ಕಳ್ಳತನಕ್ಕೆ ಸಂಬಂಧಿಸಿದ 62 ಪ್ರಕರಣಗಳು ಸೇರಿದಂತೆ 188 ಎಸ್‌ಓಎಸ್ ಎಸ್‌ಓಎಸ್ ಕರೆಗಳಿಗೆ ಪ್ರತಿಕ್ರಿಯಿಸಿದೆ. ಅಧಿಕಾರಿಗಳು ಕಟ್ಟುನಿಟ್ಟಾದ ಪ್ರೋಟೋಕಾಲ್‌ಗಳನ್ನು (ಲೈವ್ ಫೀಡ್) ಮೇಲ್ವಿಚಾರಣೆ ಮಾಡಿರುತ್ತಾರೆ. ತ್ವರಿತ ಎಸ್‌ಓಎಸ್ ಪ್ರತಿಕ್ರಿಯೆ, ಕಾಂಡ್ ಸೆಂಟರ್‌ನೊಂದಿಗೆ ತಡರಹಿತ ಏಕೀಕರಣ ಮತ್ತು ಕ್ಯಾಮೆರಾಗಳು ಹಾಗೂ ಸಂವಹನದ ವ್ಯವಸ್ಥೆಗಳ ನಿಯಮಿತ ನಿರ್ವಹಣೆಯನ್ನು ನಿರ್ವಹಿಸುತ್ತಾರೆ. ಅಧಿಕಾರಿಗಳಿಗೆ ದೂರುದಾರರ ಸಂವಹನಕ್ಕಾಗಿ ತರಬೇತಿ ನೀಡಲಾಗುತ್ತದೆ. PA ವ್ಯವಸ್ಥೆಗಳು ತುರ್ತು ಸಂದರ್ಭಗಳಲ್ಲಿ ಜನಸಂದಣಿಯನ್ನು ಮಾರ್ಗದರ್ಶನ ಮಾಡುತ್ತವೆ



# ಆಪ್ತ ಸಹಚರರೊಡನೆ ಡಿಕೆ ರಹಸ್ಯ ಕಾರ್ಯಾಚರಣೆ!



ಸಂಪಾದಕ
**ಎಂ. ರಾಹುಲ್**

.................................

**ನ**ವೆಂಬರ್ 20ಕ್ಕೆ ಕಾಂಗ್ರೆಸ್ ಸರ್ಕಾರ ಜಾರಿಗೆ ಬಂದು ಎರಡೂವರೆ ತುಂಬಿದೆ. ಹೀಗಾಗಿ, ಸಿಎಂ ಅಧಿಕಾರ ಹಂಚಿಕೆ ವಿವಾದ ಬುಗಿಲೆದ್ದು ಕುಂತಿದೆ.



ನವೆಂಬರ್ ಕ್ರಾಂತಿನೂ ಇಲ್ಲ... ಬರೀ ಬ್ರಾಂತಿ... ಎನ್ನುತ್ತಿದ್ದ ಸಂದರ್ಭದಲ್ಲಿಯೆ ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನಡೆ ಬೇರೆಯೇ ದಿಕ್ಕಿನಲ್ಲಿ ಯೋಚಿಸುವಂತೆ ಮಾಡಿದೆ.

ಅವರೀಗ ದಿಢೀರ್ ರೈಸ್ ಆಗಿದ್ದಾರೆ. ಸಿಎಂ ಪದವಿ ಕೊಡದಿದ್ರೆ ನನ್ನ ದಾರಿ ನನಗೆ.... ಎನ್ನುವ ಹಂತಕ್ಕೆ ಮುಟ್ಟಿದ್ದಾರೆ! ಮೂರು ದಿನದ ಹಿಂದೆಯಷ್ಟೇ ಡಿಕೆ ಹೇಗೆ ಮಾತಾಡುತ್ತಿದ್ದರು ಅನ್ನೋದು ಗೊತ್ತಲ್ಲ...

'ಮುಖ್ಯಮಂತ್ರಿಗಳು ದೊಡ್ಡವರು, ಅವರೇ ತಾನು ಐದು ವರ್ಷ ಇರುವುದಾಗಿ ಹೇಳಿದ್ದಾರೆ. ದೊಡ್ಡವರು ಹೇಳಿದ ಮೇಲೆ, ನಾವು ಚಿಕ್ಕವರು ಗೌರವದಿಂದ ಕೇಳಿಕೊಂಡು ನಮ್ರತೆಯಿಂದ ಇರಬೇಕು... ಎಂದು ಮಾರ್ಮಿಕವಾಗಿ ನುಡಿದಿದ್ದರು!

ಸದಾಶಿವನಗರ ನಿವಾಸಕ್ಕೆ ದಾಳಿ ಇಟ್ಟ ಮಾಧ್ಯಮಗಳು, 'ಸಿಎಂ ಸಿದ್ದರಾಮಯ್ಯ ನುಡಿದಂತೆ ನಡೆಯುತ್ತಿದ್ದಾರಾ ಸರ್?' ಎಂದು ಕೇಳಿದಾಗ... 'ಅವರು ಎಲ್ಲವನ್ನು ಹೇಳಿದ್ದಾರಲ್ಲ...ಹೋಗಿ ಅವರನ್ನೇ ಕೇಳಿ... ಮುಖ್ಯಮಂತ್ರಿಯವರ ಅಧಿಕಾರವನ್ನು ನಾವುಗಳು ಎಂದೂ ಪ್ರಶ್ನೆ ಮಾಡಿಲ್ಲ...ಮಾಡುವುದಿಲ್ಲ ಎಂದಷ್ಟೇ ಉತ್ತರಿಸಿದ್ದರು. ಇನ್ನು ಸಚಿವ ಸಂಪುಟ ವಿಸ್ತರಣೆ ನಿಜವೇ?' ಎಂಬ ಪ್ರಶ್ನೆಗೂ ಸಿಎಂ ಕಡೆ ಬೊಟ್ಟು ಮಾಡಿದ್ರು. ಮಾಧ್ಯಮ ಮಂದಿ ತರ್ಲೆ ಗೊತ್ತಲ್ಲ,

'ಈಗ ಎಲ್ಲೆಡೆ ಅಧಿಕಾರ ಹಸ್ತಾಂತರದ ಬಗ್ಗೆ ಚರ್ಚೆಯಾಗುತ್ತಿದೆ, ಈ ಬಗ್ಗೆ ಚರ್ಚಿಸಲು ಖರ್ಗೆ ಅವರನ್ನು ಭೇಟಿ ಮಾಡುತ್ತೀರಾ' ಎಂದು ಕೇಳಿದ್ದಾರೆ. ತಕ್ಷಣ ಕೋಪಗೊಂಡ ಡಿಕೆ, 'ಅನಗತ್ಯವಾಗಿ ಊಹಾಪೋಹ ಸೃಷ್ಟಿಸಬೇಡಿ. ಕಾಂಗ್ರೆಸ್ ಪಕ್ಷಕ್ಕೆ ಹಿರಿಯರ ಸಲಹೆ, ಮಾರ್ಗದರ್ಶನ ಅವಶ್ಯಕತೆ ಇದೆ, ನಾನು ಎಲ್ಲರನ್ನೂ ಭೇಟಿ ಮಾಡುವೆ. ಖರ್ಗೆ ಸಾಹೇಬ್ರು ನಮ್ಮ ನಾಯಕರು, ನಮ್ಮ ಪಕ್ಷದ ಅಧ್ಯಕ್ಷರು. ಅವರನ್ನು ಭೇಟಿ ಮಾಡುವುದು, ನಮ್ಮ ಕರ್ತವ್ಯ. ಶಿಷ್ಟಾಚಾರದ ಬಗ್ಗೆ ನನಗೆ ಬೇರೆಯವರಿಗಿಂತ ಹೆಚ್ಚಿನ ಅರಿವಿದೆ. ಅವರು ನಮ್ಮ ರಾಜ್ಯದವರೇ ಆದರೂ ಅವರ ಹಿರಿತನ ಹಾಗೂ ಹುದ್ದೆಗೆ ನಾವು ಗೌರವ ನೀಡಬೇಕು...' ಎಂದು ಹೇಳಿದ್ದರು.

ಮೀಡಿಯಾ ಮಂದಿ ಪರಪ್ಪನ ಅಗ್ರಹಾರ? ಎನ್ನುತ್ತಿದ್ದಂತೆ, 'ನಾನು ಪರಪ್ಪನ ಅಗ್ರಹಾರ ಜೈಲಿಗೆ ನಮ್ಮ ಶಾಸಕರನ್ನು ಭೇಟಿ ಮಾಡಲು ಹೋಗಿದ್ದೆ... ರಾಜಕೀಯ ಕಾರಣಗಳಿಗೆ ಅವರನ್ನು ಜೈಲಿಗೆ ಹಾಕಲಾಗಿದೆ... ಹಾಗಾಗಿ, ಸಾಂತ್ವನ ಹೇಳಲು ಹೋಗಿದ್ದೆ' ಎಂದು ತೇಪೆ ಸಾರಿಸಿದ್ದರು.

'ಸಿಎಂ ಅವರು ದೂರವಾಣಿ ಮೂಲಕ ಖರ್ಗೆ ಅವರ ಭೇಟಿಗೆ ಸಮಯ ಕೇಳಿದ್ದು, ನಾಳೆ ಸಮಯ ನೀಡಿದ್ದಾರಂತೆ' ಎಂದು ಕೇಳಿದಾಗ, 'ಅದರಲ್ಲಿ ತಪ್ಪೇನಿದೆ? ಅವರು ಮಾತನಾಡಬಾರದೇ? ಮುಖ್ಯಮಂತ್ರಿಗಳು ಎಐಸಿಸಿ ಅಧ್ಯಕ್ಷರ ಜೊತೆ ಮಾತನಾಡುವುದಿದ್ದರೆ ಅದರಲ್ಲಿ ತಪ್ಪೇನಿದೆ' ಎಂದು ಹರಿಹಾಯ್ದರು.

ಪದವಿ ಹಂಚಿಕೆ ವಿಚಾರದಲ್ಲಿ ಸಾಕಷ್ಟು ಗೊಂದಲ ಸೃಷ್ಟಿಯಾಗಿದೆ ಅಲ್ವಾ ಸರ್ ಎಂದು ಕೇಳಿದಾಗ, 'ಯಾವ ಗೊಂದಲವೂ ಇಲ್ಲ. ಗೊಂದಲ ಆಗಿರುವುದು ನಿಮಗೆ ಮಾತ್ರ... ಮಾಧ್ಯಮಗಳಿಗೆ ಮಾತ್ರ. ನನಗೆ ಹಾಗೂ ಮುಖ್ಯಮಂತ್ರಿಗಳಿಗೆ ಯಾವುದೇ ಗೊಂದಲ ಇಲ್ಲ. ಎಐಸಿಸಿ ನಾಯಕರ ಮಾತಿಗೆ ಬದ್ಧವಿರುವುದಾಗಿ ಸಿಎಂ ಈಗಾಗಲೇ ಹೇಳಿದ್ದಾರೆ. ನಾವು ಕೂಡ ಅವರ ಮಾತಿಗೆ ಬದ್ಧ ಎಂದು ಈಗಾಗಲೇ ಹೇಳಿದ್ದೇವೆ. ಇದರಲ್ಲಿ ಗೊಂದಲ ಏನಿದೆ?

'ನೀವು ಕುಮಾರಸ್ವಾಮಿ ನಾನು ಅಮಿತ್ ಶಾ ಟಚ್ ಲಿದ್ದೇವೆ ಅಂತ ವರದಿ ಮಾಡಿದ್ದೀರಿ, ಯಾವ ದಾಖಲೆ ಇಟ್ಕೊಂಡ್ ಮಾಡಿದ್ರಿ? ಡಿಫರ್ಮೇಷನ್ ಕೇಸ್ ಹಾಕ್ತೀನಿ ಹುಷಾರ್... 45 ವರ್ಷದಿಂದ ರಾಜಕೀಯ ಮಾಡ್ಕೊಂಡ್ ಬದುಕಿದ್ದೀನಿ ನಾನು, ದಿಕ್ಕು ತಪ್ಪಿಸಿ ಮನೆ ಹಾಳು ಮಾಡೋ ಕೆಲಸ ಮಾಡ್ತೀರಾ? ಸುಮ್ನೆ ಬಿಡಲ್ಲ ನಾನು.. ಬೆನ್ನತ್ತಿ ಬಿಡ್ತೀನಿ, ಹಿಂದೆ ಟಿವಿ 9ಗೆ ಹತ್ತಿದ್ನಲ್ಲಾ ಹಂಗೇ....'' ಎಂಬಿತ್ಯಾದಿಯಾಗಿ ರೇಗಿ ಕೆಲವರ ಬೆವರಿಳಿಸಿದ್ದಾರೆ!



ಹೀಗೆ ಹೇಳಿದ ಬೆನ್ನಲ್ಲೇ ಡಿಕೆ ಅವರ ಮನೆಯಲ್ಲಿ ಅವರ ಆಪ್ತರಾದ ಸಿ.ಪಿ. ಯೋಗೇಶ್ವರ್, ಪ್ರಕಾಶ್ ಕೋಳಿವಾಡ್, ಯಾಸೀರ್ ಪಠಾಣ್, ಶ್ರೀನಿವಾಸ್ ಮಾನೆ, ಎಂಎಲ್ಸಿ ದಿನೇಶ್ ಗೂಳಿಗೌಡ, ಆನಂದ ಗಡ್ಡದೇವರ ಮಠ ಹಾಗೂ ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ಶುಕ್ರವಾರ ರಾತ್ರಿ ಗುಪ್ತ ಸಮಾಲೋಚನೆ ನಡೆಸಿದ್ದಾರೆ!

ಇನ್ನು ಡಿಕೆ ಆಪ್ತ ಶಾಸಕರಾದ ಉದಯ್, ರವಿಗಣಿಗಾ, ನಯನ ಮೋಟಮ್ಮ, ರಂಗನಾಥ್,



ಚಂದ್ರೇಗೌಡ, ಶಿವಲಿಂಗೆ ಗೌಡ.... ಮುಂತಾದವರು ದಿಢೀರ್ ದೆಹಲಿಗೆ ತೆರಳಿದ್ದಾರೆ, ಡಿಕೆ ಪರ ಬ್ಯಾಟಿಂಗ್ ಮಾಡಲು!! ಇತ್ತ, ಸಿಎಂ ಸಿದ್ದರಾಮಯ್ಯ ಜಿ. ಪರಮೇಶ್ವರ್ ಬಳಿ ತೆರಳಿ ಗುಪ್ತ ಮಾತುಕತೆ ನಡೆಸುತ್ತಿದ್ದಾರೆ!

ಯಾರು ಏನೇ ಕೇಳಿದರು ನಂಗೊತ್ತಿಲ್ಲ, ವರದಿ ಬಂದಿಲ್ಲ... ಎನ್ನುತ್ತಿದ್ದ ಜಿ.ಪಿ ಸಾಹೇಬ್ರು, ಇದೀಗ ನಾನು ಇದ್ದೇನೆ ಸಿಎಂ ರೇಸ್ ಅಲ್ಲಿ... ದಲಿತರಿಗೆ ಅನ್ಯಾಯ ಆಗ್ತಿದೆ... ಎಂದು ಗುಟುರು ಹಾಕುತ್ತಿದ್ದಾರೆ! ದಲಿತರಿಗೆ ಅನ್ಯಾಯ ಆಗುತ್ತಿದೆ ಅಂತ ಈವಾಗ ಗೊತ್ತಾಯ್ತು ಜಿ. ಪರಮೇಶ್ವರರಿಗೆ?!

ಇದೆಲ್ಲಾ ಏನ್ರೀ? ಕಾಂಗ್ರೆಸ್‌ನವರ ಈ ಡ್ರಾಮಾ ಹೆಚ್ಚು ದಿವಸ ನಡೆಯಲ್ಲ. ಮೊದಲಿಗೆ ಸಿಎಂ ಸಿದ್ದರಾಮಯ್ಯ ಓಪನ್ ಆಗಬೇಕು. ಹಿಂದೆ ಅಧಿಕಾರ ಹಂಚಿಕೆ ಮಾತಾಗಿತ್ತಾ ಇಲ್ವಾ ಅನ್ನೋದನ್ನು ಮೊದಲು ಬಾಯಿ ಬಿಡಬೇಕು. ಆಗಿದ್ರೆ ಮಾತಿಗೆ ತಪ್ಪದೇ ಕುರ್ಚಿ ಬಿಟ್ಟು ಕೊಡಬೇಕು. ಡಿಕೆ ಸಿಎಂ ಆದ್ರೆ ರಾಜ್ಯಕ್ಕೆ ತೊಂದರೆ ಅನ್ನುವ ನಿಲುವು ಇದ್ರೆ ಅದನ್ನಾದರೂ ಬಹಿರಂಗವಾಗಿ ಹೇಳಬೇಕು.

ಏನೂ ಮಾತಾಡದೆ ಹೀಗೆ ಜಿ. ಪರಮೇಶ್ವರ್ ಮನೆಗೆ, ಸತೀಶ್ ಜಾರಕಿಹೊಳಿ ಮನೆಗೆ ಅಡ್ಡಾಡ್ತಾ ಇದ್ರೆ ಏನರ್ಥ? ಡಿಕೆ ಅವರೇನು ಕಮ್ಮಿಯಲ್ಲ ಸ್ವಾಮಿ, ಅವರು ಕಟ್ಟರ್ ಕಾಂಗ್ರೆಸ್ಸಿಗರೇ ಆದ್ರೂ ತಲೆ ಕೆಟ್ರೆ ಬಿಜೆಪಿಗೆ ಹೋಗಲ್ಲ ಅಂತ ಏನು ಗ್ಯಾರೆಂಟಿ?! ವಿಜಯೇಂದ್ರ, ಸೋಮಣ್ಣ ಮೊದಲಾದ ನಾಯಕರು ಡಿಕೆ ಯವರ ಕೈಗೆ ಕಮಲ ಕೊಡಲು ತುದಿಗಾಲಲ್ಲಿ ನಿಂತಿದ್ದಾರೆ!

ನೆನಪಿದೆಯಾ, ಡಿಕೆ ಅವರ ರಾಜಕೀಯ ಗುರುಗಳಾದ ಬಂಗಾರಪ್ಪ ಒಮ್ಮೆ ಕಾಂಗ್ರೆಸ್ ಹೈಕಮ್ಯಾಂಡ್ ತನ್ನ ಮಾತು ಕೇಳದ್ದಕ್ಕೆ ಬಿಜೆಪಿ ಗೆ ಹಾರಿದ್ದರು! ಇಷ್ಟೇ ಯಾಕೆ, ಎಸ್.ಎಂ. ಕೃಷ್ಣ ಸಾಹೇಬ್ರು ಕೂಡ ಬಿಜೆಪಿಗೆ ಸೇರಿ ಮಹಾರಾಷ್ಟ್ರದ ರಾಜ್ಯಪಾಲರಾಗಿ ವಿಜೃಂಭಿಸಿದ್ದರು! ಈಗ ಅನ್ಯಾಯ ಅಂತಾದ್ರೆ, ಡಿಕೆ ಕೂಡ ಅವರ ಹಾದಿಯಲ್ಲೇ ಸಾಗುತ್ತಾರೆ ಅನ್ನೋದು ಓಪನ್ ಸೀಕ್ರೆಟ್!! ಇದನ್ನ ಅವರ ನಡೆ ನುಡಿ ಎರಡೂ ಸಾರಿ ಸಾರಿ ಹೇಳುತ್ತಿವೆ...!!!


-ಸಂ.

---


ಮತ್ತು ಬಳಕೆಯ ಡೇಟಾವು ಭವಿಷ್ಯದ ನಿಯೋಜನಗಳಿಗಾಗಿ ಹೆಚ್ಚಿನ ಅಪಾಯದ ವಲಯಗಳನ್ನು ಗುರುತಿಸಲು ಸಹಾಯ ಮಾಡುತ್ತದೆ.

ಒಂದು ಪ್ರಕರಣದಲ್ಲಿ, ಬಿಎಂಟಿಸಿ ಬಸ್ಸಿನಲ್ಲಿ ಮೊಬೈಲ್ ಫೋನ್ ಕಳೆದುಕೊಂಡ ವಿದ್ಯಾರ್ಥಿಯೊಬ್ಬಳು ಬನಶಂಕರಿಯಲ್ಲಿ ಸೇಫ್ಟಿ ಐಲ್ಯಾಂಡ್ ಬಳಸಿದ್ದಳು. ಕೆಲವೇ ನಿಮಿಷಗಳಲ್ಲಿ ಪೊಲೀಸರು ಆಗಮಿಸಿ, ಬಸ್ ಕಂಡಕ್ಟರ್ ಅನ್ನು ಪತ್ತೆಹಚ್ಚಿ, ಆಕೆಯ ಫೋನ್ ಅನ್ನು ವಶಪಡಿಸಿಕೊಂಡು ಆಕೆಗೆ ಹಿಂತಿರುಗಿಸಿರುತ್ತಾರೆ.

ಮತ್ತೊಂದು ಘಟನೆಯಲ್ಲಿ, ಒಬ್ಬ ವ್ಯಕ್ತಿಯಿಂದ ಖಾಸಗಿ ಫೋಟೋಗಳ ಬೆದರಿಕೆಯೊಡ್ಡಲ್ಪಟ್ಟ ಯುವತಿಯೊಬ್ಬಳು ಎಸ್‌ಓಎಸ್ ಬಟನ್ ಒತ್ತಿದಳು. ಪೊಲೀಸರು ತಕ್ಷಣ ಪ್ರತಿಕ್ರಿಯಿಸಿ ಆ ವ್ಯಕ್ತಿಯನ್ನು ಠಾಣೆಗೆ ಕರೆಸಿ ಪರಿಹಾರ ಕ್ರಮ ಕೈಗೊಂಡರು.



ಸರಗಳವು ನಡೆದಾಗ....

ಬೆಂಗಳೂರು ಸೇಫ್ ಸಿಟಿ ಯೋಜನೆಯು ಕೇವಲ ಮೂಲ ಸೌಕರ್ಯಗಳನ್ನು ನಿರ್ಮಿಸುವುದಲ್ಲ. ಆತ್ಮವಿಶ್ವಾಸವನ್ನು ಕೂಡ ಬೆಳೆಸುತ್ತಿದೆ. ನಗರದ ಪ್ರತಿಯೊಬ್ಬ ಮಹಿಳೆಯರು ಇದರ ಸದುಪಯೋಗವನ್ನು ಪಡದುಕೊಳ್ಳಬೇಕು. ಬೆಂಗಳೂರು ಸಿಟಿ ಪೊಲೀಸ್ ಕಮೀಷನರ್ ಶ್ರೀ ಸೀಮಂತ್‌ಕುಮಾರ್‌ರವರ ನೇತೃತ್ವದಲ್ಲಿ ಸ್ಥಾಪನೆಯಾಗಿರುವ ಸೇಫ್ಟಿ ಐಲ್ಯಾಂಡ್ ಮಹಿಳಾ ಸುರಕ್ಷತೆಗೆ ದಾರಿದೀಪವಾಗಿದೆ. ತೊಂದರೆಗೆ ಸಿಲುಕಿದ ಮಹಿಳೆ ಕೇವಲ ಒಂದು ಬಟನ್ ಒತ್ತಿದರೆ ಸಾಕು, ಕೂಡಲೇ ಸಹಾಯವು ದೊರೆಯುತ್ತದೆ.


ಲೈಂಗಿಕ ಕಿರುಕುಳವಾದಾಗ ಸೇಫ್ಟಿ ಐಲ್ಯಾಂಡ್ ಬಟನ್ ಒತ್ತಿ....

# ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡಿ ಸೆಕ್ಯೂರಿಟಿ ಗಾರ್ಡ್ ಕೊಲೆ!


ಆರೋಪಿ ಟಿಂಕು ಕುಮಾರ್


ಕೊಲೆಯಾದ ಪಿಳ್ಳೇಗೌಡ

**ಕೋಳಿ ಫೀಡ್ ತಯಾರಿಸುವ ಫ್ಯಾಕ್ಟರಿಯಲ್ಲಿ ಬಿಹಾರ ಮೂಲದ ಯುವಕನೊಬ್ಬ ಕೆಲಸ ಮಾಡುತ್ತಿದ್ದನು. ಫ್ಯಾಕ್ಟರಿಯ ಗೇಟ್ ಕಾಯುವ ಸೆಕ್ಯೂರಿಟಿ ಗಾರ್ಡ್ ಇವರಿಗೆ ದಿನವು ಅವಾಚ್ಯ ಶಬ್ದದಿಂದ ಬೈದು ಕಿಚಾಯಿಸುತ್ತಿದ್ದನೆಂಬ ಕಾರಣಕ್ಕೆ ಕೋಪಗೊಂಡ ಕಾರ್ಮಿಕ ಸೆಕ್ಯೂರಿಟಿ ಗಾರ್ಡನ್ ಕೊಲೆಗೆ ಸಂಚು ರೂಪಿಸಿದನಲ್ಲದೆ ಫ್ಯಾಕ್ಟರಿಯ ಮ್ಯಾನೇಜರ್‌ಗೆ ಬ್ಲಾಕ್‌ಮೇಲ ಮಾಡಿ ಹಣ ದೋಚಿಕೊಂಡು ಬಿಹಾರಕ್ಕೆ ಹೋಗುವ ಪ್ಲಾನ್ ಮಾಡಿಕೊಂಡ ಕಾರ್ಮಿಕ ಮ್ಯಾನೇಜರ್‌ಗೆ ಫೋನ್ ಮಾಡಿ ಸೆಕ್ಯೂರಿಟಿ ಗಾರ್ಡ್ ನನ್ನು ಕಿಡ್ನಾಪ್ ಮಾಡಿದ್ದೇನೆ ನೀವು ನನಗೆ 5 ಲಕ್ಷ ಹಣ ಕೊಟ್ಟರೆ ಬಿಟ್ಟು ಕಳುಹಿಸುತ್ತೇನೆ. ಇಲ್ಲವಾದರೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದು, ಈ ಬಗ್ಗೆ ಮ್ಯಾನೇಜರ್ ದೂರು ನೀಡಿದ ಹಿನ್ನೆಲೆಯಲ್ಲಿ ವೇಮಗಲ್ ಪೊಲೀಸರು ಆರೋಪಿ ಕಾರ್ಮಿಕನನ್ನ ಬಂಧಿಸಿ ಜೈಲಿಗೆ ಕಳುಹಿಸುವಲ್ಲಿ ಯಶಸ್ವಿಯಾಗಿದ್ದಾರೆ.**



**ಕೋಲಾರ**
✍ ಕೋಲಾರ ಮಂಜು

ಕೋಲಾರ ತಾಲ್ಲೂಕಿನ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿ ಕೋಳಿ ಫೀಡ್ ತಯಾರಿಸುವ ಹೇಮಾ ಎಂಟರ್‌ಪ್ರೈಸಸ್ ಹೆಸರಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿರುವ ಬೆಂಗಳೂರಿನ ಕೆ.ಆರ್. ಪುರ- ಬಸವ ಪುರ ಮುಖ್ಯರಸ್ತೆಯಲ್ಲಿ ವಾಸವಿರುವ ಸೂರ್ಯರಾವ್‌ರವರ ಮಗ ಆರ್. ಮಧುಸೂದನ್‌ನವರು ಅಕ್ಟೋಬರ್ 24ರಂದು ಬೆಳಿಗ್ಗೆ ವೇಮಗಲ್ ಪೊಲೀಸ್ ಠಾಣೆಗೆ ಹಾಜರಾಗಿ ನಾನು ಹೇಮಾ ಎಂಟರ್‌ಪ್ರೈಸಸ್‌ನಲ್ಲಿ 7 ವರ್ಷಗಳಿಂದ ಪ್ರೊಡಕ್ಷನ್ ಮ್ಯಾನೇಜರ್ ಆಗಿ ಕೆಲಸ ಮಾಡಿರುತ್ತೇನೆ. ನಮ್ಮ ಕಂಪನಿಯಲ್ಲಿ ಖಾಜಿಕಲ್ಲಹಳ್ಳಿ ನಿವಾಸಿ 65 ವರ್ಷದ ಪಿಳ್ಳೇಗೌಡ ಎನ್ನುವವರು ಕಳೆದ ಆರು ತಿಂಗಳಿನಿಂದ ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತಿದ್ದು, ಪಿಳ್ಳೇಗೌಡರವರು ಪ್ರತಿದಿನ ಸಂಜೆ 7 ಗಂಟೆಯಿಂದ ಬೆಳಿಗ್ಗೆ 7 ಗಂಟೆಯವರೆಗೆ ಕೆಲಸ ಮಾಡುತ್ತಿರುತ್ತಾರೆ. ಹೀಗಿರುವಲ್ಲಿ 2025 ಅಕ್ಟೋಬರ್ 24ರಂದು ನಾನು ಕಂಪನಿಯ ಕೆಲಸದ ಮೇರೆಗೆ ಬೆಂಗಳೂರು ರಿಂಗ್ ರೋಡ್‌ನಲ್ಲಿರುವ ಹೊರಮಾವಿನ ಮುಖ್ಯ ಕಚೇರಿಗೆ ಹೋಗಿ ಕೆಲಸ ಮುಗಿಸಿಕೊಂಡು ಮನೆಗೆ ಹೋಗಿದ್ದ ರಾತ್ರಿ ಸುಮಾರು 9.57 ಗಂಟೆಯಲ್ಲಿ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡರ ಮೊಬೈಲ್ ಫೋನ್‌ನಿಂದ ಯಾರೋ ನನ್ನ ಮೊಬೈಲ್‌ಗೆ ಕರೆ ಮಾಡಿ ಪಾಂಚ್ ಲಾಕ್ ದೇನಾ ನಹಿ ತೋ ಆಪ್ಕೋ ಸೆಕ್ಯೂರಿಟಿಕೋ ಮಾರ್ ದಾಲೆಂಗೆ ಎಂದು ಹೇಳಿ ಕಾಲ್ ಕಟ್ ಮಾಡಿದರು. ನಂತರ ಗಾಬರಿಯಾದ ನಾನು ಪಿಳ್ಳೇಗೌಡರ ಮೊಬೈಲ್‌ಗೆ ಹಲವಾರು ಸಾರಿ ಕಾಲ್ ಮಾಡಿದರೂ ಸಹ ತೆಗೆಯಲಿಲ್ಲ. ನಂತರ ನಾನು ಕಂಪನಿಯಲ್ಲಿ ಕೆಲಸ ಮಾಡುವ ರವಿ ಎನ್ನುವವರಿಗೆ ಫೋನ್ ಮಾಡಿ ವಿಚಾರ ತಿಳಿಸಿ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡ ರೂಂನಲ್ಲಿ ಇರುವರೆ ಎಂದು ಹೋಗಿ ನೋಡಿಕೊಂಡು ಬಂದು ತಿಳಿಸುವಂತೆ ಹೇಳಿದೇನು, ಅದರಂತೆ ಅವರು ಸೆಕ್ಯೂರಿಟಿ ರೂಮ್ ಬಳಿಗೆ ಹೋಗಿ ಚೆಕ್ ಮಾಡಿ ಪಿಳ್ಳೇಗೌಡ ಸೆಕ್ಯೂರಿಟಿ ರೂಮ್‌ನಲ್ಲಿ ಇರುವುದಿಲ್ಲ ಎಂಬುವುದಾಗಿ ತಿಳಿಸಿದರು. ನಂತರ ಕೆ.ಆರ್. ಪರ ಪೊಲೀಸ್ ಠಾಣೆಗೆ ಹೋಗಿ ನಡೆದ ವಿಚಾರವನ್ನು ತಿಳಿಸಿದ್ದು ನಂತರ ನನಗೆ ಪರಿಚಯವಿರುವ ಪೊಲೀಸ್ ಪೇದೆ ಪ್ರಕಾಶ್ ಎಂಬುವವರಿಂದ ವೇಮಗಲ್ ಪೊಲೀಸ್ ಇನ್ಸ್‌ಪೆಕ್ಟರ್‌ರವರ ಮೊಬೈಲ್ ನಂಬರ್‌ನ್ನು ಪಡೆದು ಅವರಿಗೆ ಫೋನ್ ಮಾಡಿ ವಿಚಾರ ತಿಳಿಸಿ ನಾಳೆ ಬೆಳಿಗ್ಗೆ ಬಂದು ದೂರು ನೀಡುವುದಾಗಿ ತಿಳಿಸಿದ್ದೆನು. ಅವರು ಸಹ ಬೆಳಿಗ್ಗೆ ಠಾಣೆಗೆ ಬನ್ನಿ ಎಂದು ಕರೆದರು.

ಮರುದಿನ ಬೆಳಿಗ್ಗೆ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗಡ ಕಾಣಲಿಲ್ಲ. ರೂಂ ಒಳಗಡೆ ಹೋಗಿ ನೋಡಿದ್ದಾಗ ನೆಲದ ಮೇಲೆ ರಕ್ತದ ಕಲೆಗಳನ್ನು ಅನುಮಾನದಿಂದ ಪಿಳ್ಳೇಗೌಡನನ್ನು ಹುಡುಕುತ್ತಾ ಕಂಪನಿಯ ಮುಂಭಾಗದಲ್ಲಿರುವ ಗಿಡಗಳ ಮಧ್ಯೆ ನೋಡಿಕೊಂಡು ಹೋಗುತ್ತಿರುವಾಗ ಗಿಡಗಳ ಪೊದೆಯ ಮಧ್ಯೆ ಇರುವ ಚರಂಡಿಯಲ್ಲಿ ಸೆಕ್ಯೂರಿಟಿ ಪಿಳ್ಳೇಗೌಡರವರ ಶವವು ಬೋರಲಾಗಿ ಬಿದ್ದಿತ್ತು. ಸ್ಥಳದಲ್ಲಿ ರಕ್ತ ಸುರಿದಿರುವುದು ಕಂಡ ಬಂದಿದ್ದು, ನಮ್ಮ ಕಂಪನಿಯಲ್ಲಿ ಕೆಲಸ ಮಾಡುತ್ತಿರುವ ಸೆಕ್ಯೂರಿಟಿ ಪಿಳ್ಳೇಗೌಡರವರನ್ನು ಯಾರೋ ದುಷ್ಕರ್ಮಿಗಳು ಸೆಕ್ಯೂರಿಟಿ ರೂಂನಲ್ಲಿ ತಲೆಗೆ ಹೊಡೆದು ಕೊಲೆ ಮಾಡಿ ಮೃತದೇಹವನ್ನು ಗಿಡಗಳ ಪೊದೆಯ ಮಧ್ಯೆ ಬಿಸಾಡಿ ಹೋಗಿರುತ್ತಾರೆ. ಇವರ ವಿರುದ್ಧ ಕಾನೂನುರೀತ್ಯ ಕ್ರಮ ಜರುಗಿಸುವಂತೆ ಕೋರಿ ನೀಡಿದ ದೂರಿನ ಮೇರೆಗೆ ಪಿಎಸ್‌ಐ ಹೇಮಂತ್‌ಕುಮಾರ್‌ರವರು ಠಾಣಾ ಸಿ.ಆರ್. ನಂ. 192/2025 ಯು/ಎಸ್ 103(1), 238 ಬಿಎನ್ ಎಸ್ 2023ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ತನಿಖೆಗಾಗಿ ವರದಿಯನ್ನು ಹಿರಿಯ ಅಧಿಕಾರಿಗಳಿಗೆ ಸಲ್ಲಿಸಿರುತ್ತಾರೆ. ಸ್ಥಳಕ್ಕೆ ಎಸ್ಪಿ ಬಿ. ನಿಖಿಲ್, ಡಿವೈಎಸ್ಪಿ ನಾಗ್ತೆ, ಪಿಐ ಬಿ.ಪಿ. ಮಂಜ, ಶ್ವಾನದಳ, ಬೆರಳಚ್ಚು ತಜ್ಞರು ಮತ್ತು ಸಿಬ್ಬಂದಿ ವರ್ಗದವರು ಭೇಟಿ ನೀಡಿ ಪರಿಶೀಲಿಸಿದ ನಂತರ ಮೃತ ಪಿಳ್ಳೇಗೌಡರವರ ಮಕ್ಕಳಾದ ಮಂಜುನಾಥ್ ಮತ್ತು ಬೈರೇಗೌಡರವರ ಸಮಕ್ಷಮದಲ್ಲಿ ಮಹಜರ್ ನಡೆಸಿದ ಮೇಲೆ ಶವವನ್ನು ಕೋಲಾರ ನಗರದ ಹೊರವಲಯದಲ್ಲಿರುವ ಶ್ರೀ ದೇವರಾಜ್ ಅರಸ್ ಮೆಡಿಕಲ್ ಕಾಲೇಜು ಮತ್ತು ಆರ್. ಎಲ್. ಜಾಲಪ್ಪ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿ ಪಂಚರ ಸಮಕ್ಷಮದಲ್ಲಿ ಪಂಚನಾಮೆ ನಡೆಸಿದ ನಂತರ ಆಸ್ಪತ್ರೆಯ ವೈದ್ಯಾಧಿಕಾರಿಗಳಿಂದ ಮೃತದೇಹದ ಶವಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು.



ಎಸ್ಪಿ ಬಿ. ನಿಖಿಲ್


ಡಿವೈಎಸ್ಪಿ ಎಂ.ಹೆಚ್. ನಾಗ್ತೆ

**ಆರೋಪಿ ಕಾರ್ಮಿಕನ ಬಂಧನ**

ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡರ ಕೊಲೆಗೆ ಸಂಬಂಧಿಸಿದಂತೆ ಕಂಪನಿಯ ಪ್ರೊಡಕ್ಷನ್ ಮ್ಯಾನೇಜರ್ ಆರ್. ಮಧುಸೂದನ್‌ರವರು ತನಗೆ ಫೋನ್ ಮಾಡಿ ಬ್ಲಾಕ್‌ಮೇಲ್ ಮಾಡಿರುವ ವ್ಯಕ್ತಿಯ ಬಗ್ಗೆ ತಿಳಿಸಿ ದೂರು ನೀಡಿದ ಹಿನ್ನೆಲೆ ಹಾಗೂ ಫ್ಯಾಕ್ಟರಿಯಲ್ಲಿ ಕೆಲಸ ಮಾಡುವ ಕೂಲಿ ಕಾರ್ಮಿಕನೊಬ್ಬ ರಾತ್ರಿ ಕೆಲಸ ಮಾಡುತ್ತಿದ್ದವನು ನಾಪತ್ತೆಯಾಗಿದ್ದು, ಅವನ ಬಗ್ಗೆ ಅನುಮಾನ

☞ 5


ಪಿಐ ಪಿ.ಬಿ. ಮಂಜು


ಪಿಎಸ್‌ಐ ಹೇಮಂತ್‌ಕುಮಾರ್



ಪಿಳ್ಳಪ್ಪಗೌಡನ ಮೃತದೇಹ


ಶವವನ್ನು ಎಸೆದಿರುವ ಸ್ಥಳವನ್ನು ಪರಿಶೀಲಿಸುತ್ತಿರುವ ಪಿಎಸ್‌ಐ ಸುನಿತಾದೇವಿ


ಫ್ಯಾಕ್ಟರಿಯ ಕಾರ್ಮಿಕರನ್ನು ವಿಚಾರೆ ಮಾಡುತ್ತಿರುವ ಪಿಐ ಮಂಜುರವರು

4

ಇರುವುದರಿಂದ ತಲೆಮರೆಸಿಕೊಂಡಿರುವ ಆರೋಪಿಯ ಪತ್ತೆಗಾಗಿ ಎಸ್ಪಿ ಬಿ. ನಿಖಿಲ್ ಮತ್ತು ಡಿವೈಎಸ್ಪಿ ನಾಗ್ತೆವರ ಮಾರ್ಗದರ್ಶನದಲ್ಲಿ ವೇಮಗಲ್ ಪೊಲೀಸ್ ಆಣೆ ಪಿಐ ಬಿ.ಪಿ. ಮಂಜುರವರ ನೇತೃತ್ವದಲ್ಲಿ ಪಿಎಸ್‌ಐಗಳಾದ ಆರ್. ಹೇಮಂತ್‌ಕುಮಾರ್ ಮತ್ತು ಸುನೀತಾ ದೇವಿ, ಎಎಸ್‌ಐ ನಾರಾಯಣಸ್ವಾಮಿ, ಸಿಬ್ಬಂದಿ ವರ್ಗದವರಾದ ಹೆಚ್‌ಸಿ ಸುರೇಶ್‌ಕುಮಾರ್, ಪಿಸಿಗಳಾದ ಮಹೇಶ್‌ಕುಮಾರ್, ಹನುಮಂತ, ರಫೀಕ್ ಅಹ್ಮದ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಬಿಹಾರ್ ಮೂಲದ ಟಿಂಕುಕುಮಾರ್ (21) ಬಗ್ಗೆ ಮಾಹಿತಿ ಕಲೆ ಹಾಕಿದ ಪೊಲೀಸ್ ಬಾತ್ಮೀದಾರರು ರಾಮಸಂದ್ರದಿಂದ ಬೆಂಗಳೂರು ಕಡೆಗೆ ಹೋಗಲು ಬಸ್ಸಿಗಾಗಿ ಕಾದಿರವ ಬಗ್ಗೆ ಮಾಹಿತಿಯನ್ನು ಪಡೆದು ಅದರಂತೆ ಕ್ರೈಂ ತಂಡವು ಆರೋಪಿ ಕೂಲಿ ಕಾರ್ಮಿಕ ಟಿಂಕುಕುಮಾರ್‌ನನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ ನಾನು ಕಳೆದ ಎರಡು ತಿಂಗಳಿನಿಂದ ನರಸಾಪುರ ಕೈಗಾರಿಕಾ ಪ್ರದೇಶದಲ್ಲಿನ ಹೇಮಾ ಎಂಟರ್ ಪ್ರೈಂಸಸ್ ಕೈಗಾರಿಕೆಯಲ್ಲಿ ಕೂಲಿ ಕಾರ್ಮಿಕನಾಗಿ ಕೆಲಸ ಮಾಡುತ್ತಿರುತ್ತೇನೆ. ನಾನು ಕೆಲಸ ಮಾಡುವ ಕಂಪನಿಯಲ್ಲಿ ರಾತ್ರಿ ವೇಳೆಯಲ್ಲಿ ಪಿಳ್ಳೇಗೌಡ ಎಂಬುವರು ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿರುತ್ತಾರೆ. ಕಳೆದ ಇಪ್ಪತ್ತ



ಕೃತ್ಯ ನಡೆದ ಸ್ಥಳವನ್ನು ಪರಿಶೀಲಿಸುತ್ತಿರುವ ಪಿಐ ಮಂಜುರವರು

ದಿನಗಳಿಂದ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡನು ರಾತ್ರಿ ವೇಳೆ ನಾನು ಕೆಲಸಕ್ಕೆ ಬಂದ ಸಮಯದಲ್ಲಿ ನನ್ನನ್ನು ಅನಾವಶ್ಯಕವಾಗಿ ಕನ್ನಡ ಮತ್ತು ಅಲ್ಪಸ್ವಲ್ಪ ಹಿಂದಿ ಭಾಷೆ



ಮೃತ ಪಿಳ್ಳೇಗೌಡನಿಗೆ ಸೇರಿಗೆ ಸೆಕ್ಯೂರಿಟಿ ರೂಂನಲ್ಲಿರುವ ವಸ್ತುಗಳು

ಯಲ್ಲಿ ಲೇ ಗಾಂಡ್, ಚೂತಿಯ, ಬಿಹಾರಿ ಇತ್ಯಾದಿಯಾಗಿ ಬೈಯುತ್ತಿದ್ದರು. ನಾನು ಆಗಾಗ ಆ ರೀತಿ ನನ್ನನ್ನು ಬೈಯಬೇಡ ಎಂದು ಹೇಳುತ್ತಿದ್ದೆನು. ಆದರೂ ಸಹ ಸೆಕ್ಯೂರಿಟಿ ಗಾರ್ಡ್ ರಾತ್ರಿ ವೇಳೆ ಕೆಲಸಕ್ಕೆ ಬಂದ ಸಮಯ ದಲ್ಲಿ ನಾನು ಫ್ಯಾಕ್ಟರಿಯ ರೂಂನಲ್ಲಿದ್ದ ಸಮಯದಲ್ಲಿ ಲೈಟ್‌ಗಳನ್ನು ಆನ್ ಮಾಡುವಂತೆ ಅದೇ ರೀತಿ ನನ್ನನ್ನು ಬೈಯುತ್ತಿದ್ದನು. ಆ ಸಮಯದಲ್ಲಿ ಕೋಪ ಬಂದಿದ್ದ, ಬಂದಿದ್ದು, ತನ್ನ ಪಾಡಿಗೆ ತಾನು ಹೊರಗಡೆ ಹೋಗಿ ಪಾನಿಪೂರಿ ತಿಂದು ಮತ್ತೆ ಫ್ಯಾಕ್ಟರಿಗೆ ಹೋಗಿ ಓಡಾಡಿ ಕೊಂಡಿದ್ದೆನು. ರಾತ್ರಿ ಸುಮಾರು 8.20 ಗಂಟೆ ಸಮಯ ದಲ್ಲಿ ನನಗೆ ಹೊಟ್ಟೆ ನೋಯುತ್ತಿದ್ದ ಕಾರಣ ಇನೋ ಪ್ಯಾಕೇಟ್ ತೆಗೆದುಕೊಂಡು ಬರಲು ಪುನಃ ಫ್ಯಾಕ್ಟರಿಯಿಂದ ಹೊರಗಡೆ ಹೋಗುತ್ತಿದ್ದಾಗ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡನು ಹೇ ಎಲ್ಲೋ ಹೋಗುತ್ತಿದ್ದಿಯಾ ಎಂದು ಹಿಂದಿ ಭಾಷೆಯಲ್ಲಿ ಕೇಳಿದನು. ಆಗ ನಾನು ಹೊಟ್ಟೆ ನೋಯ್ತಾ ಇದೆ ಹೊರಗಡೆ ಹೋಗಿ ಇನೋ ಪ್ಯಾಕೇಟ್‌ನ್ನು ತೆಗೆದುಕೊಂಡು ಬರ್ತೀನಿ ಎಂದು ಹೇಳಿದೆನು. ಅದಕ್ಕೆ ಪಿಳ್ಳೇಗೌಡನು ಎಷ್ಟು ಸಲ ಹೋಗ್ತಾ ಇದ್ದೀಯಾ, ಬರ್ತಾ ಇದ್ದೀಯಾ ಗಾಂಡೂ ಎಂದು ಬೈದನು.

ಇದರಿಂದ ನನಗೆ ಕೋಪ ಬಂದು ಏನೂ ಮಾತನಾಡದೆ ಕಂಪನಿಗೆ ಸೇರಿದ ಟಿವಿಎಸ್ ಹೆವ್ವಿ ಡ್ಯೂಟಿ ದ್ವಿಚಕ್ರ ವಾಹನವನ್ನು ಚಾಲನೆ ಆಡಿಕೊಂಡು ಫ್ಯಾಕ್ಟರಿಯಿಂದ ಹೊರಗಡೆ ಹೋಗಿ ಇಂಡೋ ಸರ್ಕಲ್‌ನಲ್ಲಿರುವ ಬಾರ್‌ನಲ್ಲಿ ಮದ್ಯಪಾನ ಮಾಡಿ ಅಲ್ಲಿಂದ ರಾತ್ರಿ ಸುಮಾರು 9.50 ಗಂಟೆ ವೇಳೆಗೆ ಫ್ಯಾಕ್ಟರಿಗೆ ಹೋದಾಗ ಗೇಟಿಗೆ ಬೀಗ ಹಾಕಿತ್ತು. ಆಗ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡನಿಗೆ ಗೇಟ್ ತೆಗೆಯುವಂತೆ ಕೇಳಿದಾಗ ಗೇಟು ತೆಗೆಯುವುದಿಲ್ಲ ಹೋಗೋ ಲೇ ಚೂತಿಯ ಎಂದು ಬೈದನು. ಪುನಃ ನಾನು ಇನ್ನೊಂದು ಬಾರಿ ಹೊರಗಡೆ ಹೋಗುವುದಿಲ್ಲ ತೆಗಿ ಎಂದು ಕೇಳಿಕೊಂಡೆನು. ಆಗ ಪಿಳ್ಳೇಗೌಡ ಬೈದಾಡಿಕೊಂಡು ಗೇಟನ್ನು ಓಪನ್ ಮಾಡಿದನು. ಆಗ ನಾನು ಒಳಗೆ ಹೋಗಿ ಟಿವಿಎಸ್ ಗಾಡಿಯನ್ನು ಕಾಂಪೌಂಡ್ ಒಳಗಡೆ ನಿಲ್ಲಿಸಿ ರೂಂ ಒಳಗಡೆ ಹೋಗಿ ತನ್ನ ಹೆಂಡತಿಗೆ ಫೋನ್ ಮಾಡಿ ಯೋಗಕ್ಷೇಮ ವಿಚಾರಿಸುತ್ತಾ ಸ್ವಲ್ಪ ಹೊತ್ತು ಮಾತನಾಡಿದ ನಂತರ ಸೆಕ್ಯೂರಿಟಿ ರೂಂ ಬಳಿಗೆ ಹೋದಾಗ ಪಿಳ್ಳೇಗೌಡರು ಕಾಂಪೌಂಡ್‌ನಲ್ಲಿ ಬಿದ್ದಿರುವ ಪೇಪರ್ ಚೂರು ಮತ್ತು ಕಸಕಡ್ಡಿಯನ್ನು ಎತ್ತುವಂತೆ ಹೇಳಿದಾಗ ನಾನು ಎತ್ತುವುದಿಲ್ಲ ಎಂದು ಹೇಳಿದೆನು. ಆಗ ಪಿಳ್ಳೇಗೌಡರು ನೀನು ಮಾಡಲಿಲ್ಲ ಎಂದರೆ ಬಿಹಾರ್‌ನಿಂದ ಬಂದ ನಿಮ್ಮಪ್ಪ ಮಾಡ್ತಾನಾ ಎಂದು ಕೈಯಿಂದ ನನ್ನ ಕುತ್ತಿಗೆಗೆ ಎರಡು ಏಟು ಹೊಡೆದನು. ಆಗ ಕೋಪಗೊಂಡ ನಾನು ಪಿಳ್ಳೇಗೌಡರಿಗೊಂದು ಗತಿಕಾಣಿಸ ಬೇಕೆಂದು ನಿರ್ಧರಿಸಿದ್ದೆನು.

ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡನನ್ನು ಏನಾದರೂ ಮಾಡಿ ಮುಗಿಸಬೇಕೆಂದು ನಿರ್ಧರಿಸಿದೆನು.

ಅಕ್ಟೋಬರ್ 23ರಂದು ಬೆಳಿಗ್ಗೆ ಎಂದಿನಂತೆ ಸುಮಾರು 10 ಗಂಟೆಯಿಂದ ಸಂಜೆ 5.30 ಗಂಟೆಯವರೆಗೂ ನಾನು ಫ್ಯಾಕ್ಟರಿಯಲ್ಲಿ ಕೆಲಸ ಮಾಡಿ ನಂತರ ಫ್ಯಾಕ್ಟರಿಯ ರೂಂನಲ್ಲಿದ್ದೆನು. ಆನಂತರ ಸಂಜೆ 6.30 ಗಂಟೆ ಸಮಯದಲ್ಲಿ ನಾನು ಪಾನಿಪೂರಿ ತಿನ್ನುವ ಸಲುವಾಗಿ, ಫ್ಯಾಕ್ಟರಿಯ ರೂಂನಿಂದ ಹೊರಗಡೆ ಬಂದಾಗ ಆ ವೇಳೆಗೆ ಸೆಕ್ಯೂರಿಟಿ ಗಾರ್ಡ್ ಪಿಳ್ಳೇಗೌಡನು ಕೆಲಸಕ್ಕೆ



ಪ್ರೊಡಕ್ಷನ್ ಮ್ಯಾನೇಜರ್ ಮಧುಸೂದನ್



ಗಿಡಗಳ ಪೊದೆಯಲ್ಲಿ ಬಿಸಾಡಿದೆನು. ಆನಂತರ ಯಾರಿಗೂ ಅನುಮಾನ ಬರದ ರೀತಿ ಬ್ಲಾಕ್‌ಮೇಲ್ ತಂತ್ರವನ್ನು ಉಪಯೋಗಿಸಿ ಹಣದೊಂದಿಗೆ ಊರು ಸೇರಬೇಕೆಂದು ಪ್ಲಾನ್ ಮಾಡಿ ತಕ್ಷಣ ಪಿಳ್ಳೇಗೌಡನ ಮೊಬೈಲ್ ಫೋನನ್ನು ತೆಗೆದಕೊಂಡು ಅದರಿಂದ ಫ್ಯಾಕ್ಟರಿಯ ಪ್ರೊಡಕ್ಷನ್ ಮ್ಯಾನೇಜರ್ ಮಧುಸೂದನ್ ರವರ ಮೊಬೈಲ್ ಕರೆ ಮಾಡಿ ಪಾಂಚ್ ಲಾಕ್ ದೇನೇ ನಹಿತೋ ಆಪ್ಕೋ, ಸಕ್ಯೂರಿಟಿಕೋ ಮಾರ್ ದಾಲೆಂಗೆ ಎಂದು ಹೇಳಿ ಕರೆಯನ್ನ ಕಟ್ ಮಾಡಿದೆನು.



ಹೇಮಾ ಎಂಟರ್‌ಪ್ರೈಸಸ್ ಫ್ಯಾಕ್ಟರಿ



ಫ್ಯಾಕ್ಟರಿ ಮುಂದೆ ಕುಳಿತಿರುವ ಕಾರ್ಮಿಕರ



ಸೆಕ್ಯೂರಿಟಿ ರೂಂನ ನೆಲದ ಮೇಲೆ ರಕ್ತದ ಕಲೆಗಳಿರುವುದು

## ಶೆಲ್ಟರ್‌ನ ಹ್ಯಾಂಡಲ್‌ನಿಂದ ಹೊಡೆದು ಕೊಲೆ

ಫ್ಯಾಕ್ಟರಿ ಬಂದು ಹೋಗುವಾಗ ಪಿಳ್ಳೇಗೌಡ ಅವಾಚ್ಯ ಶಬ್ದದಿಂದ ಬೈದು ಕಿಚಾಯಿಸುತ್ತಾ ಇರುವುದನ್ನು ನೋಡಿ ಸಹಿಸಲಾರದೆ ಸೆಕ್ಯೂರಿಟಿ ರೂಂನಲ್ಲಿದ್ದ ಕಬ್ಬಿಣದ ರೋಲಿಂಗ್ ಶೆಟ್ಟರ್‌ನ ಹ್ಯಾಂಡಲ್‌ನ್ನು ಎತ್ತಿಕೊಂಡು ಪಿಳ್ಳೇಗೌಡನ ತಲೆಗೆ ಜೋರಾಗಿ 15-20 ಬಾರಿ ಹೊಡೆದೆನು. ಆಗ ಅವನು ಕುಸಿದು ಕೆಳಗಡೆ ಬಿದ್ದು ಬಿಟ್ಟನು. ಹಲವಾರು ಬಾರಿ ತಲೆಗೆ ಹೊಡೆದಿದ್ದರಿಂದ ಸ್ಥಳದಲ್ಲಿಯೇ ಮೃತ ಪಟ್ಟನು. ಆ ಸಮಯದಲ್ಲಿ ನನ್ನ ಬಟ್ಟೆ ಮೇಲೆ ಸಹ ರಕ್ತ ಬಿದ್ದಿದ್ದು, ನಂತರ ನನ್ನ ಏಲೆ ಅನಮಾನ ಬಾರದೆ ಇರಲಿ ಎನ್ನುವ ಉದ್ದೇಶದಿಂದ ಪಿಳ್ಳೇಗೌಡನ ಮೃತದೇಹವನ್ನು ಸೆಕ್ಯೂರಿಟಿ ರೂಂ ನಿಂದ ಹೊರಗಡೆ ಎಳೆದಕೊಂಡು ಹೋಗಿ ರಸ್ತೆಬದಿಯ ಗಿಡಗಳ ಪೊದೆಯ ಮಧ್ಯದಲ್ಲಿದ್ದು ಚರಂಡಿಯಲ್ಲಿ ಹಾಕಿದ್ದೆನು. ನಂತರ ಸೆಕ್ಯೂರಿಟಿ ರೂಂನಲ್ಲಿ ಬಿದ್ದಿದ್ದ ರಕ್ತದ ಕಲೆಗಳನ್ನು ಪಿಳ್ಳೇಗೌಡನ ಶೂನ ಸಾಗ್ಸನಿಂದ ಒರೆಸಿ ಶೂ ಮತ್ತು ಸಾಗ್ಸನ್ನು



ರೈಟರ್ ಸುರೇಶ್‌ಕುಮಾರ್

ಪುನಃ ಮಧುಸೂದನ್‌ರವರು ಹಲವು ಸಲ ಪಿಳ್ಳೇಗೌಡರ ಮೊಬೈಲ್‌ಗೆ ಕರೆ ಮಾಡಿದ್ದು ನಾನು ಕಾಲನ್ನು ರಿಸೀವ್ ಮಾಡದೆ ಭಯವಾಗಿ ಫೋನ್‌ನನ್ನು ಸ್ವಿಚ್ ಆಫ್ ಮಾಡಿ ತನ್ನ ರೂಂನಲ್ಲಿರುವ ಚೀಲದಲ್ಲಿ ಉಚ್ಚಿಟ್ಟ ತನ್ನ ಮೇಲೆ ಯಾರಿಗೂ ಅನುಮಾನ ಬಾರದಂತೆ ಫ್ಯಾಕ್ಟರಿಯಲ್ಲಿ ಇದ್ದೆನು. ಮರುದಿನ ಬೆಳಿಗ್ಗೆ ಮ್ಯಾನೇಜರ್ ಮಧುಸೂದನ್‌ರವರು ಫ್ಯಾಕ್ಟರಿಗೆ ಬಂದಿದ್ದು, ಆ ವೇಳೆಗೆ ಪೊಲೀಸರು ಸಹ ಬಂದಿದ್ದ, ಪೊದೆಯಲ್ಲಿರುವ ಶವ ಹೊರಗೆ ಬಂದರೆ ನನ್ನನ್ನು ಹಿಡಿದುಕೊಳ್ಳಬಹುದೆಂದು ಅಲ್ಲಿಂದ ಹೋಗಿ ನರಸಾಪುರದಲ್ಲಿ ಅಡಗಿ ಕುಳಿತಿದ್ದು, ಸಂಜೆ ರಾಮಸಂದ್ರ ಬೌಂಡರಿಗೆ ಹೋಗಿ ಅಲ್ಲಿಂದ ಬೆಂಗಳೂರಿಗೆ ಹೋಗಲು ಬಸ್ಸಿಗಾಗಿ ಕಾದಿದ್ದಾಗ ಸಿಕ್ಕಿ ಹಾಕಿಕೊಂಡ ಬಗ್ಗೆ ಹೇಳಿದನು. ಹೇಳಿಕೆ ಪಡೆದ ನಂತರ ಆರೋಪಿಯನ್ನು ಘಟನಾ ಸ್ಥಳಕ್ಕೆ ಕರೆದುಕೊಂಡು ಹೋಗಿ ಪರಿಶೀಲಿಸಿದ ಮೇಲೆ ಪೊಲೀಸರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.



ಈ ಪೊದೆಯಲ್ಲಿ ಹೆಣ ಹಾಕಿದ್ದು



ಕೃತ್ಯ ನಡೆದಿರುವ ಸ್ಥಳದಲ್ಲಿ ಸೇರಿರುವ ಗ್ರಾಮಸ್ಥರು



ಫ್ಯಾಕ್ಟರಿ ಮುಂದೆ ಕುಳಿತಿರುವ ಕಾರ್ಮಿಕರು

# ನಿಷ್ಕ್ರಿಯವಾಗಿರುವ ಹೈಕಮಾಂಡ್
## ಸಮಾಜವಾದವನ್ನು ಸಮಾಧಿ ಮಾಡಿಬಿಟ್ರಾ ಸಿದ್ದರಾಮಯ್ಯ!

✍ ಸೋಮಶೇಖರ್ ಗಾಂಧಿ

ಕರ್ನಾಟಕದ ರಾಜ್ಯದ ರಾಜಕೀಯದಲ್ಲಿ ಮತ್ತೆ ಭಿನ್ನಮತ ಭುಗಿಲೆದ್ದಿದೆ ಆಡಳಿತ ರೂಢಕಾಂಗ್ರೆಸ್ ಪಕ್ಷದಲ್ಲಿ ಯಾವ ಗಳಿಗೆಯಲ್ಲಿ ಏನಾಗುತ್ತದೆ ಎಂಬ ಕುತೂಹಲ ಹುಟ್ಟಿದೆ. 136 ಶಾಸಕರು ಗೆದ್ದಿರುವ ಕಾಂಗ್ರೆಸ್ ಪಕ್ಷದಲ್ಲಿ ಎಲ್ಲವೂ ಅಯೋಮಯ.ಕಾಂಗ್ರೆಸ್ ಶಾಸಕರ ಎದೆಯಲ್ಲಿ ನಡುಕ ಒಂದು ಕಡೆ ಟ್ರಿಬಲ್ ಶೂಟರ್ ಎಂದೇ ಖ್ಯಾತಿಯಾಗಿರುವ ಡಿಸಿಎಂ ಡಿ.ಕೆ. ಶಿವಕುಮಾರ್ ಅವರಿಗೆ ಸಿಎಂ ಸ್ಥಾನವನ್ನು ಸಿದ್ದರಾಮಯ್ಯ ಬಿಟ್ಟು ಕೊಡುತ್ತಾರ ಎಂಬ ಪ್ರಶ್ನೆಗೆ ಎಲ್ಲರನ್ನು ಕಾಡುತ್ತಿದೆ.



ಮತ್ತೊಂದು ಕಡೆ ಸಿದ್ದರಾಮಯ್ಯ ಯಾವುದೇ ಕಾರಣಕ್ಕೂ ಬಿಟ್ಟು ಕೊಳ್ಳುವುದಿಲ್ಲ ಎಂಬ ವಾದವನ್ನು ಅವರ ಆಪ್ತ ಬೆಂಬಲಿಗರು ಮುಂದಿಟ್ಟಿದ್ದಾರೆ ಈ ಗೊಂದಲಗಳ ನಡುವೆ ಶಾಸಕರು ಕಂಗಲಾಗಿದ್ದಾರೆ ಈಗಾಗಲೇ ಎರಡುವರೆ ವರ್ಷಗಳನ್ನು ಪೂರೈಸಿರುವ ಕಾಂಗ್ರೆಸ್ ಪಕ್ಷದಲ್ಲಿ ಯಾರನ್ನೇ ಕೇಳಿದರೂ ಏನಾಗಬಹುದು ಎಂಬ ಕೌತುಕ ಮತ್ತು ಆಶ್ಚರ್ಯವನ್ನು ವ್ಯಕ್ತಪಡಿಸುತ್ತಿದ್ದಾರೆ.

ಏನೇ ಆಗಲಿ ಸಿದ್ದರಾಮಯ್ಯನವರು ಎರಡು ವರೆ ವರ್ಷಗಳ ನಂತರ ಅಧಿಕಾರವನ್ನು ಬಿಟ್ಟು ಕೊಡುತ್ತೇನೆ ಎಂದು ಮಾತು ಕೊಟ್ಟಿದ್ದರಂತೆ. ಅದಕ್ಕೆ ಸಾಕ್ಷಿ ಡಿ.ಕೆ. ಸುರೇಶ್ ಕೊಟ್ಟ ಮಾತಿಗೆ ತಪ್ಪಬಾರದು ಎಂದು ಡಿ.ಕೆ. ಸುರೇಶ್ ಬಹಿರಂಗವಾಗಿಯೇ ಹೇಳಿಕೆ ನೀಡಿದ್ದರು.

ಸಮಾಜವಾದವನ್ನು ಸಮಾದಿ ಮಾಡಿಬಿಟ್ರ ಸಿದ್ದರಾಮಯ್ಯ ಸಮಾಜವಾದ.ಲೋಹಿಯಾವಾದ. ಕಮ್ಯುನಿಸ್ಟ್ ಶೈಲಿಯಲ್ಲಿ ಕಾಲ ತಳ್ಳುತ್ತಿದ್ದ. ಸಿದ್ದರಾಮಯ್ಯ ಸಿ.ಎಂ. ಆದ ಕೂಡಲೇ ಬದಲಾದರು. ಹಿಂದುಳಿದ ವರ್ಗದ ನಾಯಕ ದೇವರಾಜ ಅರಸ್ ರವರನ್ನ ಮೀರಿ ನಾನು ಬೆಳೆಯಬೇಕೆಂದು ತೀರ್ಮಾನಿಸಿ ಸಮಾಜವಾದವನ್ನ ಸಮಾದಿ ಮಾಡಿಬಿಟ್ರ ಸಿದ್ದರಾಮಯ್ಯ ಎಂಬ ಮಾತು ಎಲ್ಲಾ ಕಡೆ ಕೇಳಿಬರುತ್ತಿದೆ.

1983 ಸಿದ್ದರಾಮಯ್ಯ ಇಂದು ಇಲ್ಲ. ಅವರ ಮಾತುಕತೆ, ನಡೆ, ನುಡಿ, ಎಲ್ಲವೂ ಬದಲಾಗಿದೆ. ದೇವರಾಜ ಅರಸ್ ಅಂದು ಹಾವನೂರ್ ವರದಿಯನ್ನ ಅನುಷ್ಟಾನಗೊಳಿಸಿದ್ದರು. ಮೇಲ್ವರ್ಗದವರನ್ನ ಸಮಾದಿ ಮಾಡಲು ಹೋಗಿ ತಮ್ಮ ಕುಟುಂಬವನ್ನೆ ಸಮಾದಿ ಮಾಡಿದ್ರು. ಹಿಂದುಳಿದ ವರ್ಗದ ನಾಯಕ ದೇವರಾಜ ಅರಸ್ ಮನೆ ಹರಾಜಿಗೆ ಬಂದಾಗ ಸಿದ್ದರಾಮಯ್ಯ ಕಣ್ಣು ಮುಚ್ಚಿ ಕುಳಿತಿದ್ದರು. ಇಚ್ಚಾಶಕ್ತಿ ಇದ್ದಿದ್ದರೆ ಅರಸ್ ಮನೆಯನ್ನ ಸ್ಮಾರಕ ಮಾಡಬಹುದಿತ್ತು. ಆ ಕೆಲಸ ಮಾಡಲಿಲ್ಲ. ಅರಸು ಮನೆಯನ್ನು ಕೊಂಡವರು ಶಾಮನೂರು ಶಿವಶಂಕರಪ್ಪ.



ಸಿದ್ದರಾಮಯ್ಯ ಮಾತನಾಡಿದರೆ ಸಾಕು ನಾನು ಗಾಂಧಿ, ಬುದ್ದ, ಬಸವಣ್ಣನವರ ಫಾಲೋವರ್ಸ್ ಅಂತ ಹೇಳುತ್ತ ವೀರಶೈವ ಲಿಂಗಾಯತ ಸಮಾಜವನ್ನು ಚೂರು ಚೂರು ಮಾಡಿದ್ರು. ಅತ್ತ ಕಡೆ ಒಕ್ಕಲಿಗ ಸಮುದಾಯವನ್ನು ಡಿ.ಕೆ. ಶಿವಕುಮಾರ್ ರವರ ಮುಖಾಂತರ ಒಡಕು ಮೂಡಿಸಿದ್ದರು.

ಇನ್ನೊಂದು ಕಡೆ ಪರಿಶಿಷ್ಟಜಾತಿಗಳ ನಡುವಿನ ಒಳಮೀಸಲಾತಿಯ ಬೇಗುದಿಯನ್ನ ತಣ್ಣಗೆ ಮಾಡಲಿಲ್ಲ. ಈಗ ನಾಯಕ ಸಮುದಾಯದ ಸತೀಶ್ ಜಾರಕಿಹೊಳಿಯನ್ನ ಬೆಂಬಲಿಸಲು ಹೊರಟಿದ್ದಾರೆ. ಕುರುಬ ಸಮುದಾಯದ ಹಾಸ್ಟೆಲ್‌ನ್ನ ಕಾಮಗಾರಿ ಆರಂಭದ ಪೂಜೆಯಲ್ಲಿ ನಾನು ಕುರುಬ ಸಮುದಾಯವನ್ನ ಉದ್ದಾರ ಮಾಡಿದ್ದು ಎಂದು ಹೇಳಿಕೆಯನ್ನ ನೀಡಿದ್ದರು. ಜಾತಿಗಣತಿ ವಿಷಯದಲ್ಲಿ ಎಲ್ಲಾ ಕುರುಬರು ಕುರುಬರೆಂದೇ ಬರೆಯಿಸಿ ಎಂದು ಆದೇಶ ನೀಡಿದ್ದರು.



ರಾಜ್ಯದಲ್ಲಿ ಪ್ರಬಲ ಸಮಾಜವಾದ ಲಿಂಗಾಯತ ಸಮುದಾಯದಲ್ಲಿ ಒಳಪಂಗಡಗಳ ನಡುವೆ ಕಂದಕ ಸೃಷ್ಟಿಸಿದ್ದರು. ಇದೆಲ್ಲ ಸಮಾಜವಾದದ ಸಿದ್ದರಾಮಯ್ಯನವರಿಂದ ಮಾತ್ರ ಸಾಧ್ಯ. ಅಧಿಕಾರ ಹಸ್ತಾಂತರ ಮಾಡಿ . ಸಜ್ಜನರಾಗ್ತರ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಆರಂಭದಲ್ಲಿ. ಹೈಕಮಾಂಡ್ ಮುಂದೆ ನಾನು ಮೊದಲು ಮುಖ್ಯಮಂತ್ರಿಯಾಗುತ್ತೇನೆ. ಎರಡೂವರೆ ವರ್ಷದ ನಂತರ ಒಂದು ಗಳಿಗೆಯೂ ಉಳಿಯುವುದಿಲ್ಲ ಎಂದು ಹೇಳಿಈಗ ಮತ್ತೆ ನಾನೇ ಮುಂದಿನ ಬಜೆಟ್ ಮಂಡಿಸುತ್ತೇನೆ.ಎಂದು ಹೇಳುತ್ತಿರುವುದು ನೋಡಿದರೆ, ಅಧಿಕಾರ ತ್ಯಜಿಸಲು ಸಿದ್ದರಾಮಯ್ಯ ಸಿದ್ದರಿಲ್ಲ. ಕೊಟ್ಟ ಮಾತಿಗೆ ತಪ್ಪಿ ಮಾತು ತಪ್ಪಿದ ರಾಜಕಾರಣಿ ಎಂಬ ಅಪಖ್ಯಾತಿ ಪಡೆಯುತ್ತಾರ ನೋಡಬೇಕು. ಕುಮಾರಸ್ವಾಮಿಯ ನಾಟಕದ ಕಥೆಯನ್ನ ಸಿದ್ದರಾಮಯ್ಯ ಮುಂದುವರೆಸುತ್ತಾರ ಅಥವ ಅಧಿಕಾರ ಹಸ್ತಾಂತರ ಮಾಡಿ ಕರ್ನಾಟಕದ ರಾಜಕೀಯ ಇತಿಹಾಸದಲ್ಲಿ ಉಳಿಯುತ್ತಾರ.



### ಹೈಕಮಾಂಡ್ ನಿಷ್ಕ್ರಿಯ

130 ವರ್ಷಕ್ಕೂ ಹೆಚ್ಚು ಇತಿಹಾಸವಿರುವ ಕಾಂಗ್ರೆಸ್ ಪಕ್ಷದಲ್ಲಿ ಒಂದು ಕಾಲದಲ್ಲಿ ಹೈಕಮಾಂಡ್ ಪವರ್ ಫುಲ್ ಆಗಿತ್ತು.ದೆಹಲಿಯ ಗದ್ದುಗೆಯ ಮಹಾರಾಣಿ ಹೇಳಿದಂತೆ ಘಟಾನುಘಟಿ ನಾಯಕರುಗಳು ಕೇಳುತ್ತಿದ್ದರು. ಆದರೆ ಪರಿಸ್ಥಿತಿ ಬದಲಾಗಿದೆ. ಹೈಕಮಾಂಡ್‌ನ ನಾಯಕಿ ಸೋನಿಯಾ ಮತ್ತು ಪುತ್ರ ರಾಹುಲ್ ಗಾಂಧಿರವರ ಹಿಡಿತದಲ್ಲಿ ಸಿದ್ದರಾಮಯ್ಯ ಇಲ್ಲ. ರಾಜ್ಯದಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನ ವಿಸ್ತರಿಸಿ ಕೊಂಡಿರುವ ಇವರನ್ನು ಕೇಳುವ ತಾಕತ್ತು ವರಿಷ್ಟರಿಗೆ ಇಲ್ಲ. ಹಿಂದುಳಿದ ವರ್ಗದ ನಾಯಕನಾಗಿ ದೇಶದಲ್ಲಿಯೇ ಗುರುತಿಸಿಕೊಂಡಿರುವ ಸಿದ್ದರಾಮಯ್ಯನನ್ನ ಪಟ್ಟದಿಂದ ಕೆಳಗೆ ಇಳಿಸಲು ಆಗುತ್ತಿಲ್ಲ. ಮತ್ತೊಂದು ಕಡೆ ಡಿ.ಕೆ. ಶಿವಕುಮಾರ್‌ರವರನ್ನ ತಡೆಯುವ ಧೈರ್ಯವೂ ಇಲ್ಲ.

ನಮ್ಮ ಕರ್ನಾಟಕದವರೇ ಆದ ಮಲ್ಲಿಕಾರ್ಜುನ ಖರ್ಗೆರವರಿಗೆ ಜವಾಬ್ದಾರಿ ವಹಿಸಿ ತೆಪ್ಪಗಾಗಿದ್ದಾರೆ. ಖರ್ಗೆ ಸಾಹೇಬರು ಗಟ್ಟಿ ನಿರ್ಧಾರ ತೆಗೆದುಕೊಳ್ಳಲು ಆಗುತ್ತಿಲ್ಲ. ಗೊಂದಲದ ಗೂಡಾಗಿದೆ ಕಾಂಗ್ರೆಸ್ ಶಾಸಕರ ಪರಿಸ್ಥಿತಿ. ಲಿಂಗಾಯತರ ಶಾಸಕರ ಮತ್ತು ಒಕ್ಕಲಿಗ ಶಾಸಕರ ನಡೆ ಏನು? ಕಾಂಗ್ರೆಸ್‌ನಲ್ಲಿ 36 ಜನ ಕಾಂಗ್ರೆಸ್ ನಿಂದ ಶಾಸಕರಾಗಿ ಆಯ್ಕೆಯಾಗಿದ್ದಾರೆ. 25 ಶಾಸಕರು ಒಕ್ಕಲಿಗ ಸಮಾಜದಿಂದ ಗೆದ್ದಿದ್ದಾರೆ. ಸಿದ್ದರಾಮಯ್ಯ ಅಹಿಂದ ಪರ ನಿಂತಿರುವ ಕಾರಣದಿಂದ ಈ ಎರಡು ಸಮಾಜದ ಶಾಸಕರುಗಳ ನಡೆ ನಿಗೂಡವಾಗಿದೆ.



ಲಿಂಗಾಯತರ.ಮತ್ತು ಒಕ್ಕಲಿಗರ ಹಾಗೂ ಕೆಲವು ದಲಿತ ಶಾಸಕರುಗಳು ಡಿ.ಕೆ.ಶಿ. ಪರ ನಿಂತಿದ್ದಾರೆ. 70 ಶಾಸಕರ ಬೆಂಬಲದಿಂದ ಡಿ.ಕೆ.ಶಿ. ಬಿಜೆಪಿಗೆ ಹೊರಟರೇ ಸಿಎಂ ಆಗುವ ಲೆಕ್ಕಚಾರ ಸಹ ನಡೆದಿದೆ. ಈ ಹಿಂದೆ ಯಡಿಯೂರಪ್ಪ ಆಪರೇಷನ್ ಕಮಲಮಾಡಿ ಸಂಪನ್ಮೂಲವನ್ನ ಹಂಚಿ ಬಿಜೆಪಿಯನ್ನು ಅಧಿಕಾರಕೇಕ ತಂದಿದ್ದರು.

ಹೈಕಮಾಂಡ್ ಮತ್ತು ಡಿ.ಕೆ. ಶಿವಕುಮಾರ್ ನಡುವೆ ಸಂಬಂ)ವನ್ನ ಕುದುರಿಸುವವರ್ಯಾರು. ವಿಜಯೇಂದ್ರ, ಆರ್. ಅಶೋಕ್, ಬೊಮ್ಮಾಯಿ, ಜಗದೀಶ್ ಶೆಟ್ಟರ್, ಪ್ರಹ್ಲಾದ್ ಜೋಶಿರವರಿಂದ ಸಾಧ್ಯವ. ವಿ. ಸೋಮಣ್ಣ ಮಧ್ಯಸ್ಥಿಕೆ ವಹಿಸುತ್ತಾರ. ವೀರಶೈವ ಲಿಂಗಾಯತ ಸಮುದಾಯದ ನಾಯಕ. ವಯಸ್ಸಿನಲ್ಲಿ ಹಿರಿಯ. ದೇವೇಗೌಡರ ಮಾನಸಪುತ್ರ. ಹಾಗೂ ಕೇಂದ್ರದ ಮಂತ್ರಿಯಾಗಿರುವ. ವಿ. ಸೋಮಣ್ಣ ಡಿಕೆಶಿ ಮತ್ತು ಹೈಕಮಾಂಡ್ ನಡುವೆ ಮದ್ಯಸ್ಥಿಕೆ ವಹಿಸುವ ಸಾಧ್ಯತೆಗಳಿದೆ.

ಜೆ.ಡಿ.ಎಸ್ ಶಾಸಕರ ಸೆಳೆಯಬೇಕೆಂದರೆ ವಿ. ಸೋಮಣ್ಣ ರವರೇ ಸೂಕ್ತ ಎಂದು ರಾಜಕೀಯ ವಲಯದಲ್ಲಿ ಮಾತಿದೆ. ವಿಸೋಮಣ್ಣ ಅಖಾಡಕ್ಕೆ ಇಳಿಯುವ ಸಾಧ್ಯತೆಗಳಿದೆ. ಎಲ್ಲ ಪಕ್ಷದ ರಾಜಕೀಯ ಮುಖಂಡರ ಜೊತೆ ಉತ್ತಮ್ಮಭಾಂದವ್ಯ ಹೊಂದಿರುವ ಸೋಮಣ್ಣ ಮುಂದಿನ ರಾಜ್ಯದ ರಾಜಕೀಯದಲ್ಲಿ ಮಹತ್ವವಾದ ಪಾತ್ರ ವಹಿಸುತ್ತಾರೆ.

# ಡಿ.ಕೆ.ಶಿ. ಸಿಎಂ ಆದ್ರೆ, ಹೆಚ್‌ಡಿಕೆ ರಾಜಕೀಯ ಅಂತ್ಯ?!

ರಾಜ್ಯ ರಾಜಕೀಯದರಂಗದಲ್ಲಿ ಈಗ ನಡೆಯುತ್ತಿರುವ ಚರ್ಚೆಯ ಕೇಂದ್ರಬಿಂದು ಒಂದೇ....ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾಗುವ ಸಾಧ್ಯತೆ ದಟ್ಟವಾಗಿದೆ! ಈ ಒಂದು ರಾಜಕೀಯ ನಿರ್ಧಾರವು ಕೇವಲ ಕಾಂಗ್ರೆಸ್ ಪಕ್ಷದ ಒಳರಾಜಕೀಯವನ್ನಷ್ಟೇ ಅಲ್ಲ, ರಾಜ್ಯದ ಸಮಗ್ರ ರಾಜಕೀಯ ಸಮೀಕರಣವನ್ನೇ ಬದಲಿಸುವ ಶಕ್ತಿ ಹೊಂದಿದೆ. ಎಚ್.ಡಿ. ಕುಮಾರಸ್ವಾಮಿ ವರ್ಷಗಳಿಂದ ಕರ್ನಾಟಕದಲ್ಲಿ 'ಮೂರನೇ ಆಯ್ಕೆ' ತೃತೀಯ ರಂಗವನ್ನು ಕಟ್ಟಿಕೊಡಿದ್ದರು. ಅವರು ಹಿಂದೆ ಕಾಂಗ್ರೆಸ್, ಬಿಜೆಪಿ ಇಬ್ಬರ ಜೊತೆಯೂ ಮೈತ್ರಿ ಮಾಡಿಕೊಂಡು ಅಧಿಕಾರವನ್ನು ಅನುಭವಿಸಿದವರು.

ಆದರೆ ಡಿ.ಕೆ. ಶಿವಕುಮಾರ್ ಅಧಿಕಾರಕ್ಕೆ ಬಂದರೆ, ಅವರ ನಾಯಕತ್ವ ಕೇವಲ ಕಾಂಗ್ರೆಸ್ ಒಳಗಷ್ಟೇ ಅಲ್ಲ, ರಾಜ್ಯದ ತಾಲೂಕುಗ್ರಾಮ ಮಟ್ಟದ ರಾಜಕೀಯಕ್ಕೂ ದೊಡ್ಡ ಪರಿಣಾಮ ಆಗುತ್ತದೆ. ದಕ್ಷಿಣ ಕರ್ನಾಟಕ ರಾಜಕೀಯದಲ್ಲಿ ಡಿ.ಕೆ.ಶಿ. ಅವರ ಒಡಂಬಡಿಕೆ ಬಲವಾದದ್ದು. ಇದರಿಂದ ಜೆಡಿಎಸ್‌ಗೆ ಇದ್ದ ಪರಂಪರೆಯ ಮತಬ್ಯಾಂಕ್ ಪ್ರತ್ಯಕ್ಷವಾಗಿ ಹಿಂಜರಿಯುವ ಸಾಧ್ಯತೆ. ಡಿ.ಕೆ. ಶಿವಕುಮಾರ್ ಸಂಘಟನಾಶೀಲ, ಹಣಕಾಸು ಬಲ, ಕ್ಷೇತ್ರ ಮಟ್ಟದಲ್ಲಿ ಹಿಡಿತ ಈ ಮೂರು ಗುಣಗಳು ಅವರನ್ನು ಜೆಡಿಎಸ್‌ಗೆ ಅತ್ಯಂತ ದೊಡ್ಡ ಎದುರಾಳಿ ಯನ್ನಾಗಿಸುತ್ತವೆ. ಯುವಕರಲ್ಲಿ ಪ್ರಭಾವ ಕಳೆದುಕೊಂಡಿರುವ ಜೆಡಿಎಸ್‌ಗೆ ಡಿ.ಕೆ.ಶಿ. ಅವರ ಚುರುಕಿನ ರಾಜಕೀಯ ಮತ್ತಷ್ಟು ಹೊಡೆತ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಆಗಿರುವ ಅನುಭವ, ಆಡಳಿತ ಶೈಲಿ, ಹಾಗೂ ಕುಟುಂಬದ ರಾಜಕೀಯ ತೂಕ ಇವೆಲ್ಲವಿದ್ದರೂ, ಕಳೆದ ಕೆಲವು ವರ್ಷಗಳಲ್ಲಿ ಜೆಡಿಎಸ್ ತನ್ನ ನೆಲ ಕಳೆದುಕೊಂಡಿರುವುದು ಅಡಗಿದ ಮಾತಲ್ಲ.

ಪಕ್ಷದ ಮತಬ್ಯಾಂಕ್ ಕುಸಿತ, ನಾಯಕತ್ವದಲ್ಲಿ ಗೊಂದಲ. ಮೈತ್ರಿ ರಾಜಕೀಯದಿಂದ ಜನರಲ್ಲಿ ಉಂಟಾದ ಅಸಮಾಧಾನ ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಇನ್ನೂ ಬಲವಾಗಿದ್ದು, ಅದರಲ್ಲೂ ಡಿ.ಕೆ.ಶಿವಕುಮಾರ್ ನಾಯಕತ್ವಕ್ಕೆ ಬಂದ್ರೆ ಕುಮಾರಸ್ವಾಮಿ ಅವರ ರಾಜಕೀಯಕ್ಕೆ ಇದು ದೊಡ್ಡ ಆಘಾತ. ಕಾಂಗ್ರೆಸ್, ಜೆಡಿಎಸ್ ಎರಡೂ ದಕ್ಷಿಣ ಕರ್ನಾಟಕದ ಮೇಲೆ ಸಂಪೂರ್ಣವಾಗಿ ಅವಲಂಬಿತವಾಗಿವೆ. ಈ ಪ್ರದೇಶದಲ್ಲಿ ಡಿ.ಕೆ.ಶಿ. ಅವರ ಹಿಡಿತ ಹೆಚ್ಚಾದರೆ, ಜೆಡಿಎಸ್‌ನ ಕುಸಿತ ಮತ್ತಷ್ಟು ಹೆಚ್ಚಾಗಬಹುದು. ಕುಮಾರಸ್ವಾಮಿ ಅವರ ರಾಜಕೀಯ ಪುನರುತ್ಥಾನ ಕಷ್ಟ ಮುಂದಿನ ಚುನಾವಣೆಯಲ್ಲಿ ಜೆಡಿಎಸ್ ಪ್ರಾದೇಶಿಕ ಪಕ್ಷದಿಂದ 'ಸಣ್ಣ ಪಕ್ಷ' ಆಗುವ ಅಪಾಯವೂ ಇದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಒಟ್ಟಾರೆ, ಈಗ ರಾಜಕೀಯ ವಲಯದಲ್ಲಿ ಕೇಳಿಬರುತ್ತಿರುವ ಮಾತು: ಡಿ.ಕೆ.ಶಿ. ಬಿಜೆಪಿಗೆ ಹಾರಿ ಮುಖ್ಯಮಂತ್ರಿ ಆದರೆ, ಆ ದಿನವೇ ಜೆಡಿಎಸ್‌ಗೆ ಕೊನೆ ಮೊಳೆ.... ಕುಮಾರಸ್ವಾಮಿ ನಿದ್ದೆ ಹಾರಿ ಹೋಗೋದು ನಿಕ್ಕಿ....!!

# 7 ಕೋಟಿ ಲೂಟಿ ಸ್ಕೆಚ್ ಹಾಕಿದ್ದೆ ಕಾನ್‌ಸ್ಟೇಬಲ್ ಅಣ್ಣಪ್ಪ ನಾಯ್ಕ್!

ಬೆಂಗಳೂರು
✍ ಹೆಚ್.ಕೆ. ಮಹದೇವ್

ಬೆಂಗಳೂರಿನಲ್ಲಿ ನಡೆದ 7.11 ಕೋಟಿ ರೂಪಾಯಿ ದರೋಡೆ ಪ್ರಕರಣಕ್ಕೆ ದೊಡ್ಡ ಟ್ವಿಸ್ಟ್ ಸಿಕ್ಕಿದ್ದು, ಅದರ ಸ್ಕೆಚ್ ಹಾಕಿದ್ದೇ ಗೋವಿಂದಪುರದ ಖತರ್ನಾಕ್ ಪಿಸಿ ಅಣ್ಣಪ್ಪ ನಾಯ್ಕ್ ಎಂದು ತಿಳಿದು ಬಂದಿದೆ!



ಐದಾರು ಮಂದಿ ಕಳ್ಳರನ್ನ ಟ್ರೈನಪ್ ಮಾಡಿ ದರೋಡೆ ಮಾಡಿಸಿ ಸಿಕ್ಕಿಬಿದ್ದಿರೋ ಅಣ್ಣಪ್ಪ ಇದೀಗ ಪೊಲೀಸ್ ಕಸ್ಟಡಿಯಲ್ಲಿದ್ದಾನೆ! ಈತ ಛೂ ಬಿಟ್ಟಿದ್ದ ದರೋಡೆಗಾರರು ಚಿತ್ತೂರು ಮಾರ್ಗವಾಗಿ ಚೆನ್ನೈ ಕಡೆಗೆ ತೆರಳಿದ್ದು, ಚೆನ್ನೈ ಪೊಲೀಸರು 6.3 ಕೋಟಿ ರೂಪಾಯಿ ನಗದು ಜಪ್ತಿ ಮಾಡಿದ್ದಾರೆ. ಈ ದರೋಡೆಯಲ್ಲಿ ಸಿಎಂಎಸ್ ಸೆಕ್ಯೂರಿಟಿ ಮಾಜಿ ಸಿಬ್ಬಂದಿ ಮತ್ತು ಪೊಲೀಸ್ ಕಾನ್ಸ್ಟೇಬಲ್ ಸೇರಿದಂತೆ ನಾಲ್ವರು ಆರೋಪಿಗಳನ್ನು ಬಂಧಿಸಲಾಗಿದ್ದು, ಅವರನ್ನು ಚೆನ್ನೈಯಿಂದ ಬೆಂಗಳೂರಿಗೆ ಕರೆತರಲಾಗುತ್ತಿದೆ. ಕೇವಲ 46 ಗಂಟೆಗಳೊಳಗೆ ಈ ಯಶಸ್ಸು ಸಾಧಿಸಿದ ಕರ್ನಾಟಕ ಪೊಲೀಸ್ ತಂಡಕ್ಕೆ ಶಹಬ್ಬಾಸ್ ಹೇಳಲೇ ಬೇಕು.





ಮೊನ್ನೆ ನವೆಂಬರ್ 19ರ ಬುಧವಾರ 4:30ರ ಸುಮಾರಿಗೆ ಅಶೋಕ ಪಿಲ್ಲರ್ ಜಂಕ್ಷನ್ ಬಳಿಯ ರಸ್ತೆಯಲ್ಲಿ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಎಟಿಎಂ ಕ್ಯಾಶ್ ವ್ಯಾನ್‌ಗೆ ಆರ್‌ಬಿಐ ಅಧಿಕಾರಿಗಳಂತೆ ಡ್ರೆಸ್ ಧರಿಸಿದ್ದ 56 ಮಂದಿ ದರೋಡೆಕೋರರು ಹಣವಿದ್ದ ವ್ಯಾನ್ ಮೇಲೆ ದಾಳಿ ಮಾಡಿದ್ದರು. ಇನ್ನೋವಾ ಕಾರಿನಲ್ಲಿ ಬಂದ ಆರೋಪಿಗಳು ವ್ಯಾನ್‌ನ್ನು ನಿಲ್ಲಿಸಿ, ಸಿಬ್ಬಂದಿಯನ್ನು ಅಸ್ತ್ರಗಳಿಂದ ಹೆದರಿಸಿ, 7.11 ಕೋಟಿ ರೂಪಾಯಿ ನಗದು ತುಂಬಿದ್ದ ಸುರ್ಕೈಟ್‌ಗಳನ್ನು ದೋಚಿಕೊಂಡು ಎಸ್ಕೇಪ್ ಆಗಿದ್ದರು. ದರೋಡೆಕೋರರು ವ್ಯಾನ್‌ನ DVR (ಸಿಸಿಟಿವಿ ರೆಕಾರ್ಡರ್) ಸಹ ತೆಗೆದುಕೊಂಡಿದ್ದರಿಂದ ಆಂತರಿಕ ದೃಶ್ಯಗಳು ಲಭ್ಯವಾಗಿಲ್ಲ. ದರೋಡೆಯ ನಂತರ 45 ನಿಮಿಷಗಳಲ್ಲಿ ಕಾಲ್ ಬಂದಿದ್ದು, ಇನ್‌ಸೈಡರ್ ಸಹಾಯದ ಶಂಕೆ ಮೂಡಿತ್ತು.

ತನಿಖೆಯಲ್ಲಿ, ದರೋಡೆಯ ಮಾಸ್ಟರ್‌ಮೈಂಡ್ ಗೋವಿಂದಪುರ ಪೊಲೀಸ್ ಠಾಣೆಯ ಕಾನ್ಸ್ಟೇಬಲ್ ಅಣ್ಣಪ್ಪ ನಾಯ್ಕ್ (38) ಎಂದು ಬಹಿರಂಗವಾಗಿತ್ತು. ಅಣ್ಣಪ್ಪ ನಾಯ್ಕ್ ಕಳೆದ 6 ತಿಂಗಳುಗಳಿಂದ ಸಿಎಂಎಸ್ ಮಾಜಿ ಉದ್ಯೋಗಿ ರಾಜು (ಕೇರಳ ನಿವಾಸಿ) ಜೊತೆಗೆ ಯೋಜನೆ ರೂಪಿಸಿದ್ದ. ಅಣ್ಣಪ್ಪ ನಾಯ್ಕ್‌ಗೆ ಪೊಲೀಸ್ ಪ್ರೊಸೀಜರ್ ತಿಳಿದಿದ್ದರಿಂದ, ಹುಡುಗರ ಗ್ಯಾಂಗ್‌ನ್ನು ರೆಕ್ರೂಟ್ ಮಾಡಿ, ದರೋಡೆಯ ತಂತ್ರಗಳನ್ನು ಕಲಿಸಿದ್ದ. ತಮಿಳುನಾಡು, ಆಂಧ್ರಪ್ರದೇಶ ಮತ್ತು ಕೇರಳದಿಂದ ಬಂದ ಹುಡುಗರು ಈ ಗ್ಯಾಂಗ್‌ನಲ್ಲಿದ್ದರು. ರಾಜು 'ಸಿಎಂಎಸ್' ಮಾಜಿ ಸಿಬ್ಬಂದಿಯಾಗಿದ್ದು, ವ್ಯಾನ್‌ನ ರೂಟ್ ಮತ್ತು ಸಮಯದ ಮಾಹಿತಿ ನೀಡಿದ್ದ.

ಇದೀಗ ಚಿತ್ತೂರ್ (ಆಂಧ್ರಪ್ರದೇಶ) ಮೂಲದ ಇಬ್ಬರು ಆರೋಪಿಗಳು ಸೇರಿದಂತೆ ನಾಲ್ವರನ್ನು ಚೆನ್ನೈ ಪೊಲೀಸರು ಬಂಧಿಸಿದ್ದಾರೆ. ಚಿತ್ತೂರ್‌ನಿಂದ ಚೆನ್ನೈಗೆ ಪರಾರಿ ಯಾಗಿ ಹಣವನ್ನು ಮರೆಮಾಚುವ ಯೋಜನೆಯಲ್ಲಿದ್ದರು. ಚೆನ್ನೈಯ ಗೌರಿಪುರಂ ಪ್ರದೇಶದಲ್ಲಿ ಒಂದು ಮನೆಯಲ್ಲಿ 6.3 ಕೋಟಿ ರೂಪಾಯಿ ನಗದು ಜಪ್ತಿ ಮಾಡಲಾಗಿದೆ. ಉಳಿದ ಹಣವನ್ನು ಎಲ್ಲೆಲ್ಲಿ ಅಡಗಿಸಿಟ್ಟಿದ್ದಾರೋ ಹುಡುಕಲಾಗುತ್ತಿದೆ.

ಕರ್ನಾಟಕ ಪೊಲೀಸ್‌ನ 8 ವಿಶೇಷ ತಂಡಗಳು (200ಕ್ಕೂ ಹೆಚ್ಚು ಸಿಬ್ಬಂದಿ) ಈ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದು, ತಮಿಳುನಾಡು ಪೊಲೀಸ್ ಸಹಕಾರದಿಂದ ಈ ಯಶಸ್ಸು ಸಾಧ್ಯವಾಗಿದೆ. ಮೊಬೈಲ್ ಟ್ರ್ಯಾಕಿಂಗ್, ಸಿಸಿಟಿವಿ ದೃಶ್ಯಗಳು ಮತ್ತು ಬಾರ್ಡರ್ ಚೆಕ್‌ಪಾಯಿಂಟ್‌ಗಳ ಮೂಲಕ ಆರೋಪಿಗಳನ್ನು ಹಿಡಿದಿದ್ದಾರೆ.

ಗೃಹ ಸಚಿವ ಜಿ. ಪರಮೇಶ್ವರ ಅವರು, ಈ ರೀತಿಯ ದರೋಡೆ ಇದೇ ಮೊದಲ ಬಾರಿ ನಡೆದಿದೆ. ಘಟನೆ ನಡೆದ 46 ಗಂಟೆಗಳೊಳಗೆ ಹಣ ಪತ್ತೆ ಮಾಡಿದ್ದು ಕರ್ನಾಟಕ ಪೊಲೀಸ್ ವ್ಯವಸ್ಥೆಯ ಶಕ್ತಿಯನ್ನು ತೋರುತ್ತದೆ ಎಂದು ಹೊಗಳಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಇನ್ಮುಂದೆ ಇಂಥ ವಿಚಾರದಲ್ಲಿ

☞15



## ಅಣ್ಣಪ್ಪ ನಾಯ್ಕ್ ಬ್ಯಾಕ್ ಗ್ರೌಂಡೇ ವೊರ್ಸ್ಟ್!

ಈ ದರೋಡೆ ಪ್ರಕರಣದಲ್ಲಿ ರೂವಾರಿ ಅಣ್ಣಪ್ಪ ನಾಯ್ಕ್ ಹಿನ್ನಲೆ ನೋಡುವುದಾದರೆ, ಈತ ಕುಂಬಳಗೋಡುವಿನಲ್ಲಿದ್ದಾಗ ತಾನೇ ಮುಂದೆ ನಿಂತು ಒಂದು ದರೋಡೆ ಕೇಸ್ ಮಾಡಿಸಿ 13 ಲಕ್ಷ ಹೊಡೆದಿದ್ದ! ಬಾಣಸವಾಡಿಯಲ್ಲಿ ಕ್ರೈಂ ಬೀಟ್ ಮಾಡುತ್ತಿದ್ದಾಗ ಕಳ್ಳರನ್ನು ಬಿಟ್ಟು ಮನೆಗಳುವು ಮಾಡಿಸುತ್ತಿದ್ದ. ಜೊತೆಗೆ, ವೇಶ್ಯ ಗೃಹಗಳು ಮಸಾಜ್ ಪಾರ್ಲರ್‌ಗಳಿಗೆ ನುಗ್ಗಿ ತಿಂಗಳ ವಂತಿಗೆ ವಸೂಲಿ ಮಾಡುತ್ತಿದ್ದ.

ಇವನ ಬುದ್ದಿ ಅರಿತಿದ್ದ ಆಫೀಸರ್ಸ್ ಈ ಅಣ್ಣಪ್ಪನನ್ನು ಹೊಯ್ಸಳ ವಿಭಾಗಕ್ಕೆ ವರ್ಗಾಯಿಸಿದ್ದರು. ಕೆಲಸವಿಲ್ಲದೆ ಸುಮ್ಮನೆ ಕುಳಿತಿದ್ದ ಅಣ್ಣಪ್ಪ ಪ್ರತಿನಿತ್ಯ ಝೇವಿಯರ್ ನನ್ನು ಭೇಟಿಯಾಗುತ್ತಿದ್ದ. ಈ ವೇಳೆ ಕಿಲಾಡಿ ಕಳ್ಳ ಝೇವಿಯರ್ 'ಸಿಎಂಎಸ್' ಕಂಪನಿಯ ಹಣ ಸಾಗಾಟದ ಬಗ್ಗೆ ಅಣ್ಣಪ್ಪನಿಗೆಲ್ಲಾ ಮಾಹಿತಿ ನೀಡುತ್ತಿದ್ದ. ಇಬ್ಬರೂ ಹಣ ದೋಚುವ ಆಲೋಚನೆ ಬಂದಿದ್ದು, ಹಣ ದರೋಡೆ ಮಾಡುವ ಯೋಜನೆಯನ್ನು ಇಬ್ಬರೂ ಸೇರಿ ರೂಪಿಸಿದ್ದರು. ಝೇವಿಯರ್, 'ಸಿಎಂಎಸ್ ಪ್ಲ್ಯಾನ್ ನಂದು, ಎಸ್ಕೇಪ್ ಪ್ಲ್ಯಾನ್ ನಿಂದು' ಎಂದು ಅಣ್ಣಪ್ಪನಿಗೆ ಹೇಳಿದ್ದ ಎನ್ನಲಾಗಿದೆ.

ಅವರ ಯೋಜನೆಯಂತೆ, ಹಣ ಸಾಗಿಸುತ್ತಿದ್ದ ವಾಹನವನ್ನು ಅಡ್ಡಗಟ್ಟಿ 7 ಕೋಟಿ 11 ಲಕ್ಷ ರೂಪಾಯಿಗಳನ್ನು ದರೋಡೆ ಮಾಡಿ ಪರಾರಿಯಾಗಿದ್ದಾರೆ. ಆದರೆ, ದರೋಡೆ ನಡೆದಾಗ, ಪ್ರಮುಖ ಆರೋಪಿಗಳಾದ ಝೇವಿಯರ್ ಮತ್ತು ಅಣ್ಣಪ್ಪ ಇಬ್ಬರೂ ಸ್ಥಳದಲ್ಲಿ ಇರಲಿಲ್ಲ. ಬದಲಾಗಿ, ದರೋಡೆಯನ್ನು ಹೇಗೆ ಮಾಡಬೇಕು, ಹೇಗೆ ತಪ್ಪಿಸಿಕೊಳ್ಳಬೇಕು ಎಂಬ ಸಂಪೂರ್ಣ ರೂಟ್ ಮ್ಯಾಪ್ ಅನ್ನು ತಯಾರಿಸಿ, ದೂರದಿಂದಲೇ ಎಲ್ಲವನ್ನೂ ನಿಯಂತ್ರಿಸಿದ್ದರು ಎಂದು ಪೊಲೀಸರ ತನಿಖೆಯಿಂದ ತಿಳಿದುಬಂದಿದೆ.

ಹೀಗೆ , ಕೋಟ್ಯಾಂತರ ರೂ ದರೋಡೆ ಮಾಡಲು ಪ್ಲಾನ್ ಮಾಡಿದ್ದ ಅಣ್ಣಪ್ಪ ಅದಕ್ಕಾಗಿ ಕಮ್ಮನಹಳ್ಳಿ, ಕಲ್ಯಾಣನಗರ ಹುಡುಗರ ಗ್ಯಾಂಗ್ ಸಜ್ಜು ಗೊಳಿಸಿದ್ದ. ಪಡ್ಡೆ ಹುಡುಗರನ್ನ ಒಟ್ಟು ಮಾಡಿ ದರೋಡೆ ಮಾಡುವ ಪಕ್ಕಾ ತರಬೇತಿ ನೀಡಿದ್ದ. ಜೊತೆಯಲ್ಲಿ ತಪ್ಪಿಸಿಕೊಳ್ಳುವ ತಂತ್ರವನ್ನು ಕಲಿಸಿಕೊಟ್ಟಿದ್ದ. ಪೊಲೀಸರು ದರೋಡೆ ಸಂದರ್ಭ ಯಾವ ರೀತಿ ಕಾರ್ಯಾಚರಣೆ ಮಾಡುತ್ತಾರೆ ಎಂಬುದನ್ನು ತಿಳಿಸಿದ್ದ ಎನ್ನಲಾಗಿದೆ.

ಈ ಹುಡುಗರಿಗೆ ಎಲ್ಲಾ ತರಬೇತಿಗಳನ್ನು ನೀಡಿ,ತನ್ನ ಡೈರೆಕ್ಷನ್ ಮೂಲಕವೇ ರಾಬರಿ ಮಾಡಿಸಿದ್ದ ಆಸಾಮಿ ಅಣ್ಣಪ್ಪ ನಾಯ್ಕ್, ಅಕಸ್ಮಾತ್ ಸಿಕ್ಕಿಬಿದ್ರೆ ತನ್ನ ಹೆಸರನ್ನು ಮಾತ್ರ ಎಲ್ಲೂ ಬಾಯಿ ಬಿಡಬೇಡಿ ಅಂತಲೂ ಹೇಳಿ ಕೊಟ್ಟಿದ್ನೋ ಏನೋ... ಈಗ ಸಿಕ್ಕಿ ಬಿದ್ದಿರೋ ಆರೋಪಿಗಳು, ಮೊದಲ ಏಟು ಬಿದ್ದ ಕ್ಷಣವೇ ಅಣ್ಣಪ್ಪ.... ಅಂದಿದ್ದಾರೆ!! ☯



ಗೋಪಿ, ಕ್ಸೇವಿಯರ್, ನವೀನ್, ನೆಲ್ಸನ್ ಹಾಗೂ ರವಿ



ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಸರಿಯಾಗಿ ಎರಡೂವರೆ ವರ್ಷವಾಗುತ್ತಿದ್ದಂತೆಯೇ ಸಿಎಂ ಗಾದಿಯ ಹಸ್ತಾಂತರದ ಒಳಜಗಳ ತಾರಕಕ್ಕೇರಿದೆ. ಸಿದ್ದರಾಮಯ್ಯ ನಾಕೊಡೆ ಎನ್ನುತ್ತಿದ್ದರೆ ಡಿ.ಕೆ. ಶಿವಕುಮಾರ್ ನಾ ಬಿಡೆ ಎನ್ನುತ್ತಿದ್ದಾರೆ. ಹೀಗಾಗಿ ಸಿಎಂ ಸ್ಥಾನ ಉಳಿಸಿಕೊಳ್ಳಲು ಮತ್ತು ಗಳಿಸಿಕೊಳ್ಳಲು ಇನ್ನಿಲ್ಲದ ಕಸರತ್ತುಗಳು ನಡೆಯುತ್ತಿವೆ. ನಮ್ಮಲ್ಲಿ ಅಂತಹ ಯಾವುದೇ ಬೆಳವಣಿಗೆಗಳು ನಡೆದಿಲ್ಲ ಎಂದು ಹೇಳಿಕೊಂಡು ಕೈ ನಾಯಕರು ಓಡಾಡುತ್ತಿದ್ದರೂ ನಡೆಯುತ್ತಿರುವ ವಿದ್ಯಮಾನಗಳು ಕಾಂಗ್ರೆಸ್ ನಲ್ಲಿ ಕುರ್ಚಿ ಕಚ್ಚಾಟ ಜೋರಾಗಿದೆ ಎಂಬುದನ್ನು ಸಾರಿ ಹೇಳುತ್ತಿದೆ.

# ಕರ್ನಾಟಕದ ಸಿಎಂ ಕುರ್ಚಿ ಕದನಕ್ಕೆ ವಿರಾಮ ಯಾವಾಗ?

✍ಬಿ.ಎಂ. ಲವಕುಮಾರ್

ಇಡೀ ದೇಶದಲ್ಲಿ ಕೇವಲ ಮೂರು ರಾಜ್ಯಗಳಲ್ಲಷ್ಟೇ ಅಧಿಕಾರದಲ್ಲಿರುವ ಕಾಂಗ್ರೆಸ್‌ನ ಹೈಕಮಾಂಡ್‌ಗೆ ರಾಜ್ಯದಲ್ಲಿ ನಡೆಯುತ್ತಿರುವ ನವೆಂಬರ್ ಕ್ರಾಂತಿ ಬಿಸಿ ತುಪ್ಪವಾಗಿ ಪರಿಣಮಿಸಿದೆ. ಇದೀಗ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಎಂಬ ದಿಗ್ಗಜ ನಾಯಕರನ್ನು ಹೇಗೆ ಸಮಾಧಾನಪಡಿಸಬೇಕೆಂದು ಗೊತ್ತಾಗದೆ ಮೌನಕ್ಕೆ ಶರಣಾಗಿರುವುದು ಗೋಚರಿಸುತ್ತಿದೆ. ಅದರಲ್ಲೂ ಸುಪ್ರೀಂ ನಾಯಕ ರಾಹುಲ್ ಗಾಂಧಿಯಂತು ಯಾರಿಗೂ ಸಿಗದೆ ಓಡಾಡುತ್ತಿದ್ದಾರೆ. ಹೀಗಾಗಿ ಸಿಎಂ ಕುರ್ಚಿ ಕದನಕ್ಕೆ ವಿರಾಮ ಬೀಳುವ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ..

2023ರಲ್ಲಿ ಅಧಿಕಾರ ಪಡೆದಾಗ ಸಿಎಂ ಸ್ಥಾನ ನೀಡುವ ಸಂದರ್ಭ ಹೈಕಮಾಂಡ್ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ಅವರಿಗೆ ಸಿಎಂ ಮತ್ತು ಡಿಸಿಎಂ ಸ್ಥಾನ ನೀಡುವಾಗ ಯಾವ ರೀತಿಯ ಸೂಚನೆಗಳನ್ನು ನೀಡಿದ್ದಾರೆ? ಅವರ ನಡುವೆ ಯಾವ ರೀತಿಯ



ಒಪ್ಪಂದಗಳಾಗಿವೆ ಎನ್ನುವುದು ಇದುವರೆಗೆ ಬಯಲಾಗಿಲ್ಲ. ಎಲ್ಲವೂ ಗೌಪ್ಯವಾಗಿದೆ. ಇಲ್ಲಿ ಏನಾಗಿದೆ ಎಂಬುದರ ಸತ್ಯಾಸತ್ಯತೆಗಳು ಅವರಿಗಷ್ಟೆ ಗೊತ್ತು. ಆದರೆ ಆ ನಂತರದ ನಡವಳಿಕೆಗಳು, ಹೇಳಿಕೆಗಳು ಇಬ್ಬರ ನಡುವೆ ಸಿಎಂ ಅಧಿಕಾರ ಹಸ್ತಾಂತರದ ಒಪ್ಪಂದಗಳಾಗಿವೆ ಎಂಬ ಸಂಶಯವನ್ನು ಹೆಚ್ಚೆಚ್ಚು ಮಾಡಿವೆ.

ಈಗಾಗಲೇ ಪವರ್ ಶೇರಿಂಗ್ ಕುರಿತಂತೆ ಮಾಧ್ಯಮಗಳಲ್ಲಿ ಚರ್ಚೆಗಳಾಗಿವೆ. ನಾಯಕರನ್ನು ಕೇಳಿದಾಗಲೂ ಅವರೆಲ್ಲರೂ ಅಡ್ಡಗೋಡೆ ಮೇಲೆ ದೀಪವಿಟ್ಟಂತೆ ಮಾತನಾಡಿದ್ದಾರೆ. ಅಲ್ಲದೆ ಈ ವಿಚಾರ ತಾರಕಕ್ಕೇರಿದಾಗಲೂ ಅಂತಹದೊಂದು ಒಪ್ಪಂದವಾಗಿಲ್ಲ ಎಂದು ಖಡಕ್ ಆಗಿ ಹೇಳುವ ಪ್ರಯತ್ನವನ್ನು ಹೈಕಮಾಂಡ್ ಮಾಡಿಲ್ಲ. ಈ ಬಗ್ಗೆ ಸಚಿವರು, ಶಾಸಕರು ಬಹಿರಂಗ ಹೇಳಿಕೆ ನೀಡಿದಾಗಲೂ ಅವರ ಮೇಲೆ ಕ್ರಮ ಕೈಗೊಂಡು ಅಂತಹದೊಂದು ಒಪ್ಪಂದವಾಗಿಲ್ಲ ಎನ್ನುವುದನ್ನು ಹೇಳುವ ಧೈರ್ಯವನ್ನು ಅವರು ತೋರಿಲ್ಲ.

ಹೈಕಮಾಂಡ್‌ನ ಈ ನಡೆ ಇವತ್ತು ಕಾಂಗ್ರೆಸ್ ನಾಯಕರು ಸೇರಿದಂತೆ ರಾಜ್ಯದ ಜನರು ಸಂಶಯದಿಂದ ನೋಡುವಂತೆ ಮಾಡಿದೆ. ಅಷ್ಟೇ ಅಲ್ಲದೆ ರಾಜ್ಯ ಕಾಂಗ್ರೆಸ್ನಲ್ಲಿ ಡಿಕೆಶಿ, ಸಿದ್ದು ಮತ್ತು ತಟಸ್ಥ ಹೀಗೆ ಮೂರು ಬಣಗಳು ಇದ್ದಂತೆ ಗೋಚರಿಸುತ್ತಿದೆ.. ಸಿಎಂ ಅಧಿಕಾರ ಪಡೆದ ಸಿದ್ದರಾಮಯ್ಯ ಅವರು ಇದೀಗ ಆ ಅಧಿಕಾರ ಬಿಟ್ಟುಕೊಡಲು ಹಿಂದೇಟು ಹಾಕುತ್ತಿದ್ದಾರಾ? ತಾವೇ ಮುಂದುವರೆಯಲು ರಾಜಕೀಯ ತಂತ್ರ ಮಾಡುತ್ತಿದ್ದಾರಾ? ಅಹಿಂದ ತಂತ್ರ ಬಳಸುತ್ತಿದ್ದಾರಾ? ದಲಿತ ಸಚಿವರು ಮತ್ತು ಶಾಸಕರನ್ನು ಮುಂದಿಟ್ಟುಕೊಂಡು ಹೈಕಮಾಂಡ್ ಮೇಲೆ ಒತ್ತಡ ತರುತ್ತಿದ್ದಾರಾ? ಹೀಗೊಂದು ಸಂಶಯಗಳು ಅವರ ಬೆಂಬಲಿಗ ಸಚಿವರು, ಶಾಸಕರ ನಡೆಯಿಂದ ಗೊತ್ತಾಗುತ್ತಿದೆ.



ಅತ್ತ ಡಿ.ಕೆ. ಶಿವಕುಮಾರ್ ಈ ಬಾರಿ ಸಿಎಂ ಸ್ಥಾನವನ್ನು ಪಡೆಯದೆ ಹೋದರೆ ಮುಂದೆ ಸಾಧ್ಯವಿಲ್ಲ. ಹೀಗಾಗಿ ಶತಾಯ ಗತಾಯ ಪಡೆದೇ ತೀರಬೇಕೆನ್ನುವ ಆತುರದಲ್ಲಿದ್ದಾರೆ. 2018ರಲ್ಲಿ ಅಂದು ಸಿಎಂ ಆಗಿದ್ದ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿಯೇ ಚುನಾವಣೆಗೆ ಹೋದರೂ ಗೆಲ್ಲಲು ಸಾಧ್ಯವಾಗಿರಲಿಲ್ಲ. ಆ ನಂತರ ಏನಾಯಿತು ಎಂಬುದು ಎಲ್ಲರಿಗೂ ಗೊತ್ತಿದೆ. ಬಿಜೆಪಿ ಆಪರೇಷನ್ ಕಮಲದ ಮೂಲಕ ರಾಜ್ಯದಲ್ಲಿ ಅಧಿಕಾರ ಹಿಡಿದಿತ್ತು. ಅದಾದ ನಂತರ ಕಾಂಗ್ರೆಸ್‌ನ ವರ್ಚಸ್ಸು ಕುಗ್ಗಿ ಹೋಗಿತ್ತು. ಈ ಸಂದರ್ಭದಲ್ಲಿ ಫೀನಿಕ್ಸ್ ನಂತೆ ಪುಟಿದು ನಿಂತಿದ್ದು ಇದೇ ಡಿ.ಕೆ.



ಶಿವಕುಮಾರ್ ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ವಹಿಸಿಕೊಂಡ ಬಳಿಕ ಬಿಜೆಪಿ ವಿರುದ್ಧ ಸೆಟೆದು ನಿಂತರು. ಪಕ್ಷಕ್ಕಾಗಿ ತನು ಮನಧನ ಮೂರನ್ನೂ ತ್ಯಾಗ ಮಾಡಿದರು. ಜೆಡಿಎಸ್ ಕಡೆಗೆ ಮುಖ ಮಾಡಿದ್ದ ಒಕ್ಕಲಿಗರನ್ನು ತಮ್ಮತ್ತ ಸೆಳೆದರು. ಒಕ್ಕಲಿಗ ಸಿಎಂ ಆಗೋದಕ್ಕೆ ಸಹಾಯ ಮಾಡಿ ಎಂದು ಅಂಗಲಾಚಿದರು.

ಒಕ್ಕಲಿಗ ನಾಯಕನನ್ನು ಸಿಎಂ ಆಗಿ ನೋಡುವುದು ಒಕ್ಕಲಿಗರ ಬಯಕೆಯಾಗಿತ್ತು. ಹೀಗಾಗಿ ಡಿ.ಕೆ. ಶಿವಕುಮಾರ್ ಸಿಎಂ ಆಗುತ್ತಾರೆ ಎಂಬ ಕಾರಣಕ್ಕಾಗಿ ಕಾಂಗ್ರೆಸ್ ಕಡೆಗೆ ವಾಲಿದರು. ಅದರ ಪರಿಣಾಮ ಹಳೆ ಮೈಸೂರು ಭಾಗದಲ್ಲಿ ಜೆಡಿಎಸ್‌ಗೆ ಸೆಡ್ಡು ಹೊಡೆದು ಕಾಂಗ್ರೆಸ್‌ನ್ನು ಗೆಲ್ಲಿಸಿದರು. ಆದರೆ ಇದೀಗ ಡಿ.ಕೆ.ಶಿವಕುಮಾರ್‌ಗೆ ಕಾಂಗ್ರೆಸ್ ಹೈಕಮಾಂಡ್ ಸಿಎಂ ಸ್ಥಾನವನ್ನು ಹಸ್ತಾಂತರಿಸದೆ ಹೋದರೆ ಅದರ ಪರಿಣಾಮಗಳು ಮುಂದಿನ 2028ರ ವಿಧಾನಸಭಾ ಚುನಾವಣೆ ಮೇಲೆ ಕಾಣಿಸುವ ಸಾಧ್ಯತೆಯಿದೆ.

ಈಗಾಗಲೇ ಎಲ್ಲ ರಾಜ್ಯಗಳಲ್ಲೂ ಕಳಪೆ ಸಾಧನೆ ಮಾಡುತ್ತಿರುವ ಕಾಂಗ್ರೆಸ್ ಮುಂದಿನ 2028ರ ವಿಧಾನಸಭಾ ಚುನಾವಣೆಯಲ್ಲಿ ಈಗಿನಂತೆ ದಿಗ್ವಿಜಯ ಸಾಧಿಸುತ್ತದೆ. ಆಗ ನಾನು ಸಿಎಂ ಆಗಬಹುದು ಎಂಬ ನಂಬಿಕೆಯೂ ಡಿ.ಕೆ.ಶಿವಕುಮಾರ್ ಅವರಿಗೆ ಇಲ್ಲದಾಗಿದೆ. ಈಗಾಗಲೇ ಸತೀಶ್ ಜಾರಕಿ ಹೊಳೆ 2028ಕ್ಕೆ ನಾನೇ ಸಿಎಂ ಎಂಬಂತಹ ಆಶಾಭಾವನೆಯ ಮಾತುಗಳನ್ನಾಡುತ್ತಿದ್ದಾರೆ. ಒಂದು ವೇಳೆ ಡಿ.ಕೆ. ಶಿವಕುಮಾರ್ ಅವರಿಗೆ ಈ ಬಾರಿ ಸಿಎಂ ಸ್ಥಾನ ಕೊಡದೆ ಹೋದರೆ ಒಕ್ಕಲಿಗರು ಕಾಂಗ್ರೆಸ್ ನ್ನು ಕೈಬಿಡುವ ಎಲ್ಲ ಲಕ್ಷಣಗಳಿವೆ.

ಕಾಂಗ್ರೆಸ್ ಅಧಿಕಾರಕ್ಕೆ ಬಂದ ಬಳಿಕ ಗ್ಯಾರಂಟಿ ಯೋಜನೆಗಾಗಿ ಹೋರಾಡುವುದರಲ್ಲಿಯೇ ಸಮಯ ಕಳೆದು ಹೋಗಿದೆ. ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಕಳೆದ ಎರಡೂವರೆ ವರ್ಷಗಳಿಂದ ಆಗಾಗ್ಗೆ ಅಧಿಕಾರ ಹಸ್ತಾಂತರ ವಿಚಾರಗಳೇ ಮುನ್ನಲೆಗೆ ಬರುತ್ತಿದ್ದು, ಕಾಂಗ್ರೆಸ್ ನಲ್ಲಿ ಎಲ್ಲವೂ ಸರಿಯಿಲ್ಲ ಎನ್ನುವ ಮಟ್ಟಿಗೆ ಇದುವರೆಗೆ ದಿನಗಳನ್ನು ಕಳೆದುಕೊಂಡು ಬರಲಾಗಿದೆ. ಈ ಬಾರಿ ಏನಾದರೊಂದು ತೀರ್ಮಾನಕ್ಕೆ ಹೈಕಮಾಂಡ್ ಬಾರದೆ ಹೋದರೆ ಕಾಂಗ್ರೆಸ್ ಪಕ್ಷದಲ್ಲಿ ಒಳ್ಳೆಯ ಬೆಳವಣಿಗೆಗಳಂತು ಆಗುವುದಿಲ್ಲ ಎನ್ನುವುದಂತು ನಿಜ.

ಬಿಹಾರ ಚುನಾವಣೆಯಲ್ಲಿ ಮಕಾಡೆ ಮಲಗಿರುವ ಕಾಂಗ್ರೆಸ್ ಮುಂದೆ ಬರಲಿರುವ ತಮಿಳುನಾಡು, ಪಶ್ಚಿಮ ಬಂಗಾಳ ಚುನಾವಣೆಗಳತ್ತ ಚಿತ್ತ ಹರಿಸಲೇ ಬೇಕಾಗಿದೆ. ಅಲ್ಲಿ ಚುನಾವಣೆ ಎದುರಿಸಬೇಕಾದರೆ ಕರ್ನಾಟದ ಸಹಕಾರ ಅಗತ್ಯವಾಗಿದೆ. ಹೀಗಿರುವಾಗ ಇಲ್ಲಿಯೇ ಪರಿಸ್ಥಿತಿ ಬಿಗಡಾಯಿಸಿದರೆ ಮುಂದೇನು? ಎಂಬ ಚಿಂತೆಯೂ ಹೈಕಮಾಂಡ್ ನ್ನು ಕಾಡಲಾರಂಭಿಸಿದೆ. ಇವತ್ತಿನ ರಾಜ್ಯ ಕಾಂಗ್ರೆಸ್ ನಲ್ಲಿ ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯ ಬಣಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ನೋಡಿದರೆ ಈ ಇಬ್ಬರು ನಾಯಕರು ಹೈಕಮಾಂಡ್‌ಗೆ ಸೆಡ್ಡು ಹೊಡೆಯುವ ಮಟ್ಟಿಗೆ ಹೋದರೂ ಅಚ್ಚರಿಯಿಲ್ಲ.

ರಾಜ್ಯದಲ್ಲಿ ಕಾಂಗ್ರೆಸ್ ಗೆಲುವಿಗೆ ಹೈಕಮಾಂಡ್ ನಾಯಕರ ಕೊಡುಗೆ ತೀರಾ ಶೂನ್ಯ.. ಇಲ್ಲಿ ಕಾಂಗ್ರೆಸ್ ಗೆಲುವು ಕಂಡಿದ್ದರೆ ಅದು ಡಿ.ಕೆ.ಶಿವಕುಮಾರ್ ಮತ್ತು ಸಿದ್ದರಾಮಯ್ಯರವರ ವರ್ಚಸ್ಸಿನಿಂದ ಎನ್ನುವುದರಲ್ಲಿ ಎರಡು ಮಾತಿಲ್ಲ. ಮೋದಿ ನೋಡಿ ಮತಹಾಕುವಂತೆ ರಾಹುಲ್ ಗಾಂಧಿಯನ್ನು ನೋಡಿ ರಾಜ್ಯದ ಜನ ಮತ ಹಾಕಿದ್ದಾರೆ ಎನ್ನುವುದನ್ನು ಒಪ್ಪಿಕೊಳ್ಳಲಾಗುವುದಿಲ್ಲ. ಬಿಹಾರದಲ್ಲಿ ಕಾಂಗ್ರೆಸ್ ಮಕಾಡೆ ಮಲಗಿದ ಬಳಿಕ ಹೈಕಮಾಂಡ್ ನಾಯಕರು ಭ್ರಮನಿರಸನರಾಗಿದ್ದಾರೆ. ಅವರು ಸುಧಾರಿಸಿಕೊಳ್ಳುವ ಮೊದಲೇ ರಾಜ್ಯದಲ್ಲಿ ಕುರ್ಚಿ ಕದನ ಶುರುವಾಗಿರುವುದರಿಂದ ಅದನ್ನು ಹೇಗೆ ನಿಭಾಯಿಸುವುದು ಎಂಬುದೇ ಗೊತ್ತಾಗದೆ ಪರದಾಡುತ್ತಿದ್ದಾರೆ.

ಸದ್ಯ ಮಲ್ಲಿಕಾರ್ಜುನ ಖರ್ಗೆಯವರು ರಾಜ್ಯಕ್ಕೆ ಬಂದಿದ್ದು ಅವರು ಯಾವ ರೀತಿಯಲ್ಲಿ ಗೊಂದಲವನ್ನು ಬಗೆಹರಿಸುತ್ತಾರೆ? ರಾಹುಲ್ ಗಾಂಧಿ ಎಂಟ್ರಿ ಹೇಗಿರಲಿದೆ? ಇಷ್ಟಕ್ಕೂ ಹೈಕಮಾಂಡ್ ಮಾತು ಕೇಳಿ ಇಬ್ಬರೂ ನಾಯಕರು ಮೌನರಾಗುತ್ತಾರಾ? ಎಂಬಿತ್ಯಾದಿ ಪ್ರಶ್ನೆಗಳು ಪ್ರತಿಯೊಬ್ಬರನ್ನು ಕಾಡುತ್ತಲೇ ಇದೆ. ಆದರೆ ಯಾವುದಕ್ಕೂ ಉತ್ತರ ಸದ್ಯಕ್ಕೆ ಸಿಗುವ ಲಕ್ಷಣಗಳು ಗೋಚರಿಸದೆ ಇರುವ ಕಾರಣದಿಂದಾಗಿ ಸಿಎಂ ಕುರ್ಚಿ ಕದನಕ್ಕೆ ವಿರಾಮ ಬೀಳುವುದು ಕಷ್ಟವೇ..

ಪರಿಸ್ಥಿತಿ ಇಷ್ಟು ಮುಂದುವರೆಯಲು ಬಿಟ್ಟಿದ್ದೇ ಹೈಕಮಾಂಡ್‌ನ ಮೊದಲ ತಪ್ಪು. ಜತೆಗೆ ಒಪ್ಪಂದ ಆಗಿದೆಯೋ ಇಲ್ಲವೋ ಎಂಬುದಕ್ಕೆ ಸ್ಪಷ್ಟನೆ ನೀಡದೆ ಹೋಗಿದ್ದು ಎರಡನೇ ತಪ್ಪು, ಹೀಗೆ ತಪ್ಪುಗಳೆಲ್ಲವನ್ನು ತಮ್ಮ ಬಳಿಯಿಟ್ಟುಕೊಂಡು ಹೈಕಮಾಂಡ್ ತಮಾಷೆ ನೋಡುತ್ತಿದೆಯಾ? ಎಂದು ಜನ ಕೇಳುತ್ತಿದ್ದಾರೆ. ಬರೀ ಕುರ್ಚಿ ಕದನದಲ್ಲಿ ದಿನ ಕಳೆದು ಹೋಗುತ್ತಿದ್ದು, ಮತ ನೀಡಿದ ತಪ್ಪಿಗೆ ರಾಜ್ಯದ ಜನ ಸಂಕಷ್ಟ ಅನುಭವಿಸುವಂತಾಗಿದೆ. ಆದುದರಿಂದ ಹೈಕಮಾಂಡ್ ಕುರ್ಚಿ ಕದನಕ್ಕೆ ಶೀಘ್ರದಲ್ಲಿಯೇ ವಿರಾಮ ಎಳೆಯಬೇಕಿದೆ. ಇಲ್ಲದೆ ಹೋದರೆ ಕರ್ನಾಟಕದಲ್ಲೊಬ್ಬ ಏಕನಾಥ ಸಿಂಧೆ ಸೃಷ್ಟಿ ಆದರೂ ಅಚ್ಚರಿಯಿಲ್ಲ. ☯





# ಅತ್ತಿಬೆಲೆ: 'ದೃಶ್ಯ' ಸ್ಟೈಲ್ ಮರ್ಡರ್ ಕೇಸ್!



ಕೊಲೆಯಾದ ಶ್ರೀನಾಥ್

ಕೊಟ್ಟ ಹಣ ವಾಪಸ್ ಕೇಳಿದ ಸೋದರ ಸಂಬಂಧಿಯನ್ನ ಭೀಕರವಾಗಿ ಕೊಲೆ ಮಾಡಿ, ಮನೆಯೊಳಗೆ ಗುಂಡಿ ತೋಡಿ ಹೂತು ಹಾಕಿ ಏನೂ ತಿಳಿಯದಂತೆ ಆರಾಮವಾಗಿದ್ದ ಐನಾತಿ ಬ್ರದರ್ ಮತ್ತವನ ಕೇಡಿ ಮಿತ್ರನನ್ನು ಆನೇಕಲ್ ಸಬ್ ಡಿವಿಷನ್ ಡಿವೈಎಸ್ಪಿ ಮೋಹನ್ ಕುಮಾರ್ ನೇತೃತ್ವದಲ್ಲಿ ಅತ್ತಿಬೆಲೆ ಪೊಲೀಸರು ಬಂಧಿಸಿದ್ದಾರೆ. ಮಿಸ್ಸಿಂಗ್ ಕೇಸ್ ಬೆನ್ನತ್ತಿದ ಪೊಲೀಸರಿಗೆ ಇದು ನಿಗೂಢ ಕೊಲೆ ಅಂತ ಗೊತ್ತಾಗಿದ್ದೇ ರೋಚಕ...!!



ಹಂತಕ ಪ್ರಭಾಕರ್

ಬೆಂಗಳೂರು

✍ಹೆಚ್.ಕೆ. ಮಹದೇವ್

ಇದೊಂದು ವಿಚಿತ್ರ ಹಾಗೂ ಕ್ರೂರ ಘಟನೆ. ಪೂರ್ತಿ ಓದಿದಾಗ ಯಾರತ್ರನು ಸಾಲ ಮಾಡಬಾರದು ಮತ್ತು ಯಾರಿಗೂ ಸಾಲ ಕೊಡಬಾರದು ಅನ್ನಿಸದಿದ್ರೆ ಕೇಳಿ... ಆನೇಕಲ್ ತಾಲೂಕು, ಅತ್ತಿಬೆಲೆ ಸಮೀಪದ ನೆರಳೂರಿನಲ್ಲಿ ಶ್ರೀನಾಥ್ (30) ಎಂಬ ವ್ಯಕ್ತಿ ಪತ್ನಿ ಮತ್ತು ಮಗುವಿನೊಂದಿಗೆ ವಾಸವಿದ್ದರು. ಆಂಧ್ರ ಪ್ರದೇಶದ ಕುಪ್ಪಂನಿಂದ ಇಲ್ಲಿಗೆ ವಲಸೆ ಬಂದು ಸೆಟ್ಲ್ ಆಗಿದ್ದ ಕುಟುಂಬವದು. ಪ್ರತಿಷ್ಠಿತ ಕಂಪನಿಯೊಂದರಲ್ಲಿ ಇಂಜಿನಿಯರ್ ಆಗಿದ್ದ ಶ್ರೀನಾಥ್ ಗೆ ಕೈತುಂಬ ಸಂಬಳ ಬರುತ್ತಿತ್ತು. ಹೆಂಡತಿ ಮಗು ಜೊತೆ ನೆಮ್ಮದಿಯಾಗಿದ್ದರು.

## ಕಿಡಿಗೇಡಿ ಬ್ರದರ್!

ಶ್ರೀನಾಥ್‌ಗೆ ಪ್ರಭಾಕರ್ ಎಂಬ ಸೋದರ ಸಂಬಂಧಿ ಇದ್ದ. ಆತ ಕುಪ್ಪಂನಲ್ಲೇ ನೆಲೆಸಿದ್ದು ಕಷ್ಟಪಟ್ಟು ದುಡಿಯದೆ ಅವರಿವರನ್ನು ಏಮಾರಿಸಿಕೊಂಡು ಹಣ ಕಿತ್ತುಕೊಂಡು ನಿಂತಿದ್ದ ಕಿಡಿಗೇಡಿ. ಆಸಾಮಿ ಪ್ರಭಾಕರನಿಗೆ ವಿಪರೀತ ಚಟಗಳಿದ್ದವು ಅನ್ನುತ್ತೆ. ಅದಕ್ಕಾಗಿ ಸಾಲ ಮಾಡುತ್ತಿದ್ದ.ಅದೇ ರೀತಿ ಬೆಂಗಳೂರು ಸಿಟಿಯಲ್ಲಿದ್ದ ಸೋದರ ಸಂಬಂಧಿ ಇಂಜಿನಿಯರ್ ಶ್ರೀನಾಥ್ ಹತ್ತಿರ 40 ಲಕ್ಷ ರೂ. ಸಾಲ ಮಾಡಿದ್ದ! ಇಷ್ಟು ಹಣವನ್ನು ಪಡೆದುಕೊಳ್ಳುವಾಗ ಆಸಾಮಿ ಶ್ರೀನಾಥ್‌ಗೆ ಏನು ಹೇಳಿದ್ದ ಅಂದ್ರೆ, ಈ ಹಣವನ್ನ ಎಲ್ಲೋ ಒಂದು ಕಡೆ ಡೆಪಾಸಿಟ್ ಮಾಡುತ್ತಿದ್ದೇನೆ, ಡಬಲ್ ಆಗುತ್ತೆ! ನನ್ನ ಪ್ರಾಬ್ಲಮ್ ತೀರಿಸಿಕೊಂಡು ಬಳಿಕ ನಿನಗೆ ದುಪ್ಪಟ್ಟು ಹಣ ವಾಪಸ್ ಕೊಡ್ತೇನೆ... ಎಂದಿದ್ದ!

ಇದನ್ನು ನಿಜವಿರಬೇಕು ಎಂದು ನಂಬಿಕೊಂಡ ಶ್ರೀನಾಥ್ ಅವನಿಗೆ 40 ಲಕ್ಷ ರೂ. ಕೊಟ್ಟಿದ್ದರು. ಹಾಗೆ 40 ಲಕ್ಷ ರೂ. ಹಣವನ್ನ ಡಬಲ್ ಮಾಡಿಕೊಡುವುದಾಗಿ ಹೇಳಿದ್ದ ಪ್ರಭಾಕರ್ ಮಾತಿಗೆ ತಪ್ಪಿದ್ದ. ಮತ್ತು ಅಸಲು ಹಣವನ್ನಾದರೂ ವಾಪಸ್ ಕೊಡದೆ ಸತಾಯಿಸುತ್ತಿದ್ದ. ಇದರಿಂದ ಕೋಪಗೊಂಡಿದ್ದ ಶ್ರೀನಾಥ್, ಹಣ ಕೊಡುವಂತೆ ಪ್ರಭಾಕರ್‌ಗೆ ಒತ್ತಾಯ ಮಾಡಿ ಪ್ರತಿನಿತ್ಯ ಫೋನ್ ಮಾಡಿ ಬೆಂಡ್ ಎತ್ತುತ್ತಿದ್ದ...

## ಹಣ ಕೊಡ್ತೇನೆ ಬಾ ಅಂತ ಮನೆಗೆ ಕರೆದು ಹೆಣ ಹಾಕಿದ!



ಮೃತನ ಪತ್ನಿ

ಪ್ರಭಾಕರ್‌ಗೆ ಶ್ರೀನಾಥ್‌ರ ಹಣವನ್ನು ಹಿಂತಿರುಗಿಸಲು ಹಲವು ಮಾರ್ಗಗಳು ಇದ್ದವು. ಅವರ ಮನೆಗೆ ತೆರಳಿ ಕುಳಿತು ಮಾತಾಡಿ ಸ್ವಲ್ಪ ಕಾಲಾವಕಾಶ ತೆಗೆದುಕೊಂಡು ಅವರ ಹಣವನ್ನು ಹಿಂತಿರುಗಿಸಬಹುದಿತ್ತು. ಆದರೆ ಈತ ಮಹಾನ್ ವಂಚಕ. ಪಕ್ಕಾ ಫ್ರಾಡ್. 40 ಲಕ್ಷ ಹಣವನ್ನ ನುಂಗಿ ನೀರು ಕುಡಿಯಲು ಯೋಚಿಸಿ ಶ್ರೀನಾಥ್‌ನನ್ನು ಮುಗಿಸಿಬಿಡಲು ನಿರ್ಧರಿಸಿದ್ದ!ಆತನಿಗೆ ಮದುವೆಯಾಗಿದೆ, ಹೆಂಡತಿ ಮಗು ಇದ್ದಾರೆ. ಮುಂದೆ ಆ ಕುಟುಂಬದ ಗತಿ ಏನು ಅಂತಲೂ ಯೋಚಿಸದೆ ಕೊಲೆ ಮಾಡಲು ಸ್ಕೆಚ್ ಹಾಕಿದ್ದ ಅಂದ್ರೆ, ಇಷ್ಟರಲ್ಲೇ ಅರ್ಥ ಮಾಡಿಕೊಳ್ಳಿ, ಇವನು ಪಕ್ಕಾ ಫ್ರಾಡ್...ಅಂತ.

ಅಕ್ಟೋಬರ್ 27 ರಂದು ಶ್ರೀನಾಥ್ ಅವರಿಗೆ ಕರೆ ಮಾಡಿ, ಹಣ ಕೊಡ್ತೀನಿ ಬಾ.... ಅಂತ ಆಂಧ್ರದ ಕುಪ್ಪಂಗೆ ಶ್ರೀನಾಥ್‌ರನ್ನ ಆರೋಪಿ ಕರೆಸಿಕೊಂಡಿದ್ದ. ಶ್ರೀನಾಥ್ ಕೈ



ತಪ್ಪಿ ಹೋಗಿದ್ದ ಹಣ ಸಿಗುತ್ತಲ್ಲ ಎಂಬಾಸೆಯಿಂದ ಅಲ್ಲಿಗೆ ತೆರಳಿದ್ದರು. ಕುಪ್ಪಂನಲ್ಲಿ ಪ್ರಭಾಕರ್ ಮನೆಯೊಳಗೆ ತೆರಳುತ್ತಿದ್ದಂತೆಯೇ ಪ್ರಭಾಕರ್ ಮತ್ತು ಆತನ ಸ್ನೇಹಿತ ಜಗದೀಶ್ ಇಬ್ಬರೂ ಸೇರಿಕೊಂಡು ಸುತ್ತಿಗೆಯಿಂದ ತಲೆಗೆ ಬಡಿದು ಶ್ರೀನಾಥ್ ಅವರನ್ನು ಹತ್ಯೆಗೈದಿದ್ದರು! ಕೊಲೆ ಮಾಡಿದ ಬಳಿಕ ಅದೇ ಮನೆಯೊಳಗೆ ಗುಂಡಿ ತೋಡಿ ಶ್ರೀನಾಥ್ ಹೆಣವನ್ನು ಹೂತಿದ್ದರು!

## ಮಿಸ್ಸಿಂಗ್ ಕಂಪ್ಲೇಂಟ್ ದಾಖಲು....

ಶ್ರೀನಾಥ್ ಅವರು ಕುಪ್ಪಂಗೆ ಹೋಗುವಾಗ ಪ್ರಭಾಕರ್ ಬಳಿ ಸಾಲದ ಹಣ ವಸೂಲಿ ಮಾಡಿಕೊಂಡು ಬರುವ ವಿಷಯವನ್ನು ತನ್ನ ಪತ್ನಿಗೆ ತಿಳಿಸಿಯೇ ಹೋಗಿದ್ದರು. ಹೀಗಾಗಿ, ಕುಪ್ಪಂಗೆ ಹೋದ ಗಂಡ ಎರಡು ದಿನ ಕಳೆದರೂ ಹಿಂತಿರುಗದಿದ್ದರಿಂದ, ಪ್ರಭಾಕರ್‌ಗೆ ಕಾಲ್ ಮಾಡಿ ಪ್ರಶ್ನಿಸಿದ್ದರು.

ಹೌದಾ... ಶ್ರೀನಾಥ್ ಇಲ್ಲಿಗೆ ಬಂದಿಲ್ಲವಲ್ಲ...ಎಂದಿದ್ದ ಹಂತಕ ಪ್ರಭಾಕರ್ ಏನೂ ಗೊತ್ತಿಲ್ಲದಂತೆ ಡ್ರಾಮಾ ಆಡಿದ್ದ! ಹೋಗಿ ಎರಡು ದಿನವಾದ್ರೂ ಪತಿ ಮನೆಗೆ ಬಾರದೆ ಇದ್ದಾಗ ಶ್ರೀನಾಥ್ ಪತ್ನಿ ಅತ್ತಿಬೆಲೆ ಪೊಲೀಸ್ ಠಾಣೆಗೆ ತೆರಳಿ, ವಿಷಯ ತಿಳಿಸಿ ಒಂದು ಮಿಸ್ಸಿಂಗ್ ದೂರು ದಾಖಲಿಸಿದ್ದರು. ಈ ಪ್ರಕರಣ ಸಂಬಂಧ ತನಿಖೆ ಕೈಗೊಂಡಿದ್ದ ಅತ್ತಿಬೆಲೆ ಸಿಪಿಐ ರಾಘವೇಂದ್ರ, ಅವರಿಗೆ ಕಾಣೆಯಾಗಿದ್ದ ಶ್ರೀನಾಥ್‌ಅವರ ಪತ್ನಿ ಕಡೆಯಿಂದ ಒಂದಷ್ಟು ಮಾಹಿತಿ ಸಿಕ್ಕವು.

ಅವರು ಕುಪ್ಪಂಗೆ ಪ್ರಯಾಣಿಸಿ ಪ್ರಭಾಕರ್ ಮತ್ತು ಜಗದೀಶ್ ಇಬ್ಬರನ್ನೂ ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದ್ದರು. ಮೊದಲಿಗೆ ತಮಗೇನು ಗೊತ್ತೇ ಇಲ್ಲಾ ಎಂದಿದ್ದರು ಹಂತಕರು. ರಾಘವೇಂದ್ರ ಕೊಂಚ ಏಮಾರಿ ದ್ದರೂ ಈ ಪ್ರಕರಣ ಮುಚ್ಚಿ ಹೋಗುತ್ತಿತ್ತು. ಅವರು ತಮ್ಮ ಚಾಣಕ್ಷಮತಿ ಬಳಸಿ ತನಿಖೆ ಮಾಡಿದಾಗ ಅಸಲಿ ಸತ್ಯ ಹೊರಬಿದ್ದಿದೆ. ಐನಾತಿ ಹಂತಕರು ಶ್ರೀನಾಥ್‌ರನ್ನು ಕೊಂದು ಕುಪ್ಪಂನ ಮನೆಯಲ್ಲಿ ಹೂತು ಹಾಕಿರೋದಾಗಿ ಹಂತಕರು ಬಾಯ್ಬಿಟ್ಟರು. ಕುಪ್ಪಂ ತಹಶೀಲ್ದಾರ್ ಅವರ ಸಮಕ್ಷಮದಲ್ಲಿ ಪ್ರಭಾಕರನ ಮನೆಯಲ್ಲಿ ಹೂತಿದ್ದ ಶ್ರೀನಾಥ್ ಹೆಣವನ್ನು ಹೊರ ತೆಗೆಯಲಾಯಿತು.




ಹಂತಕ ಪ್ರಭಾಕರ್

## ಆರೋಪಿಗಳ ಕ್ರೈಂ ಹಿಸ್ಟರಿ ಭಯಾನಕವಾಗಿದೆ...

ಶ್ರೀನಾಥ್ ಅವರನ್ನು ಅನ್ಯಾಯವಾಗಿ ಕೊಲೆ ಮಾಡಿರುವ ಆರೋಪಿಗಳಾದ ಪ್ರಭಾಕರ್, ಜಗದೀಶ್ ಇಬ್ಬರ 'ಕ್ರೈಂ ಹಿಸ್ಟರಿ' ಭಯಾನಕವಾಗಿದೆ! ಪ್ರಭಾಕರ್ ಈ ಹಿಂದೆ ತನ್ನ ಪತ್ನಿಯನ್ನೇ ಕೊಲೆ ಮಾಡಿ ಜೈಲಿಗೆ ಹೋಗಿ ಬಂದಿದ್ದಾನೆ! ಇವನ ಫ್ರೆಂಡ್ ಜಗದೀಶ್ ಕೂಡ ತನ್ನ ಪ್ರೇಯಸಿಯನ್ನ ಮಡರ್ರ ಮಾಡಿ ಜೈಲಿಗೆ ಹೋಗಿದ್ದ!! ಒಮ್ಮೆ ಜೈಲಿಗೆ ಹೋಗಿ ನರಕ ಅನುಭವಿಸಿದ್ದರೂ ಬುದ್ಧಿ ಕಲಿಯದ ಇವರು ಮತ್ತೆ ಕ್ರೈಂ ಮಾಡಿ ಜೈಲಿಗೆ ನಡೆದಿದ್ದಾರೆ.

ಪ್ರಭಾಕರ್ ಹಿನ್ನಲೆ ಗೊತ್ತಿದ್ದೂ ಶ್ರೀನಾಥ್ ಅವನಿಗೆ ಹಣ ಕೊಡಬಾರದಿತ್ತು. ದೊಡ್ಡಪ್ಪನ ಮಗ ಅಂತ ನಂಬಿ ಪ್ರಭಾಕಗೆರ್ ಹಣ ಕೊಟ್ಟಿದ್ದಕ್ಕೆ ಕಡೆಗೆ ಅವನಿಂದಲೇ ಕೊಲೆಯಾಗಿ ಹೋದ! ಆಸಾಮಿ ಪ್ರಭಾಕರ, ಶ್ರೀನಾಥ್ ಹಣ ವಾಪಸ್ ಕೇಳಿದಾಗ... ದುಡ್ಡಿನ ವಿಚಾರವಾಗಿ ಫೋನ್‌ನಲ್ಲಿ ಮಾತಾನಾಡಬೇಡ... ಐಟಿ ಪ್ರಾಬ್ಲಮ್ ಆಗುತ್ತೆ... ಬದಲಾಗಿ ವಾಟ್ಸ್ಯಾಪ್‌ನಲ್ಲಿ ಮಾತಾಡಿಕೊಳ್ಳೋಣ ಎಂದು ಹೇಳಿದ್ದನಂತೆ! ಇಷ್ಟೇ ಅಲ್ಲದೆ ಕುಪ್ಪಂಗೆ ಬರುವಾಗ ನಿನ್ನ ಮೊಬೈಲ್‌ಅನ್ನು ಮನೆಯಲ್ಲಿಯೇ ಬಿಟ್ಟು ಬಾ..... ಇಲ್ಲದಿದ್ದರೆ ಸಮಸ್ಯೆ ಆಗುತ್ತೆ... ಎಂದೂ ಶ್ರೀನಾಥ್‌ಗೆ ಹೇಳಿದ್ದನಂತೆ!

ಅವನ ಒಳ ಮರ್ಮವನ್ನರಿಯದ ಇಂಜಿನಿಯರ್ ಶ್ರೀನಾಥ್, ಅಂದು ತನ್ನ ಮೊಬೈಲ್ ಅನ್ನು ಮನೆಯಲ್ಲೇ ಬಿಟ್ಟು ಕುಪ್ಪಂ ಗೆ ಹೋಗಿದ್ದರು. ಅತ್ತಿಬೆಲೆ ಪೊಲೀಸರ ವಿಚಾರಣೆ ಸಂದರ್ಭದಲ್ಲಿ ಶ್ರೀನಾಥ್ ತನಗೆ ಸಿಗಲೇ ಇಲ್ಲ. ಬೇಕಿದ್ರೆ ಮೊಬೈಲ್ ಚೆಕ್ ಮಾಡಿ ಎಂದು ಪ್ರಭಾಕರ್ ಹೇಳಿದ್ದನಂತೆ! ಒಂದು ತಿಂಗಳ ಕಾಲ್ ಡೀಟೇಲ್ಸ್ ಎತ್ತಿದರೂ ಘಟನೆ ಬಗ್ಗೆ ಯಾವುದೇ ಸುಳಿವು ಸಕ್ಕಿರಲಿಲ್ಲ! ಸಿಪಿಐ ರಾಘವೇಂದ್ರ ಸ್ವಲ್ಪ ಹಿಂದಿನ ಮಾಹಿತಿ ಎಕ್ಕಿ ಪರಿಶೀಲಿಸಿದ್ದಾಗ, ಜಗದೀಶ್ ಜೊತೆಗಿನ ಲಿಂಕ್ ಸಿಕ್ಕಿತ್ತು! ಇದೊಂದು ಲಿಂಕ್ ಹಿಡಿದುಕೊಂಡು ತನಿಖೆ ಚುರುಕುಗೊಳಿಸಿದಾಗ ಈ ಅಮಾನುಷ ಹತ್ಯೆ ಪ್ರಕರಣ ಪತ್ತೆಯಾಗಿದೆ! ಎನಿವೆ,ಆನೇಕಲ್ ಡಿವೈಎಸ್ಪಿ ಬಿ.ಎಸ್. ಮೋಹನ್‌ಕುಮಾರ್, ಅತ್ತಿಬೆಲೆ ಸಿಪಿಐ ರಾಘವೇಂದ್ರ, ಮತ್ತು ಕ್ರೈಂ ಸಿಬ್ಬಂದಿ ವರ್ಗದವರಿಗೆ ಹ್ಯಾಟ್ಸ್ ಆಫ್... ☯





# ಖ್ಯಾತ ಸಾಹಿತಿ ಚದುರಂಗ ಅವರ ನೆನಪಿನಲ್ಲಿ...

**ಖ್ಯಾತ ಸಾಹಿತಿ ಚದುರಂಗರ ಜನುಮ ದಿನದ ಸವಿನೆನೆಪಿನಲ್ಲಿ ಈ ಲೇಖನ. ಈ ಹಿಂದೆ 2010ರಲ್ಲಿ ಅವರ ಪುತ್ರ ಮೈಸೂರು ವಿ.ವಿ.ಯ ಇಂಗ್ಲಿಷ್ ಪ್ರಾಧ್ಯಾಪಕ ಡಾ. ವಿಕ್ರಮ್ ರಾಜೇ ಅರಸ್ ಅವರನ್ನು ಸಂದರ್ಶನ ಮಾಡಿದ್ದೆ. ಅದನ್ನ ಅವರ ಮಾತಿನಲ್ಲೇ ಓದಿಕೊಳ್ಳಿ...**

ಮಹದೇವ್ ಕೆಂಪಯ್ಯ

ಬಳಿಯಲ್ಲೇ ಇದ್ದ ಶ್ರೀಮಂತಿಕೆ ಬಯಸಲಿಲ್ಲ. ಒದ್ದು ಕೊಂಡು ಬಂದ ಅಧಿಕಾರ ಅನುಭವಿಸಲಿಲ್ಲ. ಜಗತ್ತಿನ ಎಲ್ಲಾ ಜನ ಬೇಕೆನ್ನುವ ಸುಖದ ಹಿಂದೆ ಹೋಗಲಿಲ್ಲ. ಎಷ್ಟೆ ಕಷ್ಟ ಬಂದರೂ ತಾವು ನಂಬಿದ್ದ ತತ್ವ ಸಿದ್ಧಾಂತದಲ್ಲಿ ರಾಜಿ ಮಾಡಿಕೊಳ್ಳಲಿಲ್ಲ. ಎಂಥ ಸಂದರ್ಭದಲ್ಲೂ ಶಿಸ್ತು ಪ್ರಾಮಾಣಿಕತೆ ಪಾಲಿಸುವುದನ್ನು ಬಿಡಲಿಲ್ಲ. ಅವರು ತನಗಾಗಿ ಹಣ ಮಾಡಲಿಲ್ಲ. ಐಷಾರಾಮಿ ಬದುಕು ಕಟ್ಟಲಿಲ್ಲ. ಕೊನೆ ಉಸಿರಿರುವವರೆಗೂ ತಮ್ಮ ಬಗ್ಗೆ ಕಿಂಚಿತ್ತೂ ಯೋಚಿಸದೇ, ಸದಾ ನೊಂದವರ ಪರವಾಗಿಯೇ ಚಿಂತಿಸುತ್ತಿದ್ದವರು ನನ್ನ ತಂದೆ ಸುಬ್ರಹ್ಮಣ್ಯ ರಾಜೇ ಅರಸ್. ಚದುರಂಗ ಎಂಬ ನಾಮಾಂಕಿತದಿಂದ ಕನ್ನಡ ಸಾಹಿತ್ಯದಲ್ಲಿ ಖ್ಯಾತರಾದ ಅವರ ಮಗನಾದ ನನಗಾಗಿ ಅವರು ಬಿಟ್ಟು ಹೋದ ಆಸ್ತಿ ಎಂದರೆ ನಿರ್ವ್ಯಾಜ್ಯ, ನಿಷ್ಕಲ್ಮಶವಾದಂಥ ಪ್ರೀತಿ ಒಂದೇ.

ರಾಜ ವೈಭೋಗದ ನೆರಳಲ್ಲಿ ಬೆಳೆದು, ಮಹಾರಾಜ ಮಹಾರಾಣಿ ಪರಿವಾರದವರೆಲ್ಲರ ಉತ್ಕಟ ಪ್ರೀತಿ ಪಡೆದೂ ಸಹ ಅರಸೊತ್ತಿಗೆ ಧಿಕ್ಕರಿಸಿದ ನನ್ನ ತಂದೆಯ ದಿಟ್ಟ ವ್ಯಕ್ತಿತ್ವ ನನಗೀಗಲು ಚಕಿತಗೊಳಿಸುತ್ತೆ. ರಾಜಪ್ರಭುತ್ವ ಸಾಕು, ಪ್ರಜಾಪ್ರಭುತ್ವ ಬೇಕು ಎಂದು ರಾಜರ ಆಳ್ವಿಕೆಯ ಕಾಲದಲ್ಲೆ ಸೊಲ್ಲೆತ್ತಿ ಬೀದಿಗಿಳಿದು ಹೋರಾಟ ನಡೆಸಿದ ಅವರ ಧೈರ್ಯ ಸಾಮಾನ್ಯ ಎಣಿಕೆಗೆ ನಿಲುಕುವಂಥದಲ್ಲ. 1942ರ ಕ್ವಿಟ್ ಇಂಡಿಯಾ ಚಳವಳಿಗೆ ಧುಮುಕಿದ ನನ್ನ ತಂದೆ ನಿರ್ಧಾರ ಅಂದಿನ ಮಹಾರಾಜ, ರಾಯಲ್ ಸ್ಕೂಲ್ (ರಾಜ ಮನೆತನದವರಷ್ಟೇ ಓದುವ ಶಾಲೆ) ಸಹಪಾಠಿ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ಗೆ ಅಸಮಾಧಾನ ತರಿಸಿತ್ತು.

‘‘ನೋಡು ಸುಬ್ರಹ್ಮಣ್ಯ ಎಂಥ ಕೆಲ್ಸ ಮಾಡಿದ್ದಾನೆ’’ ಎಂದು ಮಹಾರಾಜರು ಕುಟುಂಬಸ್ಥರಲ್ಲಿ ಹೇಳುತ್ತಿದ್ದರಾದರು, ನನ್ನ ತಂದೆ ಮೇಲೆ ಸೇಡಿನ ಮನೋಭಾವ ತೋರಿಸುತ್ತಿರಲಿಲ್ಲ. ಅವರಿಬ್ಬರ ನಡುವಿನ ಬಂಧುತ್ವಕ್ಕೆ, ಅದಕ್ಕೂ ಮಿಗಿಲಾದ ಸ್ನೇಹಕ್ಕೆ ಕೊಡುತ್ತಿದ್ದ ಬೆಲೆ ಬಹಳ ದೊಡ್ಡದು. ನನ್ನ ತಂದೆ ಚದುರಂಗರು ಅಷ್ಟೇ, ರಾಜಾಡಳಿತವನ್ನು ಬಹಿರಂಗವಾಗಿ ವಿರೋಧಿಸುತ್ತಿದ್ದರಾದರೂ, ಆಂತರ್ಯದಲ್ಲಿ ಮಹಾರಾಜರನ್ನು ಬಹಳ ಪ್ರೀತಿಸುತ್ತಿದ್ದರು, ಆದರಿಸುತ್ತಿದ್ದರು.

ಸಾಮುದಾಯಿಕವಾಗಿ ಯೋಚಿಸುತ್ತಿದ್ದ ನನ್ನ ತಂದೆಗೆ ರಾಜ ಮನೆತನದ ಸಂಬಂಧ, ಅದರಿಂದ ಬರುವ ಅಧಿಕಾರ ಸುಖ ಯಾವುದೂ ಅಪೇಕ್ಷಿಯಾಗುತ್ತಿರಲಿಲ್ಲ. ಬಡವರ ಕಣ್ಣೀರು ಒರೆಸುವುದರಲ್ಲಿರುವ ನೆಮ್ಮದಿ ರಾಜ ವೈಭೋಗದ ಸುಖದಲ್ಲಿಲ್ಲ ಎಂದು ರಾಜಾಧಿಕಾರದ ನೆರಳಿನ ಸುಖ ಉಪೇಕ್ಷಿಸುತ್ತಿದ್ದರು. ಇದರಿಂದ ಸ್ವಂತ ಅಣ್ಣ ಬಸವರಾಜೇ ಅರಸ್ ಕುಪಿತಗೊಂಡು ಬಿಟ್ಟರು. ಏಕೆಂದರೆ ಈ ಭಾರತದೇಶ ಕಂಡ ಅತ್ಯಂತ ಜನಾನುರಾಗಿ ಅಭಿವೃದ್ಧಿ ಪರ ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅಕ್ಕ ಜಯಲಕ್ಷಮ್ಮಣ್ಣಿ ಹಾಗೂ ದಿವಾನ್ ಕಾಂತರಾಜೇ ಅರಸ್ ಮಗಳು ರಾಜಕುಮಾರಿ ಲೀಲಾವತಿಯನ್ನು ಬಸವರಾಜೇ ಅರಸ್ ಕೈ ಹಿಡಿದಿದ್ದರು.


ಹಾಗಂತ ಬಸವರಾಜೇ ಅರಸ್ ಮಹಾರಾಜರ ಅಳಿಯನಾಗಿದ್ದಕ್ಕೆ ತಮ್ಮನ ನಿಲುವು ವಿರೋಧಿಸಿರಲಿಲ್ಲ. ಮೈಸೂರಿನ ಮಹಾರಾಜರೆಂದರೆ ನಿಜಕ್ಕೂ ರಾಜಾ ‘ಪ್ರತ್ಯಕ್ಷ ದೇವತಾ’ ಎಂಬಂತೆ ಆಳಿ ಬದುಕಿದವರು. ಇವೊತ್ತು ದಕ್ಷಿಣ ಕರ್ನಾಟಕ ಸಮೃದ್ಧವಾಗಿ ಜನ ಅಭಿವೃದ್ಧಿ ಸುಖ ಕಂಡಿದ್ದರೆ ಅದು ಮೈಸೂರು ಮಹಾರಾಜರ ಜನಪರ ಅಭಿವೃದ್ಧಿ ಕಾರ್ಯಗಳಿಂದ. ಅದರಲ್ಲೂ ನಾಲ್ವಡಿ ಕೃಷ್ಣರಾಜ ಒಡೆಯರ್ ಭಾರತವಿರಲಿ, ಇಡೀ ಏಷ್ಯಾ ಖಂಡದಲ್ಲೇ ಅತ್ಯಂತ ಅಭಿವೃದ್ಧಿ ಹರಿಕಾರ ರಾಜ ಎಂಬ ಹೆಗ್ಗಳಿಕೆ ಸಂಪಾದಿಸಿದರು. ಮಹಾತ್ಮ ಗಾಂಧೀಜಿಯವರೆ ಮೈಸೂರು ಸಂಸ್ಥಾನದ ಅಭಿವೃದ್ಧಿ ಕಂಡು ‘ಮೈಸೂರು ಮಾಡ್ರನ್ ಸ್ಟೇಟ್’ ಎಂದು ಹೊಗಳಿದ್ದಲ್ಲದೆ, ಕೃಷ್ಣರಾಜ ಒಡೆಯರ್ ಅವರನ್ನು ರಾಜರ್ಷಿ ಎಂದು ಮುಕ್ತ ಕಂಠದಿಂದ ಶ್ಲಾಘಿಸಿದ್ದರು. ಹೀಗೆ ರಾಜಾಡಳಿತದಲ್ಲಿ ಜನ ಸುಖವಾಗಿರುವಾಗ ಪ್ರಜಾಪ್ರಭುತ್ವದ ಹೆಸರಿನಲ್ಲಿ ಮಹಾರಾಜರಿಗೆ ಅವಮಾನಕರ ರೀತಿ ವರ್ತಿಸುವುದು ಸರಿಯಲ್ಲ ಎಂಬ ಅಭಿಪ್ರಾಯ ಅಣ್ಣ ಬಸವರಾಜೇ ಅರಸ್ ಅವರದಾಗಿತ್ತು.

ಆದರೆ ನಮ್ಮ ತಂದೆ ಚದುರಂಗರ ವಿಚಾರ ಚಿಂತನೆ ಕೇವಲ ವೈಯಕ್ತಿಕ ತಳಹದಿ ಮೇಲೆ ನಿಲ್ಲುತ್ತಿರಲಿಲ್ಲ. ಅವರು ಯಾವಾಗಲೂ ವಿಶಾಲವಾಗೇ ವಿಚಾರ ಹಾಯಿಸುತ್ತಿದ್ದರು. ‘ಮೈಸೂರು ಮಹಾರಾಜರು ನಿಜಕ್ಕೂ ದೈವಸ್ವರೂಪಿಗಳೆ, ಆದರೆ ದೇಶದ ಇತರೆ ರಾಜ್ಯಗಳಲ್ಲಿ ಅಂತಹ ಒಳ್ಳೆ ರಾಜರಿಲ್ಲ. ಈಗೇನೋ ಒಳ್ಳೆ ರಾಜರು ಮೈಸೂರು ಜನತೆಗೆ ಸಿಕ್ಕಿದ್ದಾರೆ. ಮುಂದಿನ ಪೀಳಿಗೆಯಲ್ಲೂ ಇಂಥ ಉತ್ತಮರೆ ಸಿಗುತ್ತಾರೆಂಬುದಕ್ಕೆ ಏನು ಗ್ಯಾರಂಟಿ’ ಎಂದು ಪ್ರಶ್ನಿಸಿ ರಾಜಾಡಳಿತ ಕೊನೆಗೊಂಡು ಪ್ರಜಾಡಳಿತ ಜಾರಿಗೆ ಬರಬೇಕೆಂದು ವಾದಿಸುತ್ತಿದ್ದರು. ತುಂಬಾ ಸ್ಪುರದ್ರೂಪಿಯಾದ ಬಸವರಾಜೇ ಅರಸ್ ಕಡು ಬಡತನದಲ್ಲೆ ಉತ್ತಮವಾಗಿ ಓದಿ ಪೂನಾದಲ್ಲಿ ಕಾನೂನು ಪದವಿಗಳಿಸಿ ಮೈಸೂರಿನ ಜಿಲ್ಲಾಧಿಕಾರಿಯಾಗಿದ್ದರು. ಜಾತಿ ಹೊರತು ಅಂತಸ್ತಿನಲ್ಲಿ ಏನೇನೂ ಇಲ್ಲದ ಬಸವರಾಜೇ ಅರಸ್ ಅವರ ವಿದ್ಯೆ, ಬುದ್ಧಿಯನ್ನಷ್ಟೆ ಗುರುತಿಸಿ, ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ಅಕ್ಕನ ಮಗಳನ್ನು ಧಾರೆ ಎರೆದು ಕೊಟ್ಟಿದ್ದರು. ಈಗ ಮೈಸೂರಿನ ಮಾನಸ ಗಂಗೋತ್ರಿಯ ಆಡಳಿತ ಕಚೇರಿಯಾಗಿರುವ ಜಯಲಕ್ಷ್ಮಿ ಮ್ಯಾನ್ಷನ್ ಹೌಸ್‌ನಲ್ಲೆ ರಾಜಕುಮಾರಿ ಲೀಲಾವತಿಯೊಂದಿಗೆ ಮದುವೆಯಾಗಿ ವಾಸಿಸುತ್ತಿದ್ದರು.

ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಸೋದರಿ ಜಯಲಕ್ಷ್ಮಮ್ಮಣ್ಣಿ ಪತಿ ಕಾಂತರಾಜೇ ಅರಸ್ ದಿವಾನರಾಗಿದ್ದಾಗಲೆ ಭಾರತದಲ್ಲೆ ಮೊದಲ ಬಾರಿ ಹಿಂದುಳಿದ ವರ್ಗಕ್ಕೆ ಮೀಸಲಾತಿ ನೀಡುವ ಜಸ್ಟೀಸ್ ಮಿಲ್ಲರ್ ಸಮಿತಿ ವರದಿಯನ್ನು ಜಾರಿಗೆ ತಂದಿದ್ದರು. 1918ರಲ್ಲಿ ಜಸ್ಟೀಸ್ ಮಿಲ್ಲರ್ ನೇತೃತ್ವದ ಸಮಿತಿ ನೀಡಿದ ವರದಿ ಅವೈಜ್ಞಾನಿಕ ಎಂದು ಪ್ರತಿಭಟಿಸಿದ ವಿಶ್ವೇಶ್ವರಯ್ಯ ದಿವಾನ್ ಪದವಿಗೆ ರಾಜೀನಾಮೆ ನೀಡಿದ್ದರು. ಇವರ ನಂತರ 1919ರಲ್ಲಿ ದಿವಾನರಾದ ಕಾಂತರಾಜೇ ಅರಸ್ ಹಲವು ಜನರ ಪರವಾದ, ಅದರಲ್ಲೂ ಬಡ ಜನರಿಗಾಗಿ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಂಡಿದ್ದರು. ಇಂಥ ರಾಜ ಮನೆತನದ ಸಂಬಂಧ ಬೆಳೆಸಿದ ನಂತರವೂ ಬಸವರಾಜೇ ಅರಸ್ ತಾಯಿತಮ್ಮನನ್ನು ಮರೆತಿರಲಿಲ್ಲ. ಮೈಸೂರಿನ ಗೋಕುಲಂನ ಕೆಆರ್‌ಎಸ್ ರಸ್ತೆಯಲ್ಲಿ ಬಂಗಲೆ ಕಟ್ಟಿಸಿ ತಾಯಿತಮ್ಮನಿಗೆ ಅನುಕೂಲ ಮಾಡಿಕೊಟ್ಟಿದ್ದರು. ಆದರೆ ನನ್ನ ತಂದೆ ಚದುರಂಗರು, ಅಣ್ಣನ ಉಡುಗೊರೆಯನ್ನು ಧಿಕ್ಕರಿಸಿ, ಸ್ವತಂತ್ರವಾಗಿ ಸ್ವಾವಲಂಬಿಯಾಗಿ ಬದುಕಬೇಕೆಂದು ಇಚ್ಚಿಸುತ್ತಿದ್ದರು.

ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಕಲ್ಲಹಳ್ಳಿಯವರಾದ ನನ್ನ ತಂದೆ ಪೂರ್ವಜರು ಜೈನರಾಜ ವಂಶಸ್ಥರಾಗಿದ್ದರು. ನಮ್ಮ ವಂಶದ ಮೂರನೇ ಮಂಗರಸ ಪ್ರಸಿದ್ಧ ಜೈನಕವಿ. ಇವನು ಬರೆದ ‘ಸೂಪಶಾಸ್ತ್ರ’ ಬಹಳ ಪ್ರಸಿದ್ಧವಾಗಿದೆ. ಈತನಿಂದಲೇ ರಕ್ತಗತವಾಗಿ ಚದುರಂಗರಿಗೆ ಸಾಹಿತ್ಯ ಒಲಿದು ಬಂದಿತೆನಿಸುತ್ತೆ. ಚದುರಂಗರು ಹುಟ್ಟಿದ್ದು 1919ರಲ್ಲಿ. ನಿಧನರಾಗಿದ್ದು 1998ರ ಅಕ್ಟೋಬರ್ 19ರಂದು. ಮುಖ್ಯಮಂತ್ರಿಯಾಗಿ ರಾಜ್ಯವನ್ನು ದೀರ್ಘಕಾಲ ಆಳಿದ ದೇವರಾಜ ಅರಸ್, ಇವರ ತಮ್ಮ ಖ್ಯಾತ ನಟ ನಿರ್ಮಾಪಕ ನಿರ್ದೇಶಕ ಕೆಂಪರಾಜ ಅರಸ್ ಒಂದೇ ಊರಿನ ಸಂಬಂಧಿಕರಾಗಿದ್ದರಿಂದ ಒಟ್ಟಿಗೆ ಓದಿ ಬೆಳೆದವರು. ಮೈಸೂರಿನ ನಜರ್‌ಬಾದ್‌ನಲ್ಲಿರುವ ಗೋಪಾಲಗೌಡ ಆಸ್ಪತ್ರೆ ಹಿಂಭಾಗದಲ್ಲಿದ್ದ ರಾಜ ಮನೆತನದವರಿಗೆ ಮಾತ್ರ ಮೀಸಲಾಗಿದ್ದ ರಾಯಲ್ ಸ್ಕೂಲ್‌ನಲ್ಲೇ ಓದಿದ್ದರು.

ರಾಜ ವೈಭವದ ನೆರಳಿನಲ್ಲಿ ವಿದ್ಯೆ ಕಲಿಯಲು ಇಷ್ಟವಾಗದೆ ಇಂಟರ್ ಮೀಡಿಯಟ್ ಕೋರ್ಸ್ ಅನ್ನು ಬೆಂಗಳೂರಿನ ಸರ್ಕಾರಿ ಇಂಟರ್‌ಮೀಡಿಯೆಟ್ ಕಾಲೇಜ್‌ನಲ್ಲಿ ಮಾಡಿದರು. ಈ ಸಂದರ್ಭದಲ್ಲಿ ಅಂದಿನ ಯುವರಾಜರಾಗಿದ್ದ (ನಾಲ್ವಡಿ ಕೃಷ್ಣರಾಜ ಒಡೆಯರ್ ತಮ್ಮ ಹಾಗೂ ಜಯಚಾಮರಾಜೇಂದ್ರ ಒಡೆಯರ್ ತಂದೆ) ಕಂಠೀರವ ನರಸರಾಜ ಒಡೆಯರ್ ನೆನಪಿನ ಕಾಣಿಕೆಯಾಗಿ ಚದುರಂಗರಿಗೆ ಅಪರೂಪದ ಪ್ಲಾಟಿನಂ ಹಾಗು ವಜ್ರ ಖಚಿತ ಚಿನ್ನದ ಉಂಗುರವನ್ನು ನೀಡಿದ್ದರು. ಇದನ್ನು ಕಡೆಗಾಲದವರೆಗೂ ಕೃತಜ್ಞತೆಯಾಗಿಟ್ಟುಕೊಂಡಿದ್ದರು. ನನ್ನ ತಂದೆ ರಾಜ ಮನೆತನದವರನ್ನೆಲ್ಲ ಒಳ್ಳೆ ಭಾವನೆಯಿಂದಲೇ ನೋಡುತ್ತಿದ್ದರು. ಆದರೆ ರಾಜಾಡಳಿತ ವಿಷಯ ಬಂದಾಗ ಪ್ರಜಾಪ್ರಭುತ್ವದ ಪರವಾಗಿಯೇ ಧ್ವನಿ ಎತ್ತುತ್ತಿದ್ದರು. ರಾಜರ ಆಳ್ವಿಕೆ ಇರುವಾಗಲೆ ನನ್ನ ತಂದೆಯ ಈ ಧೈರ್ಯವಂತ ವರ್ತನೆ ನನಗೀಗಲೂ ಆಶ್ಚರ್ಯ ಉಂಟು ಮಾಡುತ್ತದೆ. ಆ ಕಾಲದಲ್ಲೆ ತತ್ವ ಸಿದ್ಧಾಂತದ ಮೇಲೆ ಅವರಿಟ್ಟುಕೊಂಡಿದ್ದ ಅಗಾಧ ನಂಬಿಕೆಗೌರವಗಳನ್ನು ಕಂಡು ಹೆಮ್ಮೆಯಾಗುತ್ತದೆ.



ಬೆಂಗಳೂರಿನ ಈಗಿನ ವಿಟ್ರಿಯಾ ಹೋಟೆಲ್ ಇರುವ ಜಾಗದಲ್ಲಿ 300 ಎಕರೆ ಖಾಲಿ ಜಾಗವಿತ್ತು. ಇದರ ಮಧ್ಯೆ ದಿವಾನ್ ಕಾಂತರಾಜ್ ಅರಸ್‌ರ ಬೋಲಿಯೋ ಬ್ರಿಟಿಷ್ ಬಂಗಲೆ ಇತ್ತು. ಇಲ್ಲೆ ಇದ್ದುಕೊಂಡು ಕಾಲೇಜು ವ್ಯಾಸಂಗ ಮಾಡುವಾಗ ಜೊತೆಯಾಗಿ ವಾಸಿಸುತ್ತಿದ್ದವರು ದಿವಂಗತ ಮುಖ್ಯಮಂತ್ರಿ ದೇವರಾಜ ಅರಸ್. ಅಂದು ಆರ್ಥಿಕವಾಗಿ ಬಡವರಾಗಿದ್ದ ದೇವರಾಜ ಅರಸರು ನನ್ನ ತಂದೆ ತೊಡುತ್ತಿದ್ದ ಬಟ್ಟೆಗಳನ್ನೇ ತೊಟ್ಟು ಕಾಲೇಜಿಗೆ ಹೋಗುತ್ತಿದ್ದರು. 193841ರವರೆಗೆ ಪದವಿ ಶಿಕ್ಷಣ ಮುಗಿಸಿ ಒಳ್ಳೆ ಉದ್ಯೋಗಕ್ಕೆ ಸೇರಬಹುದಾಗಿದ್ದರೂ ಕತೆ ಕಾದಂಬರಿ ಬರೆದು ರಾಜನ ಹಂಗಿನ ಅರಮನೆ ಇಲ್ಲದೆ ಸ್ವತಂತ್ರವಾಗಿ ಬದುಕುವ ಸಾಹಿತಿಯಾದರು.

ಮಹಾತ್ಮ ಗಾಂಧಿ, ರಷ್ಯನ್ ಕಾದಂಬರಿಕಾರ ಮ್ಯಾಕ್ಸಿಂಗಾರ್ಕಿ, ಕಮ್ಯೂನಿಸ್ಟ್ ಪಿತಾಮಹ ಕಾರ್ಲ್ಮಾರ್ಕ್ಸ್ ಚದುರಂಗರ ಮೇಲೆ ತುಂಬ ಪ್ರಭಾವ ಬೀರಿದ್ದರಿಂದ ಸ್ವಾತಂತ್ರ್ಯದ ಚಳವಳಿಗೆ ಧುಮುಕಿ, ರಾಜಪ್ರಭುತ್ವಕ್ಕೆ ಸೆಡ್ಡು ಹೊಡೆದಿದ್ದರು. ಮೈಸೂರಿನ ಅಶೋಕ ಪುರಂನಲ್ಲಿರುವ ಸಿಲ್ಕ್ ಫ್ಯಾಕ್ಟರಿ ಕಾರ್ಮಿಕರ ಸಂಘ ಕಟ್ಟಿ ಅವರ ಪರ ಕಾರ್ಮಿಕರು ಹಕ್ಕಿನ ಹೋರಾಟಕ್ಕೆ ಇಳಿದಿದ್ದರು. ತಮ್ಮನ ಹೋರಾಟಗಳು ಅಣ್ಣ ಬಸವರಾಜೇ ಅರಸ್‌ಗೆ ವಿಚಿತ್ರ ಅನ್ನಿಸುತ್ತಿತ್ತು. ಸರಿ ದಾರಿಗೆ ಬಾ ಎಂದು ಹಲವು ಸಾರಿ ಬುದ್ಧಿ ಹೇಳುವ ಪ್ರಯತ್ನ ಮಾಡಿದರೂ ಪ್ರಯೋಜನವಾಗಲಿಲ್ಲ. ಏಕೆಂದರೆ ಅರಸೊತ್ತಿಗೆ ಧಿಕ್ಕರಿಸುವಂತಹ ದೃಢ ನಿರ್ಧಾರ ನನ್ನ ತಂದೆ ಚದುರಂಗರು ತಳೆದಿದ್ದರು. ರಾಜ ಮನೆತನದ ಶ್ರೀಮಂತ ಹೆಣ್ಣನ್ನ ಪತ್ನಿಯಾಗಿ ಸ್ವೀಕರಿಸಬಹುದಾಗಿದ್ದರೂ ತಾವು ಪ್ರೀತಿಸಿದ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದ ತುಂಗಾ ಗ್ರಾಮದ ಬಡ ರೈತನ ಮಗಳು ದೊಡ್ಡಮ್ಮಣ್ಣಿಯನ್ನೆ ಮೆಚ್ಚಿ ಮದುವೆಯಾದರು. ಸುಮಾರು 60 ವರ್ಷಗಳ ಹಿಂದೆಯೇ ಮದುವೆಯಾಗದೆ ಒಂದೇ ಮನೆಯಲ್ಲಿ ಇವರಿಬ್ಬರು ಎರಡು ವರ್ಷಕಾಲ ಒಟ್ಟಿಗೆ ಬಾಳಿದ್ದರೆಂದರೆ ಎಂಥ ಧೈರ್ಯಸ್ಥರೆಂದು ನನ್ನ ತಂದೆತಾಯಿ ಬಗ್ಗೆ ಈಗಲೂ ನನಗೆ ಹೆಮ್ಮೆಯಾಗುತ್ತದೆ.

ಮೈಸೂರಿನ ಮಾತೃ ಮಂಡಳಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿದ ನನ್ನ ತಾಯಿ ಒಂದಿಷ್ಟು ಸಂಬಳ ತಂದು ಸಂಸಾರ ನಡೆಸಬೇಕಿತ್ತು. ಜನಪರ ಹೋರಾಟ, ಸಾಹಿತ್ಯ ಕೃಷಿ ಎಂದು ಕೊಂಡಿದ್ದ ತಂದೆಯವರಿಂದ ಮನೆ ಸಂಸಾರ ನಡೆಸುವುದು ಕಷ್ಟವಾಗಿತ್ತು. ಮಗನ ನಿರರ್ಥಕ ಕ್ರಿಯೆಯಿಂದ ಬೇಸತ್ತ ತಾಯಿ ಮರುದೇವಮ್ಮಣ್ಣಿ ಕಲ್ಲಹಳ್ಳಿಯಲ್ಲಿದ್ದ ಜಮೀನು ನೋಡಿಕೊಂಡು ಬದುಕುವಂತೆ ಸೂಚಿಸಿದರು. ಪತ್ನಿ ಶಾಲೆ ಬಿಡಿಸಿ ಊರು ಸೇರಿದ ನನ್ನ ತಂದೆ ಅಲ್ಲೆ ‘ಸರ್ವ ಮಂಗಳ’ ಕಾದಂಬರಿ ಬರೆದರು. ಮುಂದೆ ಡಾ.ರಾಜ್‌ರನ್ನು ನಾಯಕನನ್ನಾಗಿ ಮಾಡಿ ಇದೇ ಕಾದಂಬರಿ ಆಧರಿಸಿ ಚಿತ್ರ ನಿರ್ದೇಶಿಸಿದರು.

1960ರಲ್ಲಿ ‘ಉಯ್ಯಾಲೆ’ ಕಾದಂಬರಿ ಬರೆದರು. ಇದು 1964ರಲ್ಲಿ ಚಿತ್ರವಾಗಿ ಖ್ಯಾತ ನಿರ್ದೇಶಕ ಎನ್. ಲಕ್ಷ್ಮಿನಾರಾಯಣ್ ನಿರ್ದೇಶಿಸಿದರು, ಡಾ. ರಾಜ್‌ಕುಮಾರ, ಕಲ್ಪನ ಅಭಿನಯಿಸಿದ ಈ ಚಿತ್ರ ಭಾರೀ ಯಶಸ್ಸುಗಳಿಸಿತು. ಈ ಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಬಂದುದಲ್ಲದೆ, ಚಿತ್ರದ ನಾಯಕಿ ಕಲ್ಪನಾ ಪ್ರಶಸ್ತಿಗಳಿಗೆ ಭಾಜನರಾಗಿ ಬೈಲೋ ರಷ್ಯಾ ಚಿತ್ರೋತ್ಸವಕ್ಕೆ ಹೋಗಿ ಬಂದರು.

‘ಹೆಜ್ಜಾಲ’ ಸೇರಿದಂತೆ 4 ಕಾದಂಬರಿ, 3 ನಾಟಕ, 8 ಸಣ್ಣಕತೆಗಳನ್ನು ಬರೆದ ನನ್ನ ತಂದೆ ಚದುರಂಗರು ತಾವು ಕಂಡ, ಅನುಭವಿಸಿದ ವಾಸ್ತವಾಂಶಯಗಳಿಗೆ ಕಥೆ ರೂಪ ನೀಡುತ್ತಿದ್ದರು. ತಮ್ಮದೇ ಆದ ದೂರದೃಷ್ಟಿಯನ್ನಿಟ್ಟುಕೊಂಡು ಬರೆಯುತ್ತಿದ್ದರು. ಇವರ ಕಾಲದಲ್ಲಿ ಬರುತ್ತಿದ್ದ ಬಂಡಾಯ, ನವ್ಯ, ಇತ್ಯಾದಿ ಸಾಹಿತ್ಯಪ್ರಾಕಾರಗಳನ್ನು ಗುರುತಿಸುತ್ತಿರಲಿಲ್ಲ. ಸಾಹಿತ್ಯ ಪ್ರಾಕಾರಗಳನ್ನು ಗುರುತಿಸುವಲ್ಲಿ ವಿಫಲರಾದರೂ, ಸ್ವಂತ ಅನುಭಾವಗಳಿಗೆ ಕತೆ ರೂಪ ಕೊಡುತ್ತಾ ಹೋಗುವುದರಲ್ಲಿ ಸಿದ್ಧ ಹಸ್ತರಾಗಿದ್ದರು.

1974ರಲ್ಲಿ ನನ್ನ ತಾಯಿ ದೊಡ್ಡಮ್ಮಣ್ಣಿ ಕ್ಯಾನ್ಸರ್‌ನಿಂದ ಮೃತರಾದಾಗ ತೀರ ಯಾತನೆ ಪಟ್ಟರು. ನನಗೆ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕನ ಕೆಲಸ ಸಿಕ್ಕ ಸಂತೋಷವನ್ನು ಹಂಚಿಕೊಳ್ಳಬೇಕೆಂದೇನೊ ಆಕೆ ಜೀವ ಹಿಡಿದು ಕೊಂಡಿದ್ದರೆನಿಸುತ್ತೆ. ಮಗ ತನ್ನ ಕಾಲ ಮೇಲೆ ತಾನು ನಿಂತು ಸ್ವಾವಲಂಬಿಯಾಗಿ ಬದುಕುತ್ತಿದ್ದಾನೆಂಬ ನೆಮ್ಮದಿಯನ್ನು ಕಣ್ಣ ತುಂಬಾ ತುಂಬಿಕೊಂಡು ಪ್ರಾಣಬಿಟ್ಟ ಆ ತ್ಯಾಗಮಯಿ ತಾಯಿ ಋಣ ಅಷ್ಟು ಸುಲಭವಾಗಿ ತೀರುವಂಥದ್ದಲ್ಲ. 1977ರಲ್ಲಿ ನಾನು ಮದುವೆಯಾಗುವ ಸಂದರ್ಭದಲ್ಲೂ ಶ್ರೀಮಂತ ಮನೆತನದ ಹುಡುಗಿಯರ ಸಂಬಂಧ ಕೂಡಿ ಬಂದಾಗಲು, ತಂದೆಯಂತೆಯೇ ನಾನು ತಿರಸ್ಕರಿಸಿ ಮನಮೆಚ್ಚಿದ ವಿಜಯಾರನ್ನು ಕೈ ಹಿಡಿದೆ. ಅನ್ಯೋನ್ಯ ದಾಂಪತ್ಯ ಎಂದರೇನೆಂಬುದನ್ನು ಅಪ್ಪಅಮ್ಮನನ್ನು ನೋಡಿ ಬೆಳೆದಿದ್ದರಿಂದ ನನ್ನ ಸಂಸಾರದಲ್ಲಿ ಸಪ್ತ ಸ್ವರದ ಹೊರತು ಅಪಸ್ವರ ಈವರೆಗೂ ಕೇಳಿಲ್ಲ. ತಾವು ನಂಬಿದ ತತ್ವಸಿದ್ಧಾಂತಗಳಲ್ಲಿ ಎಂದೂ ರಾಜಿ ಮಾಡಿಕೊಳ್ಳದೆ ಬದುಕಿದ ನನ್ನ ತಂದೆ ಚದುರಂಗರ ಹೆಸರಿನಲ್ಲಿ ಪ್ರತಿವರ್ಷ ಉತ್ತಮ ಲೇಖಕರನ್ನು ಗುರುತಿಸಿ ಚದುರಂಗ ಪ್ರಶಸ್ತಿ ನೀಡುತ್ತಾ ಬಂದಿದ್ದೇನೆ. ಮಗನಾಗಿ ಅವರು ನನಗೆ ಕೊಟ್ಟ ನಿರ್ವ್ಯಾಜ್ಯ ನಿಷ್ಕಲ್ಮಶ ಪ್ರೀತಿಯನ್ನು ಸಮಾಜಕ್ಕೆ ಹಂಚುತ್ತಾ ಬದುಕುತ್ತಿದ್ದೇನೆ. ಅವರು ನಂಬಿದ ಜೀವನ ಮೌಲ್ಯಗಳೇ ನನ್ನ ಜೀವನದ ಸ್ಫೂರ್ತಿಯಾಗಿದೆ.

# ಧರ್ಮಸ್ಥಳದ ಬುರುಡೆ ಗ್ಯಾಂಗ್ ಜೈಲಿನತ್ತ!

**ದಕ್ಷಿಣ ಕನ್ನಡ**

**ಮೋಹನ್ ಬೋಳಂಗಡಿ**

ರಾಜ್ಯದ ಹಿಂದೂ ಧಾರ್ಮಿಕ ಶ್ರದ್ಧಾ ಕೇಂದ್ರ ಶ್ರೀಕ್ಷೇತ್ರ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ರೂಪಿಸಿದ್ದ ಬುರುಡೆ ಗ್ಯಾಂಗ್ ಜೈಲಿಗೆ ನಡೆಯುವುದು ಬಹುತೇಕ ಖಚಿತವಾಗಿದೆ. ಷಡ್ಯಂತ್ರದ ರೂವಾರಿಗಳಾದ ರಾಷ್ಟ್ರೀಯ ಹಿಂದೂ ಜಾಗರಣಾ ವೇದಿಕೆಯ ಸ್ಥಾಪಕಾಧ್ಯಕ್ಷ ಮಹೇಶ್ ಶೆಟ್ಟಿ ತಿಮರೋಡಿ, ಪೊಲೀಸ್ ಇಲಾಖೆಯಿಂದ ದುರ್ವತನೆಗಾಗಿ ವಜಾಗೊಂಡಿದ್ದ ಸಬ್‌ಇನ್ಸ್‌ಪೆಕ್ಟರ್ ಗಿರೀಶ್ ಮಟ್ಟಣ್ಣನವರ್, ಧರ್ಮಸ್ಥಳ ಸಮೀಪದ ಮಣ್ಣಸಂಕ ಎಂಬಲ್ಲಿ ಧಾರುಣ ರೀತಿಯಲ್ಲಿ ಹತ್ಯೆಗೀಡಾಗಿದ್ದ ಕುಮಾರಿ ಸೌಜನ್ಯಳ ಸೋದರಮಾವ ವಿಠಲಗೌಡ,



ಐಜಿಪಿ ಪ್ರಣಬ್ ಮೋಹಂತಿ



ಎಸ್ಪಿ ಜಿತೇಂದ್ರ ದಯಾಮ



ಎಸ್ಪಿ ಸೈಮನ್

ಹೋರಾಟದಲ್ಲಿ ಭಾಗಿಯಾಗಿದ್ದ ನೀತಿ ತಂಡದ ಅಧ್ಯಕ್ಷ, ಕಡಬ ಸಮೀಪದ ಇಚ್ಲಂಪಾಡಿಯವರಾಗಿದ್ದು ಬೆಂಗಳೂರಿನ ಪೀಣ್ಯ ಬಳಿ ವಾಸವಾಗಿರುವ ತಂಗಚ್ಚನ್ ಜಯಂತ್ ಮತ್ತು ತನ್ನ ಮಗಳನ್ನು ಅತ್ಯಾಚಾರ ಮಾಡಿ ಕೊಲೆ ಮಾಡಿದ್ದಾರೆ ಎಂದು ಆರೋಪಿಸಿದ್ದ ಮ್ಯಾಜಿಕ್ ಅಜ್ಜಿ ಸುಜಾತಾ ಭಟ್ ಕ್ರಿಮಿನಲ್ ಒಳಸಂಚು ರೂಪಿಸಿರುವುದು ರಾಜ್ಯ ಸರಕಾರ ಅಸ್ತಿತ್ವಕ್ಕೆ ತಂದಿದ್ದ ವಿಶೇಷ ತನಿಖಾ ತಂಡವು ನಾಲ್ಕು ತಿಂಗಳ ಕಾಲ ನಡೆಸಿದ ತನಿಖೆಯಲ್ಲಿ ಸಾಬೀತಾಗಿದೆ. ಆರೋಪಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಸೂಕ್ತ ನಿರ್ದೇಶನ ನೀಡಬೇಕು ಎಂದು ಎಸ್‌ಐಟಿಯ ಎಸ್ಪಿ ಜಿತೇಂದ್ರ ದಯಾಮ ಅವರು ಬೆಳ್ತಂಗಡಿ ಜೆಎಂಎಫ್‌ಸಿ ನ್ಯಾಯಾಲಯಕ್ಕೆ ಕೋರಿಕೆ ಸಲ್ಲಿಸಿದ್ದಾರೆ. ನ್ಯಾಯಾಲಯವು ಅನುಮತಿ ನೀಡಿದ ತಕ್ಷಣಕ್ಕೆ ಸದ್ಯಕ್ಕೆ ಈ ಐದು ಮಂದಿಯನ್ನು ಬಂಧಿಸುವ ಸಾಧ್ಯತೆಗಳು ಇವೆ.



ಮಹೇಶ್ ಶೆಟ್ಟಿ ತಿಮರೋಡಿ

ಸೌಜನ್ಯಪರ ಹೋರಾಟ ನಡೆಸುತ್ತಿದ್ದಂತಹ ಮಹೇಶ್ ಶೆಟ್ಟಿ ತಿಮರೋಡಿ ಮತ್ತವರ ಸಹಚರರು ಒಂದು ಹೆಜ್ಜೆ ಮುಂದೆ ಹೋಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ವಿರುದ್ಧ ನೇರಾನೇರ ಆರೋಪಗಳನ್ನು ಹೊರಿಸುತ್ತಿದ್ದರು. ಕರಾವಳಿಯ ಉಭಯ ಜಿಲ್ಲೆಗಳು ಅಲ್ಲದೇ ಇತರೆಡೆಗಳಲ್ಲೂ ಪ್ರತಿಭಜನಾ ಸಭೆಗಳನ್ನು ನಡೆಸಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಾದ ವೀರೇಂದ್ರ ಹೆಗ್ಗಡೆ ಮತ್ತವರ ಕುಟುಂಬದ ಸದಸ್ಯರ ತೇಜೋವಧೆ ಮಾಡುತ್ತಿದ್ದರು. ಇದರ ಮುಂದುವರಿದ ಭಾಗವಾಗಿ ಶ್ರೀ ಕ್ಷೇತ್ರಕ್ಕೆ ಸಂಬಂಧ ಪಟ್ಟಂತಹ ಜಾಗಗಳಲ್ಲಿ ನೂರಾರು ಮಂದಿಯನ್ನು ಕೊಲೆಗೈದು ಹೂತು ಹಾಕಲಾಗಿದೆ. ಹೆಣ್ಮಕ್ಕಳನ್ನು ಅತ್ಯಾಚಾರಗೈದು ಕೊಲೆ ಮಾಡಿ ಮುಚ್ಚಿ ಹಾಕಲಾಗಿದೆ. ಈ ಬಗ್ಗೆ ಉನ್ನತ ತನಿಖೆ ನಡೆಯಬೇಕು ಎಂದು ಒತ್ತಾಯಿಸಿ ರಾಜ್ಯ ಸರಕಾರಕ್ಕೆ ಒತ್ತಡ ತಂದಿದ್ದರು. ರಾಜ್ಯ ಸರಕಾರವು ನಾಲ್ಕು ತಿಂಗಳ ಹಿಂದೆ ಹೋರಾಟಗಾರರ ಒತ್ತಡದ ಹಿನ್ನೆಲೆಯಲ್ಲಿ ವಿಶೇಷ ತನಿಖಾ ದಳವನ್ನು ಐಜಿಪಿ ಪ್ರಣವ್ ಮೊಹಂತಿಯವರ ನೇತೃತ್ವದಲ್ಲಿ ರಚಿಸಿ ತನಿಖೆ ನಡೆಸಿ ವರದಿ ಒಪ್ಪಿಸುವಂತೆ ಆದೇಶ ನೀಡಿತ್ತು. ರಾಜ್ಯ ಸರಕಾರವು ಈ ಆದೇಶ ನೀಡುವ ಕೆಲವೇ ದಿನಗಳ ಮೊದಲು ಪೂರ್ವಭಾವಿಯಾಗಿ ಸಂಚೊಂದನ್ನು ರೂಪಿಸಲಾಗಿತ್ತು. ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲರಾಗಿರುವ ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ಕಚೇರಿ ಹೊಂದಿರುವ ಕೆ.ವಿ. ಧನಂಜಯ ಅವರ ಸಹಾಯಕ ವಕೀಲರಾದ ಓಜಸ್ವೀಗೌಡ ಮತ್ತು ಸಚಿನ್ ದೇಶಪಾಂಡೆ ಅವರು ಪತ್ರಿಕಾ ಹೇಳಿಕೆಯೊಂದನ್ನು ಬಿಡುಗಡೆಗೊಳಿಸಿದ್ದರು. ಆ ಹೇಳಿಕೆಯ ಪ್ರಕಾರ ಶ್ರೀ ಕ್ಷೇತ್ರ ಧರ್ಮಸ್ಥಳ ಸುತ್ತಮುತ್ತ ನೂರಾರು ಶವಗಳನ್ನು ಅಕ್ರಮವಾಗಿ ಹೂತುಹಾಕಿದ್ದಂತಹ ವ್ಯಕ್ತಿಯೊಬ್ಬ ಪಾಪಪ್ರಜ್ಞೆಗೊಳಪಟ್ಟು ಸತ್ಯ ಹೇಳಲು ಮುಂದೆ ಬಂದಿದ್ದಾನೆ ಎಂದು ಹೇಳಿದ್ದರು. ಇದನ್ನು ಗಮನಿಸಿದ ಧರ್ಮಸ್ಥಳ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಸಮರ್ಥ್ ಗಾಣಿಗೇರ ಅವರು ವಕೀಲರನ್ನು ಸಂಪರ್ಕಿಸಿ ಪಾಪಪ್ರಜ್ಞೆ ಕಾಡಿದ ವ್ಯಕ್ತಿಯನ್ನು ಕರೆದುಕೊಂಡು ಬಂದು ದೂರು ದಾಖಲಿಸುವಂತೆ ಸೂಚನೆ ನೀಡಿದ್ದರು. ಅದರಂತೆ ವಕೀಲರು ಜಿಲ್ಲಾ ಎಸ್ಪಿ ಕಚೇರಿಗೆ ಬಂದು ಎಸ್ಪಿ ಕೆ. ಅರುಣ್ ಅವರಿಗೆ ಪಾಪಪ್ರಜ್ಞೆ ಕಾಡಿದ ವ್ಯಕ್ತಿಯ ಪರವಾಗಿ ದೂರು ನೀಡಿದ್ದರು. ಅವರ ಸೂಚನೆಯಂತೆ ವಕೀಲರು ಧರ್ಮಸ್ಥಳ ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದ್ದರು. ದೂರುದಾರ ವೈಯಕ್ತಿಕವಾಗಿ ಇಲ್ಲದೇ ಇದ್ದುದರಿಂದ ಪೊಲೀಸರು ದೂರನ್ನು ಪಡೆದುಕೊಂಡು ಸ್ವೀಕೃತಿ ನೀಡಿದ್ದರು. ತದನಂತರ ನ್ಯಾಯಾಲಯದ ಅನುಮತಿ ಪಡೆದು ಬಿಎನ್‌ಎಸ್ ಸೆಕ್ಷನ್ 211ರ ಅಡಿಯಲ್ಲಿ ಕೇಸು ದಾಖಲಿಸಿಕೊಂಡಿದ್ದರು ಮತ್ತು ದೂರುದಾರರನ್ನು ಹಾಜರುಪಡಿಸುವಂತೆ ಸೂಚಿಸಿದ್ದರು. ಇದರ ಬೆನ್ನಿಗೆ ಕೆಲವು ಪ್ರಗತಿಪರರು, ವಕೀಲರು ಸೇರಿಕೊಂಡು ನಿವೃತ್ತ ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿ ಗೋಪಾಲಗೌಡರ ನೇತೃತ್ವದಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರನ್ನು ಭೇಟಿಯಾಗಿ ವಿಶೇಷ ತನಿಖಾ ತಂಡ ರಚಿಸುವಂತೆಯೂ ಅದಕ್ಕೆ ಐಜಿಪಿ ಪ್ರಣವ್ ಮೊಹಂತಿಯವರನ್ನೇ ಮುಖ್ಯಸ್ಥರನ್ನಾಗಿ ನೇಮಿಸುವಂತೆ ಕೋರಿದ್ದರು. ಅದರಂತೆ ಎಸ್‌ಐಟಿ ರಚನೆ ಆಗಿತ್ತು.





ಚಿನ್ನಯ್ಯ



ಟಿ. ಜಯಂತ್

ಧರ್ಮಸ್ಥಳ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಕ್ರೈಂ ನಂ. 39/2025ರ ಪ್ರಕರಣ ಹಾಗೂ ಇತರ ಪ್ರಕರಣಗಳನ್ನು ತನಿಖೆ ನಡೆಸುವಂತೆ ಆದೇಶದಲ್ಲಿ ಹೇಳಲಾಗಿತ್ತು. ಈ ಆದೇಶದ ಪ್ರಕಾರ ಈ ಹಿಂದೆ ನಡೆದಿದ್ದಂತಹ ಸೌಜನ್ಯ ಪ್ರಕರಣ, ಪದ್ಮಲತಾ ಪ್ರಕರಣ, ವೇದವಲ್ಲಿ ಪ್ರಕರಣಗಳನ್ನು ತನಿಖೆಯ ವ್ಯಾಪ್ತಿಯಿಂದ ಹೊರಗಿಡಲಾಗಿತ್ತು. ಎಸ್‌ಐಟಿ ಅಧಿಕಾರಿಗಳು ತನಿಖೆ ಆರಂಭಿಸುವ ಹಂತದಲ್ಲಿ ವಕೀಲರ ತಂಡ ದೂರುದಾರನನ್ನು ಸಾಕ್ಷಿ ಸಂರಕ್ಷಣಾ ಕಾಯ್ದೆಯಡಿಯಲ್ಲಿ ಮುಸುಕು ಹಾಕಿ ಕರೆದುಕೊಂಡು ಬಂದು ಬೆಳ್ತಂಗಡಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ನ್ಯಾಯಾಧೀಶರು ಆತನ 183 ಅಡಿಯಲ್ಲಿ ಹೇಳಿಕೆ ದಾಖಲಿಸಿದ್ದರು ಮತ್ತು ಆತ ತಂದಿದ್ದ ಬುರುಡೆಯೊಂದನ್ನು ಎಫ್‌ಎಸ್‌ಐಎಲ್ ಪರೀಕ್ಷೆಗೆ ಒಳಪಡಿಸುವಂತೆ ಸೂಚಿಸಿ ಪೊಲೀಸರ ವಶಕ್ಕೆ ಒಪ್ಪಿಸಿದ್ದರು. ಎಫ್‌ಎಸ್‌ಐಎಲ್ ಅಧಿಕಾರಿಗಳು ಮಹಜರು ಮೂಲಕ ಬುರುಡೆಯನ್ನು ವಶಕ್ಕೆ ಪಡೆದಿದ್ದರು ಮತ್ತು ಬೆಳ್ತಂಗಡಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ದೂರುದಾರನ ಮುಂದುವರಿದ ಹೇಳಿಕೆ ದಾಖಲಿಸಿದ್ದರು. ತದನಂತರ ಎಸ್‌ಐಟಿಯು ಈ ಪ್ರಕರಣದ ತನಿಖೆಯನ್ನು ಕೈಗೆತ್ತಿಕೊಂಡು ದೂರುದಾರ ಸೂಚಿಸಿದ್ದಂತಹ 17 ಜಾಗಗಳಲ್ಲಿ ಉತ್ಖನನ ನಡೆಸಿತ್ತು. 6ನೇ ಪಾಯಿಂಟ್ ಹೊರತುಪಡಿಸಿ ಬೇರೆ ಎಲ್ಲೂ ಕಳೆಬರದ ಸುಳಿವುಗಳು ಪತ್ತೆಯಾಗಲಿಲ್ಲ. ಆದರೆ ಬಂಗ್ಲೆ ಗುಡ್ಡೆಯಲ್ಲಿ ನೇಣು ಹಾಕಿದ ಸ್ಥಿತಿಯಲ್ಲಿ ಅಸ್ಥಿಪಂಜರ ಪತ್ತೆಯಾಗಿತ್ತು. ಅದು ಮಂಡ್ಯ ಮೂಲದ ವ್ಯಕ್ತಿಯದ್ದು ಎಂದು ಖಚಿತವಾಗಿತ್ತು. ಎಸ್‌ಐಟಿಯ ತನಿಖೆಯಲ್ಲಿ ದೂರುದಾರ ಶ್ರೀ ಕ್ಷೇತ್ರದ ವಿರುದ್ಧ ಯಾರದ್ದೋ ಚಿತಾವಣೆಯಿಂದ ಷಡ್ಯಂತ್ರ ನಡೆಸುತ್ತಿದ್ದಾನೆ ಮತ್ತು ನ್ಯಾಯಾಧೀಶರ ಎದುರು ನೀಡಿದ್ದಂತಹ 183 ಹೇಳಿಕೆಯು ಸತ್ಯಾಂಶದಿಂದ ಕೂಡಿಲ್ಲ ಎಂಬುದು ಬಯಲಾದ ಹಿನ್ನೆಲೆಯಲ್ಲಿ ದೂರುದಾರನನ್ನೇ ಆರೋಪಿಯನ್ನಾಗಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದರು. ಆ ಸಂದರ್ಭದಲ್ಲಿ ಆತನ ಗುರುತು ಬಹಿರಂಗವಾಗಿತ್ತು. ಆತ ಮಂಡ್ಯ ಜಿಲ್ಲೆಯ ಚಿನ್ನ ಯಾನೆ ಚಿನ್ನಯ್ಯ 1995ರಿಂದ 2014ರ ತನಕ ಧರ್ಮಸ್ಥಳದಲ್ಲಿ ಸ್ವಚ್ಛತಾ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ. ಆತನ ಅಣ್ಣ ತಾನಾಸಿ ಉಜಿರೆಯ ಪಂಚಾಯತ್‌ನಲ್ಲಿ ಕೆಲಸ ಮಾಡುತ್ತಿದ್ದಾನೆ. ಆತನ ಸಹೋದರಿ ರತ್ನಾ ಕೂಡಾ ಅಲ್ಲೇ ಕೆಲಸ ಮಾಡುತ್ತಿದ್ದಾರೆ. ಪತ್ನಿ ಮಲ್ಲಿಕಾ ತಮಿಳುನಾಡಿನ ಈರೋಡಿನಲ್ಲಿ ಇದ್ದಾರೆ ಎನ್ನುವುದು ಬಯಲಾಗಿತ್ತು.



ಗಿರೀಶ್ ಮಟ್ಟಣ್ಣನವರ್

### ಷಡ್ಯಂತ್ರ ಏನು?

2014ರಲ್ಲಿ ಧರ್ಮಸ್ಥಳದಿಂದ ಕೆಲಸ ಬಿಟ್ಟು ಹೋಗಿದ್ದ ಚಿನ್ನಯ್ಯ ತಮಿಳುನಾಡಿನ ಈರೋಡಿನ ಸ್ಪಿನ್ನಿಂಗ್ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ. 2022ರಲ್ಲಿ ಉಜಿರೆಯ ಸಾರ್ವಜನಿಕ ಶೌಚಾಲಯ ನಿರ್ವಹಣೆಗೆ ಜನ ಬೇಕು ಎಂದು ತಿಳಿದ ಆತನ ಅಕ್ಕ ರತ್ನಾ ಆತನನ್ನು ಕರೆಸಿಕೊಂಡಿದ್ದಳು. ಈ ಸಂದರ್ಭದಲ್ಲಿ ಆತನನ್ನು ಪರಿಚಯಿಸಿಕೊಂಡ ವಿಠಲಗೌಡ ದೂರವಾಣಿ ಸಂಖ್ಯೆಯನ್ನು ಪಡೆದುಕೊಂಡಿದ್ದ. ಅಲ್ಲಿಂದ ಷಡ್ಯಂತ್ರ ರೂಪುಗೊಂಡಿತ್ತು. ಚಿನ್ನಯ್ಯನನ್ನು ವಿಠಲಗೌಡ ಮಹೇಶ್ ಶೆಟ್ಟಿ ತಿಮರೋಡಿಯ ಮನೆಗೆ ಕರೆದುಕೊಂಡು ಹೋಗಿ ಪರಿಚಯಿಸಿದ್ದ. ಈ ಸಂದರ್ಭದಲ್ಲಿ ಚಿನ್ನಯ್ಯ ಧರ್ಮಸ್ಥಳ ಸುತ್ತಮುತ್ತ ನೂರಾರು ಶವಗಳನ್ನು ಹೂತು ಹಾಕಿದ್ದ ವಿಚಾರವನ್ನು ಹೇಳಿದ್ದ. ಇದನ್ನೇ ಬಂಡವಾಳವನ್ನಾಗಿಸಿಕೊಂಡು ಶ್ರೀ ಕ್ಷೇತ್ರದ ವಿರುದ್ಧ ಷಡ್ಯಂತ್ರ ರೂಪಿಸಬಹುದು ಎಂದು ಪ್ಲ್ಯಾನ್ ಮಾಡಿದವರೇ ಮಹೇಶ್ ಶೆಟ್ಟಿ ತಿಮರೋಡಿ ಮತ್ತು ಗಿರೀಶ್ ಮಟ್ಟಣ್ಣನವರ್ ಅದಕ್ಕೆ ಸಾತ್ ನೀಡಿದ್ದು ವಿಠಲಗೌಡ.

ಈ ಮೂವರು ಸೇರಿಕೊಂಡು ಚಿನ್ನಯ್ಯನನ್ನು ಬಳಸಿ ಷಡ್ಯಂತ್ರ ರೂಪಿಸಬಹುದು ಇದಕ್ಕೆ ಬೆಂಬಲ ಬೇಕಾಗುತ್ತದೆ ಮತ್ತು ಕಾನೂನಿನ ನೆರವು ಅಗತ್ಯ ಇದೆ ಎಂದು ಸುಪ್ರೀಂಕೋರ್ಟ್‌ನ ವಕೀಲ ಕೆ.ವಿ. ಧನಂಜಯರನ್ನು ಸಂಪರ್ಕಿಸಿ ಅಗತ್ಯ ಮಾಹಿತಿಗಳನ್ನು ಪಡೆದುಕೊಂಡು ಬುರುಡೆ ಕಥೆಯನ್ನು ಸೃಷ್ಟಿಸಿದ್ದರು. ಆ ಬುರುಡೆಯನ್ನು ಬಂಗ್ಲಗುಡ್ಡೆಯಿಂದ ಸೌಜನ್ಯ ಮಾವ ವಿಠಲಗೌಡ ತೆಗೆದುಕೊಂಡು ಬಂದಿದ್ದು, ತದನಂತರ ಬೆಂಗಳೂರಿನ ಪೀಣ್ಯಾದಲ್ಲಿರುವ ಜಯಂತ್ ಟಿ. ಮನೆಯಲ್ಲಿ ಇಟ್ಟಿದ್ದರು. ಈರೋಡಿನಲ್ಲಿದ್ದ ಚಿನ್ನಯ್ಯನನ್ನು ಬೆಂಗಳೂರಿಗೆ ಕರೆಸಿ ಈ ಬುರುಡೆಯನ್ನು ಆತನಿಗೆ ಹಸ್ತಾಂತರಿಸಿದ್ದರು. ಈ ಮಧ್ಯೆ ಧರ್ಮಸ್ಥಳದವರೊಂದಿಗೆ ಆಸ್ತಿ ವಿಚಾರದಲ್ಲಿ ವೈಮನಸ್ಸು ಹೊಂದಿದ್ದಂತಹ ಸುಜಾತಾ ಭಟ್ ಎಂಬ ವೃದ್ಧೆಯನ್ನು ಸಂಪರ್ಕಿಸಿ ಷಡ್ಯಂತ್ರ ತಂಡಕ್ಕೆ ಸೇರಿಸಿಕೊಂಡಿದ್ದರು. ಸುಜಾತಾ ಭಟ್

☞ 13

# ಸೌಜನ್ಯ ಫೈಲ್ಸ್



7

ನಿರೂಪಣೆ :

**ಮೋಹನ್ ಬೋಳಂಗಡಿ**

# ನಾಲ್ಕು ಯುವಕರ ಹೆಸರು ಪ್ರಸ್ತಾಪಿಸಿದ ಕುಸುಮಾವತಿ

ಸಿಒಡಿ ಡಿವೈಎಸ್ಪಿ ರುದ್ರಮುನಿಯವರು ಬೆಳ್ತಂಗಡಿ ಪ್ರವಾಸಿ ಮಂದಿರದಲ್ಲಿ ಕುಳಿತುಕೊಂಡು ಇಡೀ ಪ್ರಕರಣದ ಕಡತವನ್ನು ತಿರುವಿ ಹಾಕುತ್ತಿದ್ದರು. ಅವರು ಅದರಲ್ಲಿ ಗಮನಿಸಿದ ಅಂಶವೆಂದರೆ ಹತ್ಯೆಗೀಡಾದಂತಹ ಸೌಜನ್ಯಳ ತಾಯಿ ಕುಸುಮಾವತಿ ಅವರನ್ನು ತನಿಖೆ ನಡೆಸಿದಂತಹ ಬೆಳ್ತಂಗಡಿ ವೃತ್ತ ನಿರೀಕ್ಷಕರಾಗಿದ್ದ ಭಾಸ್ಕರ್ ರೈ ಅವರು ವಿಚಾರಣೆಗೆ ಗುರಿಪಡಿಸಿರಲಿಲ್ಲ. ಅವರಿಗೆ ಇದು ಅಚ್ಚರಿಯ ಅಂಶವೂ ಆಗಿತ್ತು. ಅದಕ್ಕಾಗಿಯೇ ಡಿವೈಎಸ್ಪಿ ರುದ್ರಮುನಿಯವರು ಕುಸುಮಾವತಿಯವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟೀಸು ನೀಡಿದ್ದರು. ಅದರಂತೆ ಕುಸುಮಾವತಿಯವರು ಬೆಳ್ತಂಗಡಿ ಪ್ರವಾಸಿ ಮಂದಿರಕ್ಕೆ ಬಂದು ಡಿವೈಎಸ್ಪಿ ರುದ್ರಮುನಿಯವರ ಎದುರಲ್ಲಿ ಹಾಜರಾದರು. ರುದ್ರಮುನಿಯವರು ಅವರನ್ನು ಪ್ರಶ್ನೆ ಮಾಡುವ ಮೊದಲೇ ತಾನು ತಂದಿದ್ದಂತಹ ಚೀಟಿಯೊಂದನ್ನು ಅವರಿಗೆ ನೀಡಿದರು. ಅವರಿಗೆ ಅಚ್ಚರಿಯಾದರೂ ತೋರಿಸಿಕೊಡಲಿಲ್ಲ. ಆ ಚೀಟಿಯಲ್ಲಿ ನಾಲ್ವರು ಯುವಕರ ಹೆಸರು ಇತ್ತು. ಅದರಲ್ಲಿ ಪ್ರಮುಖ ಹೆಸರೇ ನಿಶ್ಚಲ್ ಜೈನ್ ಅವರದ್ದು. ಅವರು ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಸಹೋದರ ಹರ್ಷೇಂದ್ರ ಕುಮಾರ್ ಅವರ ಮಗ. ಮತ್ತೆ ಮೂರು ಹೆಸರುಗಳೆಂದರೆ ಉದಯ್ ಜೈನ್, ಮಲ್ಲಿಕ್ ಜೈನ್ ಮತ್ತು ಧೀರಜ್ ಕೆಲ್ಲ.



ಮಲ್ಲಿಕ್ ಜೈನ್

ಡಿವೈಎಸ್ಪಿ ರುದ್ರಮುನಿಯವರಿಗೆ ಪ್ರಕರಣದ ತನಿಖೆಯು ಇನ್ನೊಂದು ದಿಕ್ಕಿನತ್ತ ಸಾಗುವ ಮುನ್ಸೂಚನೆ ಕುಸುಮಾವತಿ ಅವರು ನೀಡಿದ ಚೀಟಿನಿಂದ ಲಭ್ಯವಾಯಿತು. ಕುಸುಮಾವತಿ ಅವರೊಂದಿಗೆ ಆ ನಾಲ್ವರು ಯಾರು ಮತ್ತು ಅವರ ಹೆಸರನ್ನು ಯಾಕೆ ಈ ಸಂದರ್ಭದಲ್ಲಿ ಪ್ರಸ್ತಾಪಿಸುತ್ತಿದ್ದೀರಿ ಹಾಗೂ ಈ ಹಿಂದೆ ತನಿಖೆ ನಡೆಸಿದಂತಹ ತನಿಖಾಧಿಕಾರಿಗಳ ಮುಂದೆ ಯಾಕೆ ಅವರ ಹೆಸರನ್ನು ಹೇಳಲಿಲ್ಲ ಎಂದು ಪ್ರಶ್ನಿಸಿದರು. ಈ ಸಂದರ್ಭದಲ್ಲಿ ಕುಸುಮಾವತಿಯವರು ತನ್ನನ್ನು ಈವರೆಗೆ ಈ ಪ್ರಕರಣದ ತನಿಖೆ ನಡೆಸುತ್ತಿದ್ದಂತಹ ತನಿಖಾಧಿಕಾರಿಗಳು ಪ್ರಶ್ನೆ ಮಾಡಿಲ್ಲ. ತನಗೆ ಈ ನಾಲ್ವರ ಹೆಸರುಗಳನ್ನು ತನ್ನ ಸಹೋದರಿ ಯಶೋಧ ಅವರು ಘಟನೆ ನಡೆದ ಎರಡು ದಿನಗಳ ಬಳಿಕ ತಿಳಿಸಿದ್ದರು. ಅದನ್ನು ಯಾರೊಂದಿಗೂ ಹಂಚಿಕೊಳ್ಳಲು ಅವಕಾಶ ಸಿಕ್ಕಿಲ್ಲ ಇದೀಗ ತಾವು ನೋಟೀಸು ನೀಡಿದ್ದರಿಂದ ತಮ್ಮ ಮುಂದೆ ಈ ವಿಚಾರವನ್ನು ತಿಳಿಸುತ್ತಿದ್ದೇನೆ ಎಂದು ಹೇಳಿದರು. ಡಿವೈಎಸ್ಪಿ ರುದ್ರಮುನಿಯವರಿಗೆ ಕುಸುಮಾವತಿಯವರನ್ನು ಹೆಚ್ಚು ವಿಚಾರಣೆ ನಡೆಸುವಂತಹ ಅಗತ್ಯ ಕಾಣಲಿಲ್ಲ. ಯಾಕೆಂದರೆ ಈ ಪ್ರಕರಣದಲ್ಲಿ ಅವರು ಪ್ರತ್ಯಕ್ಷದರ್ಶಿ ಅಲ್ಲ. ಕೇವಲ ಸಂತ್ರಸ್ತೆಯ ತಾಯಿ. ತಮಗೆ ಗೊತ್ತಾದಂತಹ ವಿಷಯವನ್ನು ಸೂಚ್ಯವಾಗಿ ತಿಳಿಸಿದ್ದಾರೆ. ಆದ್ದರಿಂದ ಆ ವಿಷಯದ ಬಗ್ಗೆ ಅಮೂಲಾಗ್ರ ತನಿಖೆ ನಡೆಸಿದರೆ ಪ್ರಕರಣದ ತಿರುಳನ್ನು ತಿಳಿಯಲು ಸಾಧ್ಯವಾಗಬಹುದು ಎಂದು ಭಾವಿಸಿದರು. ಅಲ್ಲದೇ ಕುಸುಮಾವತಿಯವರು ಹೇಳಿದ್ದಂತಹ ಮೂವರಿಗೂ ದೂರವಾಣಿ ಕರೆ ಮಾಡಿ ಪ್ರವಾಸಿ ಮಂದಿರಕ್ಕೆ ಬರುವಂತೆ ಸೂಚನೆ ನೀಡಿದರು. ಯಾವಾಗ ಸಿಒಡಿ ಡಿವೈಎಸ್ಪಿಯವರು ಬುಲಾವ್ ನೀಡಿದರೋ ಕೆಲವೇ ಸಮಯದಲ್ಲಿ ಧೀರಜ್ ಕೆಲ್ಲ, ಉದಯ್ ಜೈನ್, ಮಲ್ಲಿಕ್ ಜೈನ್ ಬಂದು ನಿಂತಿದ್ದರು.



ಸೌಜನ್ಯ ತಾಯಿ ಕುಸುಮಾವತಿ

ಅವರನ್ನು ನೋಡುವಾಗ ಸಿಒಡಿ ಡಿವೈಎಸ್ಪಿಯವರಿಗೆ ಯಾವುದೇ ಸಂಶಯಗಳು ಕಾಣಲಿಲ್ಲ. ಮೂವರು ಯುವಕರು ಅಮಾಯಕರಂತೆ ಕಂಡರು. ಈ ಪ್ರಕರಣದ ತನಿಖೆಯ ಸಂದರ್ಭದಲ್ಲಿ ಧೀರಜ್ ಮತ್ತು ಮಲ್ಲಿಕ್ ಸಾಕ್ಷಿದಾರರಾಗಿ ಹೇಳಿಕೆಯನ್ನು ದಾಖಲಿಸಿದ್ದು, ಪ್ರಕರಣದ ಕಡತದಲ್ಲಿತ್ತು. ಸಂತೋಷ್‌ರಾವ್‌ನನ್ನು ಬಾಹುಬಲಿ ಬೆಟ್ಟದ ತಪ್ಪಲಲ್ಲಿ ಹಿಡಿದು ಪೊಲೀಸರಿಗೆ ಒಪ್ಪಿಸಿದಂತಹ ತಂಡದಲ್ಲಿ ಈ ಇಬ್ಬರು ಇದ್ದರು ಮತ್ತು ಪೊಲೀಸರು ದಾಖಲಿಸಿದ್ದಂತಹ ಮಹಜರಿಗೆ ಸಹಿ ಹಾಕಿದ್ದರು. ಉದಯ್ ಜೈನ್ ಧರ್ಮಸ್ಥಳದಲ್ಲಿ ರಿಕ್ಷಾ ಚಾಲಕನಾಗಿದ್ದ. ತೊದಲು ಮಾತನಾಡುತ್ತಿದ್ದ ಆತನು ಸಹ ಯಾವುದೇ ರೀತಿಯ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದಾನೆ ಎನ್ನುವುದಕ್ಕೆ ಆತ ಮುಖ ಚಹರೆಯ ಅಂಶದಲ್ಲಿ ಕಂಡುಬರುತ್ತಿರಲಿಲ್ಲ. ಆದರೂ ಸಂತ್ರಸ್ತೆಯ ತಾಯಿ ಕೊಟ್ಟ ಮಾಹಿತಿ ಆದ್ದರಿಂದ ಅವರನ್ನು ಪ್ರಶ್ನೆ ಮಾಡಲೇಬೇಕಿತ್ತು. ಸಿಒಡಿ ಡಿವೈಎಸ್ಪಿ ರುದ್ರಮುನಿಯವರು ಆ ಮೂವರಲ್ಲಿ ಕೇಳಿದ ಮೊದಲ ಪ್ರಶ್ನೆಯೇ ನಿಶ್ಚಲ್ ಜೈನ್‌ನ ಕುರಿತಾಗಿತ್ತು. ಅದಕ್ಕೆ ಶ್ರೀ ಕ್ಷೇತ್ರ ಧರ್ಮಸ್ಥಳದ ಆಡಳಿತ ಕಚೇರಿಯಲ್ಲಿ ಸಿಬ್ಬಂದಿ ಆಗಿರುವ ಮಲ್ಲಿಕ್ ಜೈನ್‌ನ ಉತ್ತರದಿಂದ ರುದ್ರಮುನಿಯವರು ಆಲೋಚನೆ ಮಾಡುವಂತಾಗಿತ್ತು. ಯಾಕೆಂದರೆ ಧರ್ಮಸ್ಥಳ ಕ್ಷೇತ್ರದ ಧರ್ಮಾಧಿಕಾರಿಗಳು ಮತ್ತವರ ಕುಟುಂಬದ ಯಾವುದೇ ಸದಸ್ಯನ ನೇರ ಸಂಪರ್ಕ ಆ ಕ್ಷೇತ್ರದ ಸಿಬ್ಬಂದಿಗಳಿಗೆ ಅಥವಾ ಕ್ಷೇತ್ರಕ್ಕೆ ಸಂಬಂಧಪಟ್ಟಂತಹ ವ್ಯಕ್ತಿಗಳಿಗೆ ಇರುವುದಿಲ್ಲ. ಯಾಕೆಂದರೆ ಆ ಕುಟುಂಬ ಯಜಮಾನರ ಗೌರವಕ್ಕೆ ಅರ್ಹವಾಗಿದ್ದದ್ದು. ಇಂತಹ ಸಂದರ್ಭದಲ್ಲಿ ಮಲ್ಲಿಕ್ ಜೈನ್ ಸಿಒಡಿ ಡಿವೈಎಸ್ಪಿಯವರಲ್ಲಿ ಸ್ಪಷ್ಟವಾಗಿ ಹೇಳಿದ್ದು ಏನೆಂದರೆ ನಿಶ್ಚಲ್ ಜೈನ್ ಖಾವಂದರ ಸಹೋದರ ಹರ್ಷೇಂದ್ರ ಕುಮಾರ್‌ರವರ ಮಗ. ಹೆಚ್ಚಾಗಿ ಬೆಂಗಳೂರಿನಲ್ಲಿ ಇರುತ್ತಾರೆ. ಕ್ಷೇತ್ರದಲ್ಲಿ ಅಥವಾ ಬೀಡಿನಲ್ಲಿ ಯಾವುದಾದರೂ ಕಾರ್ಯಕ್ರಮಗಳಿದ್ದರೆ ಬರುತ್ತಾರೆ. ಹೆಚ್ಚಾಗಿ ಯಾರೊಂದಿಗೂ ಬೆರೆಯುವುದಿಲ್ಲ. ಮತ್ತು ಅವರು ಸದ್ಯಕ್ಕೆ ಊರಲ್ಲಿ ಇಲ್ಲ. ತಮಗೆ ಗೊತ್ತಿರುವಂತೆ ಅವರು ಉನ್ನತ ವಿದ್ಯಾಭ್ಯಾಸಕ್ಕಾಗಿ ವಿದೇಶಕ್ಕೆ ತೆರಳಿದ್ದಾರೆ. ನಾನು ಅವರನ್ನು ಮುಖತಃ ನೋಡದೆ ಸುಮಾರು ಆರು ತಿಂಗಳು ಆಗಿರಬಹುದು ಎಂದು ತಿಳಿಸಿದ್ದರು. ನಿಶ್ಚಲ್ ಜೈನ್‌ನ ವಿಚಾರವನ್ನು ಬದಿಗಿಟ್ಟು ಮಲ್ಲಿಕ್ ಜೈನ್‌ನನ್ನು ಪ್ರಶ್ನೆ ಮಾಡಿದರು. ಆತನ ಮೊಬೈಲ್ ಪಡಕೊಂಡು ನಂಬರ್ ಬರೆದಿಟ್ಟುಕೊಂಡರು. ಅಕ್ಟೋಬರ್ 9 ರಂದು ಮಧ್ಯಾಹ್ನದ ನಂತರ ಎಲ್ಲಿ ಇದ್ದೆ ಎಂಬ ಪ್ರಶ್ನೆಯನ್ನು ಮಲ್ಲಿಕ್ ಜೈನ್‌ಗೆ ಕೇಳಿದರು. ಅದಕ್ಕೆ ಮಲ್ಲಿಕ್ ತಾನು ಕೆಲಸದ ನಿಮಿತ್ತ ನಿರ್ದಿಷ್ಟ ಜಾಗಕ್ಕೆ ಹೋಗಿದ್ದು, ಬರುವಾಗ ರಾತ್ರಿಯಾಗಿತ್ತು ಎಂದು ವಿವರಿಸಿದರು, ಅವರ ದೈನಂದಿನ ಕೆಲಸ ಕಾರ್ಯಗಳ ವಿವರಗಳನ್ನು ದಾಖಲಿಸಿಕೊಂಡು ವಿಚಾರಣೆಗೆ ಕರೆದರೆ ಬರಬೇಕು ಎಂಬ ಸೂಚನೆ ನೀಡಿ ಕಳುಹಿಸಿದರು.



ಉದಯ್ ಜೈನ್

ಕುಸುಮಾವತಿಯವರು ನೀಡಿದ್ದ ಚೀಟಿನಲ್ಲಿದ್ದ ಇನ್ನೊಂದು ಹೆಸರು ಧೀರಜ್ ಕೆಲ್ಲ ಅವರದ್ದು ಸುಮಾರು 26ರ ಹರೆಯದ ಯುವಕ. ಧರ್ಮಸ್ಥಳದಲ್ಲೇ ಮನೆ ಇತ್ತು. ಮದುವೆಯಾಗಿದ್ದು, ಪತ್ನಿ ಗರ್ಭಿಣಿಯಾಗಿದ್ದರು. ತಂದೆ ಧರ್ಮಸ್ಥಳದಲ್ಲಿ ಉದ್ಯೋಗಿಯಾಗಿದ್ದರು. ಧೀರಜ್ ಅವರಿಗೆ ದೇವಸ್ಥಾನಕ್ಕೆ ಹೋಗುವ ರಸ್ತೆಬದಿಯಲ್ಲಿ ಧರ್ಮಸ್ಥಳದವರ ಕಟ್ಟಡದಲ್ಲಿ ಅಂಗಡಿ ಇತ್ತು. ಅವರ ವ್ಯವಹಾರ ಅದಾಗಿತ್ತು. ಅವರ ಅಂಗಡಿಯಿಂದ ಅನತಿ ದೂರದಲ್ಲೇ ಗೊಂದಲ ಸೃಷ್ಟಿಯಾದ ಸಂದರ್ಭದಲ್ಲಿ ನೋಡಲು ಹೋಗಿದ್ದರು. ಆಗ ಸಂತೋಷ್‌ರಾವ್‌ನನ್ನು ಸ್ಥಳೀಯರು ಹಿಡಿದಿದ್ದರು. ಪೊಲೀಸರು ದಾಖಲಿಸಿದ್ದಂತಹ ಮಹಜರಿಗೆ ಸಹಿ ಮಾಡಿದ್ದರು. ಧೀರಜ್ ಅವರಲ್ಲಿ ಅವರ ಕುಟುಂಬದ ವಿವರಗಳನ್ನು ಸಿಒಡಿ ಡಿವೈಎಸ್ಪಿಯವರು ಪಡಕೊಂಡು ಸೌಜನ್ಯ ಹತ್ಯೆಯಾದ ಸಂದರ್ಭದಲ್ಲಿ ಎಲ್ಲಿ ಇದ್ದೆ ಎಂಬ ಪ್ರಶ್ನೆಯನ್ನು ಮುಂದಿಟ್ಟರು. ಅದಕ್ಕೆ ಧೀರಜ್ ಅವರು ತಾನು ಆ ಸಂದರ್ಭದಲ್ಲಿ ಬೆಳ್ತಂಗಡಿಗೆ ಹೋಗಿದ್ದೆ. ನನ್ನ ಪತ್ನಿಯ ಸೀಮಂತಕ್ಕೆ ದಿನ ನಿಗದಿಯಾಗಿತ್ತು. ಆಮಂತ್ರಣ ಪತ್ರಿಕೆ ಮುದ್ರಿಸಿದ್ದೆವು. ಅದನ್ನು ತನ್ನ ಸಂಬಂಧಿಕರಿಗೆ ಮತ್ತು ಸ್ವಜಾತಿ ಬಾಂಧವರಿಗೆ ಹಂಚಲು ಹೋಗಿದ್ದೆ. ರಾತ್ರಿ ವೇಳೆ ವಾಪಾಸ್ಸು ಬಂದಿದ್ದೆ. ಈ ಸಂದರ್ಭದಲ್ಲಿ ನೇತ್ರಾವತಿ ಸ್ನಾನಘಟ್ಟದ ಬಳಿಯ ಮಣ್ಣಸಂಕ ಎಂಬಲ್ಲಿ ಕೆಲವರು ರಸ್ತೆಬದಿ ನಿಂತುಕೊಂಡು ಮಾತನಾಡುತ್ತಿದ್ದರು. ನಾನು ಅವರಲ್ಲಿ ಮಾತನಾಡದೆ ಮನೆಗೆ ಬಂದಿದ್ದೆ.. ಮರುದಿನ ಬೆಳಿಗ್ಗೆ ಅಂಗಡಿಗೆ ಹೋಗಿದ್ದ ಸಂದರ್ಭದಲ್ಲಿ ಉಜಿರೆ ಕಾಲೇಜಿನ ವಿದ್ಯಾರ್ಥಿನಿ ನಾಪತ್ತೆಯಾಗಿದ್ದಾಳೆ ಎಂಬ ಮಾಹಿತಿ ತಿಳಿಯಿತು. ತದನಂತರ ಆಕೆಯ ಮೃತದೇಹ ಸಿಕ್ಕಿತು ಎಂಬ ವಿಚಾರವು ಗೊತ್ತಾಯಿತು ಎಂದು ಹೇಳಿದ್ದರು. ಅವರ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿಕೊಂಡ ಸಿಒಡಿ ಡಿವೈಎಸ್ಪಿಯವರಿಗೆ ಯಾವುದೇ ಸಂಶಯಗಳು ಉಂಟಾಗಲಿಲ್ಲವಾದರೂ ಅವರ ಮೊಬೈಲ್ ನಂಬರನ್ನು ಪಡಕೊಂಡರು. ತದನಂತರ ರಿಕ್ಷಾ ಚಾಲಕ ಉದಯ್ ಜೈನ್ ಅವರನ್ನು ವಿಚಾರಿಸಿದರು. ಈ ಸಂದರ್ಭದಲ್ಲಿ ಅವರು ಆ ದಿನ ರಾತ್ರಿ ಉಜಿರೆ ಜನಾರ್ಧನ ದೇವಸ್ಥಾನದಲ್ಲಿ ನಡೆಯುತ್ತಿದ್ದ ಯಕ್ಷಗಾನ ಕಾರ್ಯಕ್ರಮಕ್ಕೆ ಹೋಗಿದ್ದೆ ಅಲ್ಲಿ ನನಗೆ ಕೆಲವು ಪರಿಚಿತರು ಸಿಕ್ಕಿದ್ದರು. ರಾತ್ರಿ ಸುಮಾರು 10 ಗಂಟೆಯ ವೇಳೆಗೆ ಉಜಿರೆಯಿಂದ ರಿಕ್ಷಾದಲ್ಲಿ ಬರುತ್ತಿದ್ದಾಗ ಮಣ್ಣಸಂಕದ ಬಳಿ ಕೆಲವು ಯುವಕರು ಹುಡುಕಾಟ ನಡೆಸುತ್ತಿದ್ದುದು ಕಂಡು ರಿಕ್ಷಾ ನಿಲ್ಲಿಸಿದ್ದೆ. ಆ ಯುವಕರ ಪರಿಚಯ ಇದ್ದುದರಿಂದ ವಿಚಾರಿಸಿದೆ. ಆ ಸಂದರ್ಭದಲ್ಲಿ ಪಾಂಗಾಳದ ಚಂದಪ್ಪ ಗೌಡರ ಮಗಳು ಸೌಜನ್ಯ ನಾಪತ್ತೆಯಾದ ವಿಚಾರ ತಿಳಿಯಿತು. ಆಕೆ ವಿಠಲ ಗೌಡರ ಸೋದರ ಸೊಸೆ ಎಂಬುದೂ ಗೊತ್ತಿತ್ತು. ತದನಂತರ ಮನೆಗೆ ಹೋದೆ. ಮರುದಿನ ಮೃತದೇಹ ಸಿಕ್ಕಿತು ಎಂಬ ಮಾಹಿತಿ ತಿಳಿದು ಸ್ಥಳಕ್ಕೂ ಹೋಗಿದ್ದೆ ಎಂದು ಘಟನೆಯ ದಿನದ ತನ್ನ ದಿನಚರಿಯನ್ನು ಬಿಚ್ಚಿಟ್ಟರು. ಅವರ ಮೊಬೈಲ್ ನಂಬರನ್ನು ಪಡೆದುಕೊಂಡರು. ಈ ಮೂವರನ್ನು ವಿಚಾರಣೆಗೊಳಪಡಿಸಿದಂತಹ ಸಿಒಡಿ ಡಿವೈಎಸ್ಪಿಯವರಿಗೆ ಅವರ ಮೇಲೆ ಯಾವುದೇ ಸಂಶಯಗಳು ಕಾಣಲಿಲ್ಲ. ಆದರೆ ಸಂತ್ರಸ್ತೆಯ ತಾಯಿ ಅವರ ಹೆಸರು ಯಾಕೆ ಪ್ರಸ್ತಾಪಿಸಿದಳು ಎಂಬ ಅಂಶಕ್ಕೆ ಸ್ಪಷ್ಟತೆ ಸಿಗಲಿಲ್ಲ. ಕುಸುಮಾವತಿಯವರ ಸಹೋದರಿ ಯಾವ ಹೊತ್ತಿನಲ್ಲಿ ಆ ನಾಲ್ವರನ್ನು ಆ ಸ್ಥಳದಲ್ಲಿ ಕಂಡಿದ್ದಳು ಎಂಬುದಕ್ಕೆ ಉತ್ತರ ಹುಡುಕಬೇಕಾದಂತಹ ಅನಿವಾರ್ಯತೆ ಇತ್ತು ಮತ್ತು ಆ ನಾಲ್ವರ ಗುರುತು ಪರಿಚಯ ಆಕೆಗೆ ಇತ್ತೇ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ ಅವರು ಕುಸುಮಾವತಿಯವರ ತಂಗಿ ಯಶೋಧಳನ್ನು ತನಿಖೆಗೆ ಒಳಪಡಿಸಲು ನಿರ್ಧರಿಸಿದ್ದರು.



ಧೀರಜ್ ಕೆಲ್ಲ



ನಿಶ್ಚಲ್ ಜೈನ್

(ಮುಂದುವರಿಯುವುದು.....)

# ಐಐಎಸ್‌ಸಿ ವಿದ್ಯಾರ್ಥಿಗಳ ಹೆಸರಲ್ಲಿ ಕೋಟಿ ಕೋಟಿ ಲೂಟಿ ಮಾಡಿದ ಕಿಲಾಡಿ ಲೇಡೀಸ್ ಅರೆಸ್ಟ್!

ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ (IISC) ವಿದೇಶಿ ಪ್ರಯಾಣ ಸಹಾಯಧನದ ಹೆಸರಿನಲ್ಲಿ 1.94 ಕೋಟಿ ರೂ. ವಂಚನೆ ನಡೆಸಿದ ಇಬ್ಬರು ಗುತ್ತಿಗೆ ನೌಕರರಾದ ಯುವತಿಯರನ್ನು ಸದಾಶಿವ ನಗರದ ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿ, ಸಂಬಂಧಿಕರ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾಯಿಸಿ ಐಷಾರಾಮಿ ಜೀವನ ನಡೆಸುತ್ತಿದ್ದರು. ಸದ್ಯ ಆರೋಪಿಗಳಿಂದ ನಿವೇಶನ, ಚಿನ್ನಾಭರಣ, ನಗದು ಹಾಗೂ ಹೊಸ ಬ್ರೆಜ್ಞಾ ಕಾರ್ ಅನ್ನು ಜಪ್ತಿ ಮಾಡಲಾಗಿದೆ. ಬಂಧಿತರು ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ವಿದ್ಯಾರ್ಥಿಗಳ ವಿದೇಶಿ ಪ್ರಯಾಣ ಸಹಾಯಧನದ



ಹೆಸರಲ್ಲಿ ಕೋಟಿ ಲೂಟಿ ಹೊಡೆದಿದ್ದರು. ಇವರಿಬ್ಬರೂ ಐಐಎಸ್ಸಿ ಯಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಯುವತಿಯರಾಗಿದ್ದಾರೆ.

ಯಶವಂತಪುರದ ವಿ.ಸೌಂದರ್ಯ (25), ಹೆಸರಘಟ್ಟ ನಿವಾಸಿ ಆರ್.ದೀಪಿಕಾ (25). ಇವರಿಗೆ ವಂಚನೆ ಮಾಡಲು ಸಹಕಾರ ನೀಡಿದ್ದ ದೀಪಿಕಾ ಪ್ರಿಯಕರ ಸಚಿನ್ ರಾವ್‌ನನ್ನು (25) ಕೂಡ ಬಂಧಿಸಲಾಗಿದೆ. ಐಐಎಸ್‌ಸಿ ರಿಜಿಸ್ಟ್ರಾರ್ ಕಚೇರಿಯಲ್ಲಿ ಕಾರ್ಯದರ್ಶಿ ಸಹಾಯಕರಾಗಿ ಗುತ್ತಿಗೆ ಆಧಾರದಲ್ಲಿ ಸೌಂದರ್ಯ ಹಾಗೂ ದೀಪಿಕಾ ಕಾರ್ಯನಿರ್ವಹಿಸುತ್ತಿದ್ದರು. 2024ರ ಜೂನ್‌ನಿಂದ 2025 ಅ.31ರ ಅಂತ್ಯದ ಅವಧಿಯಲ್ಲಿ ನಕಲಿ ದಾಖಲೆ ಸೃಷ್ಟಿಸಿ 1.94 ಕೋಟಿ ರೂ. ದುರುಪಯೋಗ ಪಡಿಸಿಕೊಂಡಿದ್ದಾರೆ. ಲಪಟಾಯಿಸಿದ್ದ ಹಣದಲ್ಲಿ ದೀಪಿಕಾ, ತನ್ನ ಪ್ರಿಯಕರ ಸಚಿನ್ ರಾವ್ ಹೆಸರಿನಲ್ಲಿ ಒಂದು ನಿವೇಶನ ಖರೀದಿಸಿದ್ದಾಳೆ. ಜೊತೆಗೆ ಚಿನ್ನ ಹಾಗೂ ವಾಹನಗಳನ್ನು ಖರೀದಿಸಿದ್ದು ಐಷಾರಾಮಿ ಜೀವನ ನಡೆಸುತ್ತಿದ್ದಳು.

ಸೌಂದರ್ಯ ಕೂಡ ತನ್ನ ಸಂಬಂಧಿಕರ ಹೆಸರಿನಲ್ಲಿ ನಿವೇಶನ ಹಾಗೂ ಇತರೆ ವಸ್ತುಗಳನ್ನು ಖರೀದಿಸಿದ್ದಳು. ಆರೋಪಿಗಳಿಂದ ಸುಮಾರು 80 ಲಕ್ಷ ರೂ.ಮೌಲ್ಯದ ಎರಡು ನಿವೇಶನ ದಾಖಲೆಗಳು. 15 ಲಕ್ಷ ರೂ.ಮೌಲ್ಯದ ಚಿನ್ನಾಭರಣ, ಹನ್ನೊಂದು ಲಕ್ಷ ರೂ. ನಗದು ಹಾಗೂ ಒಂದು ಬ್ರೆಜ್ಞಾ ಕಾರು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

### ವಂಚನೆ ಮಾಡಿದ್ದು ಹೇಗೆ?

ಐಐಎಸ್ಸಿ ವಿದ್ಯಾರ್ಥಿಗಳು ಅಧ್ಯಯನ ಕಾರಣಕ್ಕಾಗಿ ವಿದೇಶಗಳಿಗೆ ತೆರಳಲು ಅವಕಾಶವಿದೆ. ಇದಕ್ಕೆ ತಗಲುವ ವೆಚ್ಚವನ್ನು ಸಂಸ್ಥೆಯು ಸಹಾಯಧನದ ರೂಪದಲ್ಲಿ ಮಂಜೂರು ಮಾಡುತ್ತದೆ. ಈ ಕುರಿತ ವಿದ್ಯಾರ್ಥಿಗಳ ಮನವಿ ಅರ್ಜಿಗಳು ಹಾಗೂ ಸಹಾಯಧನ ಮಂಜೂರು ದಾಖಲೆಗಳು ರಿಜಿಸ್ಟ್ರಾರ್‌ರಿಂದ ಅನುಮೋದನೆ ಪಡೆಯಬೇಕಿತ್ತು. ಈ ದಾಖಲೆಗಳನ್ನು ಕಾರ್ಯದರ್ಶಿಗಳ ಸಹಾಯಕರಾಗಿದ್ದ ಸೌಂದರ್ಯ ಹಾಗೂ ದೀಪಿಕಾ ನಿರ್ವಹಣೆ ಮಾಡುತ್ತಿದ್ದರು.



ಡಿಸಿಪಿ ಹಾಕೇ ಅಕ್ಷಯ್ ಮಚ್ಚಿಂದ್ರ

ವಿದ್ಯಾರ್ಥಿಗಳ ಸಹಾಯಧನದಲ್ಲಿಯೇ ಹಣ ದೋಚುವ ಸಂಚು ರೂಪಿಸಿದ್ದ ಇಬ್ಬರೂ, ಸಹಾಯಧನ ಮಂಜೂರಾಗುವ ವಿದ್ಯಾರ್ಥಿಗಳ ಅರ್ಜಿಗಳ ಜತೆಗೆ ಹಾಗೂ ಹಳೆಯ ವಿದ್ಯಾರ್ಥಿಗಳ ಹೆಸರುಗಳನ್ನು ಸೇರಿಸುತ್ತಿದ್ದರು! ಜೊತೆಗೆ, ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗಳಿಗೆ ತಮ್ಮ ಸಂಬಂಧಿಕರ ಹಾಗೂ ಅಪ್ತರ ಅಕೌಂಟ್ ನಂಬರ್‌ಗಳನ್ನು ಸೇರಿಸುತ್ತಿದ್ದರು. ಈ ಮುಖಾಂತರ ಹಂತ ಹಂತವಾಗಿ ನಕಲಿ ಬ್ಯಾಂಕ್ ಖಾತೆಗಳಿಗೆ 1,94,33,700 ಮಂಜೂರು ಮಾಡಿಸಿಕೊಂಡಿದ್ದರು. ದೀಪಿಕಾ ತನ್ನ ಪ್ರಿಯಕರ ಸಚಿನ್ ರಾವ್ ಹೆಸರಿನಲ್ಲಿಯೂ ಸಹಾಯಧನ ಮಂಜೂರು ಮಾಡಿಸಿಕೊಂಡಿದ್ದರು ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದರು.



ಆರೋಪಿಗಳಾದ ಸೌಂದರ್ಯ, ಸಚಿನ್ ರಾವ್ ಹಾಗೂ ದೀಪಿಕಾ

### ಬಯಲಾಗಿದ್ದೇಗೆ ಗೊತ್ತಾ?

ಕೆಲ ತಿಂಗಳಲ್ಲಿಅತಿ ಹೆಚ್ಚು ವಿದ್ಯಾರ್ಥಿಗಳಿಗೆ ಸಹಾಯಧನ ಮಂಜೂರಾಗಿದ್ದು, ಈ ಪೈಕಿ ಕೆಲವು ವಿದ್ಯಾರ್ಥಿಗಳು ಈಗಾಗಲೇ ಉತ್ತೀರ್ಣರಾಗಿ ಸಂಸ್ಥೆ ತೊರೆದಿದ್ದರು. ಅವರ ಹೆಸರಲ್ಲಿನೂ ಸಹಾಯಧನ ಮಂಜೂರಾಗಿರುವುದು ಕಂಡು ಬಂದಿತ್ತು. ಇದರಿಂದ ಅನುಮಾನಗೊಂಡ ರಿಜಿಸ್ಟ್ರಾರ್, ಆಂತರಿಕ ತನಿಖೆಗೆ ಆದೇಶಿಸಿದ್ದರು. ತನಿಖೆಯಲ್ಲಿ ಸೌಂದರ್ಯ ಹಾಗೂ ದೀಪಿಕಾ ಕರಾಮತ್ತು ಬಯಲಾಗಿದ್ದರಿಂದ ಪೊಲೀಸರಿಗೆ ದೂರು ನೀಡಿದ್ದರು. ತನಿಖೆಯಲ್ಲಿ1.94 ಕೋಟಿ ರೂ. ದುರ್ಬಳಕೆ ಧೃಡಪಟ್ಟಿದ್ದು ಈ ಪ್ರಮಾಣ ಹೆಚ್ಚಾಗುವ ಸಾಧ್ಯತೆಯಿದೆ. ಆರೋಪಿಗಳಾದ ದೀಪಿಕಾ ಹಾಗೂ ಸೌಂದರ್ಯರನ್ನು ಪರಪ್ಪನ ಅಗ್ರಹಾರ ಜೈಲಿಗೆ ಕಳಿಸಲಾಗಿದೆ. ಆರೋಪಿ ಸಚಿನ್ ರಾವ್‌ನನ್ನು ಪೊಲೀಸ್ ಕಸ್ಟಡಿಗೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ. ☯

# ಧರ್ಮಸ್ಥಳದ ಬುರುಡೆ ಗ್ಯಾಂಗ್ ಜೈಲಿನತ್ತ!

11 ☞


ತನ್ನ ಮಗಳು ಅನನ್ಯಭಟ್ ಧರ್ಮಸ್ಥಳದಲ್ಲಿ ಕಾಣೆಯಾಗಿದ್ದು, ಆಕೆ ವೈದ್ಯಕೀಯ ಪದವಿ ಕಲಿಯುತ್ತಿದ್ದಳು. ತಾನು ಕೋಲ್ಕತ್ತಾದ ಸಿಬಿಐ ಕಚೇರಿಯಲ್ಲಿ ಸ್ಟೆನೋಗ್ರಾಫರ್ ಆಗಿದ್ದೆ. ಆಕೆಯನ್ನು ಹುಡುಕಿಕೊಂಡು ಬಂದಾಗ ಧರ್ಮಸ್ಥಳದವರು ತನ್ನ ಮೇಲೆ ಹಲ್ಲೆ ನಡೆಸಿದ್ದರು ಎಂದು ಹೇಳಿಕೊಂಡಿದ್ದರು. ಈ ಎಲ್ಲಾ ವಿಚಾರಗಳು ಒಂದಕ್ಕೊಂದು ಪೂರಕವಾಗಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಸುದ್ದಿಯಾಯಿತು. ದೇವಸ್ಥಾನ ನಗರಿಯಲ್ಲಿ ಸಾಮೂಹಿಕ ಅಂತ್ಯಕ್ರಿಯೆ ನಡೆದಿದೆ ಎಂದು ಗುಲ್ಲೆಬ್ಬಿಸಲಾಯಿತು. ಈ ಬಗ್ಗೆ ತನಿಖೆ ನಡೆದಾಗ ಎಲ್ಲಾ ಆರೋಪಗಳಿಗೆ ಸೂಕ್ತ ಸಾಕ್ಷ್ಯಾಧಾರ ದೊರೆಯಲಿಲ್ಲ. ಬದಲಾಗಿ ಧರ್ಮಸ್ಥಳದ ವಿರುದ್ಧ ನಡೆಸಿದಂತಹ ಷಡ್ಯಂತ್ರ ಎಂಬುದು ತನಿಖೆಯಲ್ಲಿ ಖಚಿತವಾಯಿತು. ತನಿಖೆ ನಡೆಸಿದಂತಹ ಎಸ್‌ಐಟಿಯು 3923 ಪುಟಗಳ ತನಿಖಾ ವರದಿಯನ್ನು ಬೆಳ್ತಂಗಡಿ ಜೆಎಫ್‌ಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದು, ಈ ಷಡ್ಯಂತ್ರದಲ್ಲಿ ಮುಸುಕುಧಾರಿಯಾಗಿದ್ದ ಚೆನ್ನಯ್ಯ, ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ವಿಠಲಗೌಡ, ಟಿ. ಜಯಂತ್, ಸುಜಾತಾ ಭಟ್ ಆರೋಪಿಗಳು ಎಂದು ನಮೂದಿಸಿದೆ. ಈಗಾಗಲೇ ಚೆನ್ನಯ್ಯ ಬಂಧನಕ್ಕೊಳಗಾಗಿ ಶಿವಮೊಗ್ಗ ಜೈಲಿನಲ್ಲಿದ್ದು, ಉಳಿದ ಆರೋಪಿಗಳನ್ನು ಬಂಧಿಸಿ ಮುಂದುವರಿದ ತನಿಖೆ ನಡೆಸಲು ಸೂಕ್ತ ನಿರ್ದೇಶನ ನೀಡಬೇಕು ಎಂದು ಕೋರಲಾಗಿದೆ. ನ್ಯಾಯಾಲಯ ನೀಡುವ ಸೂಚನೆಯ ಅನ್ವಯ ಮುಂದಿನ ಕ್ರಮ ನಡೆಯಲಿದೆ.

### ಜಾಮೀನಿಗೆ ಅರ್ಜಿ



ಸುಜಾತ ಭಟ್

ಮುಸುಕುಧಾರಿ ಚೆನ್ನಯ್ಯ ಆರಂಭದಲ್ಲಿ ಬೆಳ್ತಂಗಡಿ ನ್ಯಾಯಾಲಯಕ್ಕೆ ಬಂದ ಸಂದರ್ಭದಲ್ಲಿ ಇಬ್ಬರು ವಕೀಲರು ಇದ್ದರು. ಎಸ್‌ಐಟಿಯಿಂದ ತನಿಖೆಗೊಳಗಾಗುವಾಗಲೂ ಆ ವಕೀಲರು ಇದ್ದರು. ಯಾವಾಗ ಚೆನ್ನಯ್ಯ ಆರೋಪಿಯಾಗಿ ಬದಲಾದನೋ ವಕೀಲರು ಕೈಕೊಟ್ಟರು. ವಿಚಾರಣೆಗೆ ಹಾಜರಾಗಲು ಎಸ್‌ಐಟಿ ಅಧಿಕಾರಿಗಳು ನೋಟೀಸು ಕೊಡಲು ಹುಡುಕಾಟ ನಡೆಸಿದರೂ ವಕೀಲರು ಕೈಗೆ ಸಿಗಲಿಲ್ಲ. ಕೊನೆಗೆ ನ್ಯಾಯಾಲಯವೇ ಕಾನೂನು ನೆರವು ಪ್ರಾಧಿಕಾರದಿಂದ ಚೆನ್ನಯ್ಯನಿಗೆ ವಕೀಲರ ನೆರವು ನೀಡಿತು. ಚೆನ್ನಯ್ಯನನ್ನು ಬಂಧಿಸಿ 90 ದಿನಗಳು ಕಳೆದರೂ ಎಸ್‌ಐಟಿಯು ಆರೋಪ ಪಟ್ಟಿ ಸಲ್ಲಿಸಲಿಲ್ಲ ಎಂಬ ತಾಂತ್ರಿಕ ಕಾರಣವನ್ನು ಮುಂದೊಡ್ಡಿ ಆತನ ಪರ ವಕೀಲರು ಜಾಮೀನು ಅರ್ಜಿ ಸಲ್ಲಿಸಿದ್ದಾರೆ. ಇದೇ ಸಂದರ್ಭದಲ್ಲಿ ಎಸ್‌ಐಟಿಯು ಮಧ್ಯಂತರ ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆ. ನ್ಯಾಯಾಲಯದಿಂದ ಮುಂದಿನ ಕ್ರಮಕ್ಕಾಗಿ ನಿರ್ದೇಶನ ಕೋರಿದೆ. ಒಟ್ಟಾರೆಯಾಗಿ ಈ ಪ್ರಕರಣ ಕಾನೂನಿನ ತೂಗುಕತ್ತಿಯ ಮೇಲೆ ನಿಂತಿದೆ. ಎಸ್‌ಐಟಿ ಹೊರಿಸಿರುವ ಆರೋಪವನ್ನು ನ್ಯಾಯಾಲಯ ಒಪ್ಪಿಕೊಂಡರೆ ಆರೋಪಿಗಳಾದ ಮಹೇಶ್ ಶೆಟ್ಟಿ ತಿಮರೋಡಿ, ಗಿರೀಶ್ ಮಟ್ಟಣ್ಣನವರ್, ಟಿ. ಜಯಂತ್, ವಿಠಲಗೌಡ, ಮತ್ತು ಸುಜಾತಾ ಭಟ್ ಬಂಧನಕ್ಕೆ ವಾರಂಟ್ ಹೊರಡಿಸುವ ಸಾಧ್ಯತೆಗಳು ಇವೆ. ಈ ರೀತಿ ಆದರೆ ಅವರು ಜೈಲಿಗೆ ನಡೆಯಲಿದ್ದಾರೆ. ಈ ಷಡ್ಯಂತ್ರದಲ್ಲಿ ಭಾಗಿಗಳಾದ ಇವರೆಲ್ಲರನ್ನೂ ಎಸ್‌ಐಟಿ ವಶಕ್ಕೆ ತೆಗೆದುಕೊಂಡು ತನಿಖೆ ನಡೆಸುವಂತಹ ಸಂದರ್ಭದಲ್ಲಿ ಮತ್ತೇ ಹಲವು ಆರೋಪಿಗಳು ಎಸ್‌ಐಟಿ ಬಲೆಗೆ ಬೀಳಲಿದ್ದಾರೆ. ಅವರಲ್ಲಿ ಪ್ರಮುಖರೆಂದರೆ ಯೂಟ್ಯೂಬ್ ಚಾನೆಲ್‌ಗಳಲ್ಲಿ ನಿರಂತರವಾಗಿ ಸುಳ್ಳು ವರದಿಗಳನ್ನು ಬಿತ್ತರಿಸಿ ಜನಸಾಮಾನ್ಯರ ಭಾವನೆಗಳಿಗೆ ಕೊಡಲಿ ಏಟು ಹಾಕಿದವರು. ಎಸ್‌ಐಟಿ ಮೂಲಗಳ ಪ್ರಕಾರವೇ ಈ ಷಡ್ಯಂತ್ರದಲ್ಲಿ ಸುಮಾರು 30ಕ್ಕೂ ಹೆಚ್ಚು ಮಂದಿ ಭಾಗಿಗಳಾಗಿದ್ದಾರೆ. ಕೋಟ್ಯಾಂತರ ರೂ. ಚಲಾವಣೆ ಆಗಿದೆ. ☯



# ರೌಡಿ ಸೈಫು ಹತ್ಯೆಯ ತನಿಖೆ ದಿಕ್ಕು ತಪ್ಪುತ್ತಿದೆಯಾ?


ಸೈಫುದ್ದೀನ್

ಉಡುಪಿಯ ರೌಡಿಶೀಟರ್, ಎಕೆಎಮ್‌ಎಸ್ ಬಸ್ ಮಾಲೀಕ ಸೈಫುದ್ದೀನ್ ಎಂಬಾತನನ್ನು ಮಲ್ಪೆ ಪೊಲೀಸ್ ಠಾಣೆ ವ್ಯಾಪ್ತಿಯ ಕೊಡವೂರು ಎ.ಕೆ. ಕಾಟೇಜ್‌ನಲ್ಲಿ ಸೆಪ್ಟೆಂಬರ್ 28ರಂದು ಬೆಳಿಗ್ಗೆ ತಲವಾರಿನಿಂದ ಕಡಿದು ಕೊಲೆಗೈಯ್ಯಲಾಗಿದೆ. ಸೈಫುದ್ದೀನ್ ಮೇಲೆ ಎರಡು ಕೊಲೆ ಪ್ರಕರಣಗಳು ಸೇರಿದಂತೆ ಒಟ್ಟು 23 ಕ್ರಿಮಿನಲ್ ಪ್ರಕರಣಗಳು ದಾಖಲಾಗಿದ್ದವು. ಆತನನ್ನು ಮಣಿಪಾಲದ ಮನೆಯಿಂದ ಆತನದೇ ಕಾರಿನಲ್ಲಿ ಕರೆದುಕೊಂಡು ಬಂದು ಹತ್ಯೆ ಮಾಡಲಾಗಿತ್ತು. ಹಂತಕರು ಆತನದ್ದೇ ಸಹವರ್ತಿಗಳಾಗಿದ್ದರು. ಹಂತಕರು ಅದೇ ದಿನ ಮಲ್ಪೆ ಪೊಲೀಸ್ ಠಾಣೆಗೆ ಸರೆಂಡರ್ ಆಗಿದ್ದರು. ಇದೀಗ ಈ ಪ್ರಕರಣದಲ್ಲಿ ಸೈಫುದ್ದೀನ್‌ನ ಜೊತೆಗಿದ್ದ ಅಕ್ರಮ್ ಎಂಬಾತನ ನೆರಳು ಕಾಣಿಸಿಕೊಳ್ಳುತ್ತಿದೆ. ಆತ ಮಧ್ಯಪ್ರಾಚ್ಯ ದೇಶದಲ್ಲಿ ಕುಳಿತುಕೊಂಡು ಇಲ್ಲಿನ ಪೊಲೀಸ್ ವ್ಯವಸ್ಥೆಯನ್ನು ನಿಭಾಯಿಸುತ್ತಿದ್ದಾನೆ ಎಂಬ ಸಂಶಯವನ್ನು ಸೈಫುದ್ದೀನ್‌ನ ಕುಟುಂಬಿಕರು ವ್ಯಕ್ತಪಡಿಸುತ್ತಿದ್ದಾರೆ. ಪ್ರಕರಣದ ತನಿಖೆ ನಡೆಸುತ್ತಿರುವ ಮಲ್ಪೆ ಠಾಣಾ ಇನ್ಸ್‌ಪೆಕ್ಟರ್ ರಾಮಚಂದ್ರ ನಾಯಕ್ ಅವರು ಹಂತಕರೊಂದಿಗೆ ಶಾಮೀಲಾಗಿದ್ದಾರೆ ಎಂಬ ಆರೋಪವನ್ನು ಸೈಫುದ್ದೀನ್ ಸಹೋದರೆ ಸಾಯಿರಾ ಬಾನು ಹೊರಿಸುತ್ತಿದ್ದಾರೆ. ಪ್ರಕರಣದ ತನಿಖೆಯನ್ನು ಬೇರೆ ಇನ್ಸ್‌ಪೆಕ್ಟರ್ ದರ್ಜೆಯ ಅಧಿಕಾರಿಗೆ ವಹಿಸಬೇಕು ಎಂಬ ಆಗ್ರಹ ಅವರದ್ದು. ಈ ಬಗ್ಗೆ ಅವರು ಜಿಲ್ಲಾ ಎಸ್ಪಿ ಹರಿರಾಮ್ ಶಂಕರ್ ಅವರಿಗೆ ದೂರು ನೀಡಿದ್ದಾರೆ. ಅದರ ಪ್ರತಿಗಳನ್ನು ಮುಖ್ಯಮಂತ್ರಿಗಳು ಸಹಿತ ಹಿರಿಯ ಅಧಿಕಾರಿಗಳಿಗೆ ಕಳುಹಿಸಿದ್ದಾರೆ. ಆ ದೂರಿನ ಯಥಾವತ್ ಪ್ರತಿ ಇಲ್ಲಿದೆ.

ರಿಂದ,  
ಸಾಯಿರಾ ಬಾನು  
ಕೋಂ. ಮುನಾವರ್,  
ವಿಳಾಸ : 1-115, ಕೆಳಾ ಆತ್ರಾಡಿ,  
ಆತ್ರಾಡಿ ಗ್ರಾಮ, ಉಡುಪಿ ತಾಲೂಕು  
ಮತ್ತು ಜಿಲ್ಲೆ




ರಿಗೆ,  
ಪೊಲೀಸ್ ಅಧೀಕ್ಷಕರು  
ಅಧೀಕ್ಷಕರ ಕಛೇರಿ,  
ಉಡುಪಿ ತಾಲೂಕು ಮತ್ತು ಜಿಲ್ಲೆ,

ಮಾನ್ಯರೇ,

ವಿಷಯ: ಮಲ್ಪೆ ಪೊಲೀಸ್ ಠಾಣೆಯಲ್ಲಿ ದಾಖಲಾದ ಅಪರಾಧ ಸಂಖ್ಯೆ 108/2025 ಈ ಪ್ರಕರಣದ ತನಿಖಾಧಿಕಾರಿಯನ್ನು ಬದಲಾಯಿಸಿ ನಿಷ್ಪಕ್ಷಪಾತ, ಪ್ರಾಮಾಣಿಕ ಮತ್ತು ದಕ್ಷ ತನಿಖಾಧಿಕಾರಿಗೆ ಈ ಪ್ರಕರಣವನ್ನು ತನಿಖೆಗೆ ವರ್ಗಾಯಿಸುವ ಬಗ್ಗೆ :

ನಾನು ಮೇಲಿನ ವಿಳಾಸದಲ್ಲಿ ವಾಸವಾಗಿದ್ದು, ಮಲ್ಪೆ ಪೊಲೀಸ್ ಠಾಣಾ ಸಂಖ್ಯೆ 108/2025ರಲ್ಲಿ ಹತ್ಯೆಗೀಡಾದ ಸೈಫುದ್ದೀನ್‌ನಿಗೆ ಸಹೋದರಿಯಾಗಿರುತ್ತೇನೆ. ನನ್ನ ತಮ್ಮ ಸೈಫುದ್ದೀನ್ ಮತ್ತು ಉಡುಪಿಯ ಸಂತೆಕಟ್ಟೆ ನಿವಾಸಿ ಅಕ್ರಮ್ ಈ ಹಿಂದೆ ಎಕೆಎಮ್‌ಎಸ್ ಎಂಬ ಬಸ್ ಸಂಸ್ಥೆಯನ್ನು ನಡೆಸುತ್ತಿದ್ದು ಹಾಗೂ ಮುಂಬೈಯಲ್ಲಿ ಬಾರ್ ಮತ್ತು ಹೋಟೆಲ್ ವ್ಯವಹಾರವನ್ನು ಸಹಾ


ಸೈಫುದ್ದೀನ್ ಕೊಲೆಯಾದ ಸ್ಥಳ

ನಡೆಸುತ್ತಿದ್ದರು. ಸದ್ರಿ ಅಕ್ರಮ್ ನನ್ನ ತಮ್ಮನೊಟ್ಟಿಗೆ ವ್ಯವಹಾರದಲ್ಲಿ ಪಾಲುದಾರನಾಗಿರುತ್ತಾನೆ. ಹಾಗೂ ನನ್ನ ತಮ್ಮನ ಆತ್ಮೀಯ ಸ್ನೇಹಿತನೂ ಕೂಡಾ ಆಗಿದ್ದ. ಮೊನ್ನೆ ದಿನಾಂಕ: 27-09-2025ರಂದು ಕೊಡವೂರು ಗ್ರಾಮದಲ್ಲಿರುವ ಸಾಲುಮರದ ಬಳಿ ಸೈಫುದ್ದೀನ್ ತನ್ನ ಮನೆಯಲ್ಲಿಯೇ ಕೊಲೆಯಾಗಿದ್ದು, ಇದಕ್ಕೆ ಸಂಬಂಧಿಸಿ ಮಲ್ಪೆ ಪೊಲೀಸ್ ಠಾಣೆಯಲ್ಲಿ ಮೇಲಿನಂತೆ ಪ್ರಕರಣ ದಾಖಲಾಗಿರುತ್ತದೆ. ಕೊಲೆಯಾಗಿ ಇಷ್ಟು ದಿನ ಕಳೆದರೂ ಪೋಲಿಸರು ತನಿಖೆಯನ್ನು ಚುರುಕುಗೊಳಿಸದೆ ಪ್ರಕರಣವು ಆಯ ತಪ್ಪುತ್ತಿರುವ ಬಗ್ಗೆ ನಮಗೆ ಸಂಶಯ ಉಂಟಾಗುತ್ತಿದೆ. ಸೈಫುದ್ದೀನ್ ಈ ಹಿಂದೆ ಮುಂಬೈ ನಿವಾಸಿ ವಸಿಷ್ಟ ಯಾದವ್‌ನ ಕೊಲೆ ಪ್ರಕರಣದಲ್ಲಿ ಆರೋಪಿಯಾಗಿದ್ದು ಈ ಪ್ರಕರಣದಲ್ಲಿ ಸೈಫುದ್ದೀನ್‌ನ ಪಾಲುದಾರ ಅಕ್ರಮ್ ಹಾಗೂ ಸೈಫುದ್ದೀನ್‌ನ ಕೊಲೆ ಮಾಡಿದ ಆರೋಪಿಗಳಾದ ಶರೀಫ್ ಹಾಗೂ ಅಬ್ದುಲ್ ಶುಕೂರ್ ಸಹ ಆರೋಪಿಗಳಾಗಿದ್ದರು. ಸದ್ರಿ ಪ್ರಕರಣವು ಉಡುಪಿ ನ್ಯಾಯಾಲಯದಲ್ಲಿ ಖುಲಾಸೆಗೊಂಡಿರುತ್ತದೆ. ಹಾಗೂ ನನ್ನ ತಮ್ಮ ಸೈಫುದ್ದೀನ್ ವಸಿಷ್ಟ ಯಾದವ್‌ನ ಕೊಲೆಯಲ್ಲಿ ಭಾಗಿಯಾದ ಇತರ ಆರೋಪಿಗಳೊಂದಿಗೆ ದಿನನಿತ್ಯ ಅಕ್ರಮ್ ಸಹಾ ಓಡಾಡುತ್ತಿದ್ದು ಅವರೊಂದಿಗೆ ಫೈಸಲ್‌ಖಾನ್, ಆತನ ಹೆಂಡತಿ ರಿದಾ ಶಬಾನ ಇವರುಗಳೇ ನನ್ನ ತಮ್ಮನ ಮಣಿಪಾಲದ ನಿವಾಸಕ್ಕೆ ಬಂದು ಕರೆದುಕೊಂಡು ಹೋಗಿ ತನ್ನ ತಮ್ಮನ ಕೊಡವೂರು ಗ್ರಾಮದ ಮನೆಯಲ್ಲಿ ಕೊಲೆ ಮಾಡಿರುತ್ತಾರೆ. ನನ್ನ ತಮ್ಮನ ಕೊಲೆಯಾಗುವುದಕ್ಕಿಂತ ಸ್ವಲ್ಪ ದಿನ ಮುಂಚೆ ನನ್ನ ತಮ್ಮನ ಪಾಲುದಾರ ಅಕ್ರಮ್ ಪೂರ್ವಯೋಜಿತವಾಗಿ ವಿದೇಶಕ್ಕೆ ತೆರಳಿರುತ್ತಾನೆ. ಈತ ಈ ಹಿಂದೆ ವಸಿಷ್ಟ ಯಾದವ್‌ನ


ಸೈಫುದ್ದೀನ್‌ನನ್ನ ಕೊಂದ ಆರೋಪಿಗಳು

ಕೊಲೆಯಾಗುವ ಸಂದರ್ಭದಲ್ಲಿ ಸಹಾ ಸ್ವಲ್ಪ ದಿನ ಮುಂಚಿತವಾಗಿ ವಿದೇಶಕ್ಕೆ ತೆರಳಿರುತ್ತಾನೆ. ಹಾಗೂ ಉಡುಪಿಯ ಕೆಮ್ಮಣ್ಣು ನಿವಾಸಿ ತಸ್ಲಿಮ್‌ನ ಕೊಲೆ ಪ್ರಕರಣದಲ್ಲಿ ಅಕ್ರಮ್‌ನ ಹೆಸರು ಮುಂಚೂಣಿಯಲ್ಲಿ ಕೇಳಿ ಬಂದಿದ್ದು, ಈ ಕೊಲೆ ಸಂದರ್ಭದಲ್ಲೂ ಅಕ್ರಮ್ ತಸ್ಲಿಮ್ ಕೊಲೆಯಾಗುವ ಸ್ವಲ್ಪ ದಿನ ಮುನ್ನ ವಿದೇಶಕ್ಕೆ ಹೋಗಿ ತಲೆಮರೆಸಿಕೊಂಡಿದ್ದ. ಈಗ ಈ ಪ್ರಕರಣದಲ್ಲೂ ಸಹಾ ನನ್ನ ತಮ್ಮನ ಮೃತದೇಹ ನೋಡಲು ವಿದೇಶದಿಂದ ಬಂದಿರುವುದಿಲ್ಲ.

ಇವೆಲ್ಲವೂ ಆತನ ಪ್ರಕರಣದಿಂದ ತಪ್ಪಿಸಿಕೊಳ್ಳುವ ಪೂರ್ವಯೋಜಿತ ಕೃತ್ಯವಾಗಿರುತ್ತದೆ. ಕೊಲೆಯಾಗಿ ಇಷ್ಟು ದಿನ ಕಳೆದರೂ ಈತ ನಮಗೆ ನನ್ನ ತಮ್ಮನೊಂದಿಗಿದ್ದ ವ್ಯವಹಾರದ ಬಗ್ಗೆಯೂ ಯಾವುದೇ ಮಾಹಿತಿಯನ್ನಾಗಲೀ ಅಥವಾ ವ್ಯವಹಾರದ ಲೆಕ್ಕಗಳನ್ನು ಸೈಫುದ್ದೀನ್ ಕುಟುಂಬಕ್ಕೆ ನೀಡಿರುವುದಿಲ್ಲ. ಇದನ್ನೆಲ್ಲ ಗಮನಿಸುವಾಗ ನಮಗೆ ಈ ಪ್ರಕರಣದಲ್ಲಿ ಇನ್ನು ಕೆಲವು ಕಾಣದ ಕೈಗಳು ಇರಬಹುದು ಹಾಗೂ ಅಕ್ರಮ್‌ನ ಮೇಲೂ ಸಂಶಯ ವ್ಯಕ್ತವಾಗಿರುತ್ತದೆ. ಸದ್ರಿ ವಿಚಾರ ಹೀಗಿರುವಾಗ ಪೊಲೀಸರು ಈತನನ್ನು ಈ ವರೆಗೂ ವಿಚಾರಣೆಗೆ ಒಳಪಡಿಸದಿರುವುದು ಆಶ್ಚರ್ಯವಾಗಿರುತ್ತದೆ. ಮತ್ತು ಆತನನ್ನು ಕಾನೂನು ಪ್ರಕ್ರಿಯೆಯಂತೆ ಭಾರತಕ್ಕೆ ತರಿಸಿಕೊಳ್ಳಲು ಮತ್ತು ವಿಚಾರಣೆಗೆ ಒಳಪಡಿಸಲು ಕಾನೂನು ಕ್ರಮ ಕೈಗೊಂಡಿರುವುದಿಲ್ಲ. ಈ ಮೊದಲೇ ಪೊಲೀಸರಿಗೆ ನಾವು ಕೆಲವೊಂದು ನಮಗೆ ಸಂದೇಹವಿದ್ದ ವ್ಯಕ್ತಿಗಳ ಹೆಸರನ್ನು ನೀಡಿದ್ದು ಅವರುಗಳ ಮೇಲೆ ಪೂರಕವಾದ ಸಾಕ್ಷಿಗಳು ಇದ್ದರು ಸಹಾ ಪೊಲೀಸರು ಇವರ ಮೇಲೂ ಯಾವುದೇ ವಿಚಾರಣೆಯನ್ನು ಮಾಡದಿರುವುದು ಸಂದೇಹಕ್ಕೆ ಎಡೆಮಾಡಿಕೊಟ್ಟಿರುತ್ತದೆ. ಅಷ್ಟೇ ಅಲ್ಲದೇ ಈಗಾಗಲೇ ಬಂಧಿತವಾದ ಆರೋಪಿಗಳು ಕೊಲೆ ಮಾಡಿ ತಾವಾಗಿಯೇ ಮಲ್ಪೆ ಪೊಲೀಸ್ ಠಾಣೆಗೆ ಬಂದು ರಾಜಾರೋಶವಾಗಿ ಶರಣಾಗಿರುವುದು ಮೇಲ್ನೋಟಕ್ಕೆ ನೋಡುವಾಗ ಈ ಪ್ರಕರಣದಲ್ಲಿ ಆರೋಪಿಗಳಿಗೆ ಈ ಕೊಲೆ ಮಾಡಲು ಬಂಡವಾಳವನ್ನು ಬೇರೆಯವರು ಮಾಡಿರಬಹುದು ಹಾಗೂ ಇವರಿಗೆ ಎಲ್ಲಾ ರೀತಿಯ ಸಹಾಯವನ್ನು ಒದಗಿಸುತ್ತಿದ್ದಾರೆ ಎಂಬ ಶಂಕೆ ಮೇಲ್ನೋಟಕ್ಕೆ ಕಂಡುಬರುತ್ತದೆ. ಈ ಬಗ್ಗೆ ಪೊಲೀಸರು ತನಿಖೆ ಮಾಡುವಲ್ಲಿ ವಿಫಲರಾಗಿರುತ್ತಾರೆ. ಅಷ್ಟೇ ಅಲ್ಲದೇ ಕೊಲೆಯಾದ ಮನೆಯಲ್ಲಿ ಸಿಸಿ ಟಿವಿಗಳನ್ನು ಅಳವಡಿಸಲಾಗಿದ್ದು ಪೊಲೀಸರು ಈವರೆಗೆ ಸಿಸಿ ಟಿವಿಯ ದೃಶ್ಯಾವಳಿಯನ್ನು ನಮಗೆ ತೋರಿಸಿರುವುದಿಲ್ಲ. ಮತ್ತು ಸಂಶಯಿತ ವ್ಯಕ್ತಿಗಳ ಬಗ್ಗೆ ಗುರುತು ಪತ್ತೆ ಹಚ್ಚುವ ಪ್ರಕ್ರಿಯೆಯನ್ನು ಸಹಾ ಕೈಗೊಂಡಿರುವುದಿಲ್ಲ. ಅಲ್ಲದೆ ತನಿಖೆಯ ಯಾವುದೇ ಮಾಹಿತಿಯನ್ನು ನಮಗೆ ನೀಡಿರುವುದಿಲ್ಲ. ಸರಿ ವಿಚಾರಗಳನ್ನೆಲ್ಲ ಗಮನಿಸುವಾಗ ನನ್ನ ತಮ್ಮನ ಪ್ರಕರಣ ಎಲ್ಲೋ ದಾರಿ ತಪ್ಪುತ್ತಿರುವುದಾಗಿ ಮತ್ತು ಆರೋಪಿಗಳಿಗೆ ಸ್ವತಹ ಪೊಲಿಸರೇ ಸಹಾಯ ಹಸ್ತಾ ನೀಡುತ್ತಿರುವುದು ಕಂಡುಬರುತ್ತದೆ. ಆರೋಪಿಗಳಿಗೆ ಪೋಲೀಸ್ ಠಾಣೆಯಲ್ಲಿ ಆರೋಪಿಗಳಂತೆ ನೋಡದೆ ಅವರಿಗೆ ರಾಜ ಮರ್ಯಾದೆಯನ್ನು ನೀಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಇಲ್ಲಿ ಉಡುಪಿಯ ಕೆಲವೊಂದು ಪೋಲೀಸರು ಆರೋಪಿಗಳೊಂದಿಗೆ ಶಾಮೀಲಾಗಿದ್ದು ಈ ಪ್ರಕರಣದ ಇನ್ನು ಉಳಿದ ಆರೋಪಿಗಳನ್ನು ರಕ್ಷಿಸುವಲ್ಲಿ ತಮ್ಮ ಪಾತ್ರವನ್ನು ನಿರ್ವಹಿಸುವ ಬಗ್ಗೆ ನಮಗೆ ಸಂದೇಹವಿರುತ್ತದೆ. ಅಲ್ಲದೆ ಈಗಾಗಲೇ ಕೆಲವು ಆರೋಪಿಗಳನ್ನು ತನಿಖೆಗೆ ಒಳಪಡಿಸಿ ಅವರಿಂದ ಹಣ ಪಡೆದು ಬಿಟ್ಟಿರುತ್ತಾರೆ ಎಂದು ಸಾರ್ವಜನಿಕ ವಲಯದಲ್ಲಿ ಕೇಳಿಬರುತ್ತದೆ. ಆದ್ದರಿಂದ ತಾವುಗಳು ಪೋಲಿಸ್ ವ್ಯವಸ್ಥೆಯ ವಿಶ್ವಾಸ ಗಳಿಸುವ ದೃಷ್ಟಿಯಲ್ಲಿ ಈ ಮೇಲಿನ ಪ್ರಕರಣವನ್ನು ವಿಚಾರಣೆ ಮಾಡುತ್ತಿರುವ ತನಿಖಾಧಿಕಾರಿಯಿಂದ ಹಿರಿಯ ಹಾಗೂ ನಿಷ್ಪಕ್ಷಪಾತ, ಪ್ರಾಮಾಣಿಕ ಮತ್ತು ದಕ್ಷ ತನಿಖಾಧಿಕಾರಿಗೆ ಈ ಪ್ರಕರಣವನ್ನು ವರ್ಗಾಯಿಸಿ, ನನ್ನ ತಮ್ಮನ ಕೊಲೆಗೆ ಕಾರಣವಾದವರ ವಿರುದ್ಧ ಸೂಕ್ತ ಕಾನೂನು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಮೇಲಿನಂತೆ ಕೇಳಿಕೊಳ್ಳುತ್ತೇನೆ.


ರಿದಾ ಶಬನಮ್

ತಮ್ಮ ವಿಶ್ವಾಸಿ  
(ಸಾಯಿರಾ ಬಾನು)  
ಸ್ಥಳ: ಉಡುಪಿ  
ದಿನಾಂಕ : 30-10-2025

ಈ ದೂರಿನ ಹಿನ್ನೆಲೆಯಲ್ಲಿ ತನಿಖೆಯ ದೃಷ್ಟಿ ಬದಲಾಗುವುದೋ ಎಂದು ನೋಡಬೇಕಾಗಿದೆ. ಅಕ್ರಮ್‌ನನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿಸಿ ವಿದೇಶದಿಂದ ಗಡಿಪಾರು ಮಾಡಿಸಿಕೊಳ್ಳಲಾಗುತ್ತದೆಯೇ ಎನ್ನುವುದನ್ನು ಕಾದುನೋಡಬೇಕಿದೆ.




# ಅಪ್ಪ ಬಿರುಸಾದ ಹೊರ ಕವಚ, ಅಮ್ಮ ಒಳಗಿರುವ ಮೃದು...

ಇದು ಬಹುತೇಕ ಮಕ್ಕಳ ಅನುಭವದ ಮಾತು.

ಬಹುಷಃ ಈ ಮಾತು 20 ವರ್ಷ ಈಚೆ ಹುಟ್ಟಿನ ಮಕ್ಕಳ ಅನುಭವ ಆಗದೇ ಇರಬಹುದು. ಅದಕ್ಕೂ ಹಿಂದಿನ ಯಾವೊಬ್ಬ ಮಗಮಗಳನ್ನು ನಿದ್ದೆಗಣ್ಣಿನಲ್ಲಿ ಎಬ್ಬಿಸಿ ಕೇಳಿದರೂ ಇದೇ ಉತ್ತರ ಸಿಗುತ್ತದೆ.

ಅಪ್ಪನ ಖದರ್‌ರೇ ಅಂತದ್ದು, ಮಕ್ಕಳು ಹತ್ತು ರೂ. ಬೇಕು ಅಂದರೂ, ಅಪ್ಲಿಕೇಷನ್ ಅಮ್ಮನ ಮೂಲಕವೇ ಪಾಸ್ ಆಗಬೇಕು. ಅದೂ ಅಪ್ರೂವ್ ಆಗಲು ಅಪ್ಪನ ಮೂಡು ಇಲ್ಲ ಕೆಲವೊಮ್ಮೆ ಅಮ್ಮನ ಹುಸಿಮುನಿಸೂ ಕಾರಣವಾಗುತ್ತಿತ್ತು. ಅನೇಕ ಸಂದರ್ಭ ಅಪ್ಪನ ಕೈನಿಂದ ಬರುವ ಕಾಸು ಅಮ್ಮನ ಕೈಸೇರುವವರೆಗೂ ಮಕ್ಕಳು ಅಮ್ಮನ ಸೆರಗ ಹಿಂದೆಯೇ ನಿಂತು, ಕಾತರದಿಂದ ಕಾಯಬೇಕಾಗುತ್ತಿತ್ತು. ಕೆಲವೊಮ್ಮೆ ಹಣ ಸಿಗದೇ ನಿರಾಶರಾಗಿ ಅತ್ತು ಕರೆದದ್ದೂ ಇದೆ. ಆದರೆ ಆತ ಅಪ್ಪ, ಹಾಗೆಲ್ಲಾ ಜಗ್ಗಲ್ಲ. ಕಣ್ಣೀರು ಹಾಕಿದ್ದೂ ವೇಸ್ಟಾದ ಸನ್ನಿವೇಶ ಹೆಚ್ಚಿರುತ್ತಿದ್ದವು.

ಹಾಗಂತ ಅಪ್ಪನಿಗೆ ಮಕ್ಕಳ ಮೇಲೆ ಪ್ರೀತಿ, ಅಕ್ಕರೆ, ಕಾಳಜಿ ಇರುತ್ತಿರಲಿಲ್ಲ ಅಂತಲ್ಲ, ಈಗಿನ ಅಪ್ಪಂದಿರಷ್ಟೇ ಇತ್ತು. ಆದರೆ ಮಕ್ಕಳು ಬೆಳೆದಂತೆ ಅವರಿಗೆ ಸ್ನೇಹಿತರಾಗಬೇಕೆಂಬ ಇಂದಿನ ತತ್ತ್ವಸಿದ್ಧಾಂತ ಅಂದು ಅಳವಡಿಕೆ ಆಗುತ್ತಿರಲಿಲ್ಲ. ಅಪ್ಪನದು ಒಂಥರಾ ಹಠ. ಬದುಕು ಅವನನ್ನು ಹಾಗೆ ಮಾಡಿ ಬಿಡುತ್ತಿತ್ತು. ಅದರಲ್ಲೂ ಅಪ್ಪ ಅವಿಭಕ್ತ ಕುಟುಂಬದ ಯಜಮಾನ ಆಗಿದ್ದರಂತೂ ಮುಗಿದೇ ಹೋಯಿತು. ಸೋದರಿಯರು, ಸೋದರರ ಮದುವೆ ಮಾಡಿಸುವುದು, ದೈನಂದಿನ ನಿರ್ವಹಣೆಗೆ ಹಣ ಹೊಂದಿಸುವುದು, ಆಗಾಗ ಕಾಡುವ ಮನೆ ಸದಸ್ಯರ ಅನಾರೋಗ್ಯ, ಆಳುಕಾಳುಗಳಿಗೆ ಕಾಲಕಾಲಕ್ಕೆ ಪಗಾರ ಜತೆಗೆ ಒಂದಿಷ್ಟು ಮುಂಗಡ ಕೊಡಲು ವ್ಯವಸ್ಥೆ ಮಾಡಿಕೊಳ್ಳಬೇಕಿತ್ತು. ಪರಿಸ್ಥಿತಿಯ ಒತ್ತಡ, ಜಂಜಡಗಳ ಮಧ್ಯೆ ಮಕ್ಕಳ ಮೇಲೆ ಪ್ರೀತಿಗಿಂತ ಬೇರೆ ಅನಿವಾರ್ಯಗಳಿಂದ ಬರುವ ಸಿಟ್ಟೇ ಪ್ರಧಾನವಾಗಿ ಮುಖದಲ್ಲಿ ಗೋಚರಿಸುತ್ತಿತ್ತು.

ಈ ಕಾಲಾವಧಿಯ ಯಾವುದೇ ಮಕ್ಕಳನ್ನು ಕೇಳಿನೋಡಿ ಅಪ್ಪನ ಚಿತ್ರಣ ಒಂದೇ ರೀತಿ ಇರುತ್ತೆ. ಸಿಟ್ಟು, ಹಣೆ, ಮುಖ ಗಂಟಿಕ್ಕಿಕೊಂಡೇ ಇರುತ್ತಾನೆ, ನಕ್ಕಿದ್ದು ಕಂಡಿದ್ದೇ ಕಡಿಮೆ, ಸೋದರಿಯರ ವಿವಾಹದಲ್ಲಿ ಸಹ ನಗುನಗುತ್ತಾ ಓಡಾಡಿದ್ದು ಕಂಡಿಲ್ಲ. ಮಕ್ಕಳ ಮದುವೆ ಹೊತ್ತಿಗೆ ಅವನೇ ಹೈರಾಣಾಗಿ ಬಿಟ್ಟಿರುತ್ತಿದ್ದ. ನಿಧನರಾದ ತಂದೆಯ ಫೋಟೊ ಗೋಡೆಗೇರಿಸಿಡಲು ಒಂದು ಉತ್ತಮವಾದ, ನಗುತ್ತಿರುವ ಚಿತ್ರಕ್ಕಾಗಿ ಮಕ್ಕಳು ಹುಡುಕಾಡದ ಸ್ಥಳ ಇರಲ್ಲ. ಮನೆಯ ಆಲ್ಬಂ, ಸಂಬಂಧಿಕರ ಮದುವೆಯ ಸಂದರ್ಭದ ಫೋಟೊ, ಮನೆಯಲ್ಲಿ ಹಮ್ಮಿಕೊಂಡು ವಿವಿಧ ಸಮಾರಂಭ, ಧಾರ್ಮಿಕ ಕಾರ್ಯಕ್ರಮದ ಸಮಯದಲ್ಲಿ ಮೊಬೈಲ್‌ನಲ್ಲಿ ತೆಗೆದ ಚಿತ್ರವನ್ನೂ ತಡಕಾಡುವ ಸ್ಥಿತಿ ಇರುತ್ತದೆ. ಅಪ್ಪ ಹುಟ್ಟುವಾಗಲೇ ಗಂಭೀರವಾಗಿದ್ದನಾ, ಆಮೇಲೆ ಆದನಾ ಅನ್ನುವ ಪ್ರಶ್ನೆಗೆ ಉತ್ತರವೇ ಸಿಗಲ್ಲ, ಕೆಲ ಮಕ್ಕಳಿಗೆ ಅಪ್ಪ ನಕ್ಕಿದ್ದನ್ನು ನೋಡುವ ಅವಕಾಶವೇ ಸಿಕ್ಕಿರಲ್ಲ, ಅಮ್ಮನನ್ನು ಕೇಳಿದರೂ ಅವರಿಂದಲೂ ಪ್ರಶ್ನಾರ್ಥಕ ಚಿಹ್ನೆ, ಹತ್ತಾರು ನಿಮಿಷ ಯೋಚನೆ ಹಾಗೂ ಊನಾನೂ ನೋಡಿಲ್ಲಟ ಅನ್ನುವ ಉತ್ತರವೇ ಬರುತ್ತದೆ. ಅಪ್ಪನಿಗೆ ಉತ್ತಮ ಚಪ್ಪಲಿಯ ಆಸೆ ಇಲ್ಲಾ, ಶರ್ಟು, ಪ್ಯಾಂಟ್ ಯಾವಾಗ ಹೊಲಿಸಿದ್ದು ಅನ್ನುವುದು ಗೊತ್ತಿರಲ್ಲಾ, ಸಾಕು ನಾಯಿಯನ್ನು ಒಮ್ಮೊಮ್ಮೆ ಚೆನ್ನಾಗಿ ಮಾತನಾಡಿಸುವುದನ್ನು ಕಾಣಬಹುದು, ಮಕ್ಕಳನ್ನು ಮುದ್ದುಮಾಡಿದ್ದು ಕಾಣಲು ಸಾಧ್ಯವೇ ಇಲ್ಲ. ಅಪ್ಪ ಘನಗಂಭೀರ. ಮಕ್ಕಳ ಮೇಲೆ ಅಪಾರ ಪ್ರೀತಿ, ಆದರೆ ಅದನ್ನು ಹೊರಗೆ ತೋರಿಸಿಕೊಳ್ಳಲ್ಲ.

ಆದರೆ ಅಮ್ಮ ಹಾಗಲ್ಲ, ಆಕೆ ಒಂಥರಾ ಗಡಿಗೆಯೊಳಗಿನ ತಣ್ಣೀರು. ತಂಪು ಮತ್ತು ಅಮೃತ ಸಮಾನ. ಮಕ್ಕಳ ಎಲ್ಲಾ ಒತ್ತಡಗಳಿಗೆ ಉತ್ತರ. ಬಾಲ್ಯದಿಂದ ಬೆಳೆದು ನಿಲ್ಲುವವರೆಗಿನ ಮಕ್ಕಳ ಕಾಳಜಿ ಅಮ್ಮನದ್ದೇ. ಮಕ್ಕಳಲ್ಲಿ ಉತ್ತಮ ಸಂಸ್ಕಾರ ಬರುವುದು ತಾಯಿಯಿಂದ. ಅವಳು ಬೆಳೆಸುವ ರೀತಿ ಮೇಲೆ ಸಂಸ್ಕಾರ ನಿರ್ಧಾರವಾಗುತ್ತದೆ. ಇದನ್ನರಿತ ಆಕೆ ಬೇರೆ ಯಾವುದೇ ಒತ್ತಡ ಇದ್ದರೂ ಅದನ್ನು ಕಾಣಸಿಗದಂತೆ ಕಾಪಾಡಿಕೊಂಡು ಮಕ್ಕಳನ್ನು ಬೆಳೆಸುವ ಸವಾಲನ್ನು ಯಶಸ್ವಿಯಾಗಿ ಮಾಡುತ್ತಾಳೆ. ಮನೆಯ ಒಳಗಿನ ಜವಾಬ್ದಾರಿಯನ್ನೆಲ್ಲಾ ಅಪ್ಪನಿಗೆ ಹೆಗಲುಕೊಟ್ಟು ಮುಂದುವರಿಸಿಕೊಂಡು ಹೋಗುವುದು ಅಮ್ಮನೇ. ಅವಳಿಗೆ ಮಕ್ಕಳ ಹೊಣೆಗಾರಿಕೆ ಹೆಚ್ಚುವರಿಯಾಗಿ ಬರುತ್ತದೆ. ಅದನ್ನು ಸವಾಲಾಗಿ ಸ್ವೀಕರಿಸಿ ನಿಭಾಯಿಸಿ ಮಕ್ಕಳನ್ನು ಸಮರ್ಥರನ್ನಾಗಿಸುತ್ತದೆ. ಗ್ರಾಮೀಣ ಭಾಗದ ಗೃಹಿಣಿಯಾಗಿರಲಿ, ಪಟ್ಟಣದಲ್ಲಿ ಉದ್ಯೋಗನಿರತರಾಗಿರಲಿ, ಮಕ್ಕಳ ವಿಚಾರದಲ್ಲಿ ಅಮ್ಮ ಅಮ್ಮನೇ. ಅದರಿಂದಲೇ ಅಪ್ಪ ಬಿರುಸಾದ ಹೊರಕವಚ, ಅಮ್ಮ ಒಳಗಿರುವ ಮೃದು. ಹಾಗಿದ್ದರೇ ಜೀವನ. ಕುಟುಂಬ ವ್ಯವಸ್ಥೆ ಯಶಸ್ವಿಯಾಗಿ ಸಾಗಿದ್ದು, ವಿಚ್ಛೇಧನ ಅನ್ನುವ ಪದ ಆ ಕಾಲದಲ್ಲಿ ಅರ್ಥಕಳೆದುಕೊಂಡಿದ್ದು ಸಹ ಇದೇ ಕಾರಣಕ್ಕೆ.

ಅಪ್ಪನ ಒರಟುತನ ಅರ್ಥಮಾಡಿಕೊಂಡ ಅಮ್ಮನ ಹೊಂದಾಣಿಕೆ ಬದುಕನ್ನು ಸುಗಮ ಗೊಳಿಸಿತ್ತು. ಅಪ್ಪನನ್ನು ಇನ್ನಷ್ಟು ಸಿಂಪಲ್ಲಾಗಿ ಅರ್ಥಮಾಡಿಸಬೇಕೆಂದರೆ ಒಮ್ಮೆ ಪ್ರಕಾಶ್ ರೈ ಅಭಿನಯದ ಮನೋಜ್ಞ ಚಿತ್ರಗಳಾದ ಬೊಮ್ಮರಿಲ್ಲು (ತೆಲುಗು), ಸೀತಮ್ಮ ವಾಕಿಟ್ಲೋ ಸಿರಿಮಲ್ಲೆ ಚೆಟ್ಟು (ತೆಲುಗು), ಶತಮಾನಂಭವತಿ (ತೆಲುಗು) ರವಿಶಂಕರ್ ಅಭಿನಯದ ಕೋಟಿಗೊಬ್ಬ2, ಕಾಶೀನಾಥ್ ಅವರ ಚೌಕ....ಚಿತ್ರಗಳನ್ನು ಒಮ್ಮೆ ನೋಡಿದರೆ ಸಾಕು. ನಿಮಗೆ ಅಪ್ಪನ ಕ್ಯಾರೆಕ್ಟರ್ ಪರಿಚಯವಾಗುತ್ತದೆ.

ಸಿಟ್ಟು ಮೂಗಿನ ತುದಿಯಲ್ಲೇ ಇರುತ್ತದೆ, ಸದಾ ಚಡಪಡಿಕೆಯಲ್ಲೇ ಇರುತ್ತಾನೆ, ಉತ್ತಮ ಬಟ್ಟೆ ಕೊಂಡು ಧರಿಸಿದ್ದು ಕಾಣುವುದೇ ಇಲ್ಲ, ಮಕ್ಕಳ ಮದುವೆಯಲ್ಲೂ ಬೇರೆಯ ಚಡಪಡಿಕೆಯಲ್ಲಿರುವ ವ್ಯಕ್ತಿಯನ್ನು ಅಪ್ಪ ಅನ್ನಬಹುದು. ಇನ್ನು ಅಮ್ಮನಿಗೆ ಬೇರೆ ವಿವರಣೆ ಬೇಡ. ಮೃದುತನಕ್ಕೆ ಮತ್ತೊಂದು ಹೆಸರು ಆಕೆ. ಅಪ್ಪನ ಎಲ್ಲಾ ಹಠದ ಸ್ವಭಾವನ್ನು ಸಹಿಸಿಕೊಳ್ಳುವ, ಅವನ ಆತಂಕಕ್ಕೆ, ಸಂಕಟ, ಸಮಸ್ಯೆಗೆ ಹೆಗಲು ಕೊಡುವ ವ್ಯಕ್ತಿ ಅವಳೊಬ್ಬಳೇ. ಸೋದರರ ಆಸ್ತಿ ತಕರಾರು, ಸೋದರಿಯರ ಕೌಟುಂಬಿಕ ಸಮಸ್ಯೆ, ಮಕ್ಕಳ ಅನಾರೋಗ್ಯ, ಶೈಕ್ಷಣಿಕ ಪ್ರಗತಿ ಇತ್ಯಾದಿ ಎಲ್ಲಾ ವಿಚಾರಕ್ಕೂ ಅಪ್ಪನಿಗೆ ಹೆಗಲು ಕೊಡುವವಳು ಅಮ್ಮನೇ.

ಅಪ್ಪಅಮ್ಮ ಕೇವಲ ವ್ಯಕ್ತಿಗಳಲ್ಲ. ಅವರು ಒಂದಾಗಿದ್ದರೆ ದೊಡ್ಡ ಶಕ್ತಿ. ಮಕ್ಕಳ ಪಾಲಿಗೆ ಅವರೇ ಸ್ಫೂರ್ತಿ. ಬದಲಾದ ಕಾಲಕ್ಕೆ ಅಪ್ಪನ ಕ್ಯಾರೆಕ್ಟರ್ ಕೊಂಚ ಮೃದುವಾಗಿರಬಹುದು, ಆದರೆ ಆತನಿಗೆ ತನ್ನ ಅಪ್ಪ ಹೇಗಿದ್ದ ಎಂಬ ಅರಿವು ಇದ್ದೇ ಇದೆ. ಒರಟನಾದರೂ ಅಪ್ಪ ಆಪ್ಯಾಯಮಾನನೇ ಆಗಿದ್ದ. ಹೆದರಿಕೆಗೋ, ಗೌರವಕ್ಕೋ ಅವನ ಮುಂದೆ ಮಕ್ಕಳು ತಗ್ಗಿ, ಬಗ್ಗಿ ನಡೆದುಕೊಳ್ಳುತ್ತಿದ್ದರು. ಕಾಲ ಬದಲಾಗಿದೆ. ಅಪ್ಪನ ಹೊರ ಚಹರೆ, ನಡವಳಿಕೆ ಹಾವಭಾವವೂ ಬದಲಾಗಿದೆ. ಆದರೂ ಅಪ್ಪ ಒರಟನಾಗಿದ್ದಾಗಲೇ ಚೆನ್ನಾಗಿದ್ದ, ಆಗ ಎಲ್ಲೋ ಎಲ್ಲವೂ ಸರಿಯಾಗಿತ್ತು. ಈಗ ಎಲ್ಲವೂ ಬದಲಾಗಿದೆ. ಅಪ್ಪನ ಪಾತ್ರ ಮೊದಲಿನಷ್ಟು ಪವರ್ ಫುಲ್ ಆಗಿಲ್ಲ ಅನ್ನಿಸುತ್ತಿದೆ... ಮೃದು ಧೋರಣೆ ತಳೆದಿದ್ದೇ ತಪ್ಪಾಗಿ ಹೋಯ್ತಾ..?!

☯

# ಸ್ಕೆಚ್ ಹಾಕಿದ್ದೆ ಕಾನ್‌ಸ್ಟೇಬಲ್ ಅಣ್ಣಪ್ಪ ನಾಯ್ಕ್!

7 ☞ ಹೆಚ್ಚಿನ ಭದ್ರತಾ ಕ್ರಮಗಳನ್ನು ಜಾರಿಗೊಳಿಸುತ್ತೇವೆ... ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸುವ ಏರ್ಪಾಡು ಮಾಡುತ್ತೇವೆ ಎಂದು ಹೇಳಿ ತನಿಖಾ ತಂಡಕ್ಕೆ ಬಹುಮಾನ ಘೋಷಿಸಿದ್ದಾರೆ.

ಅಂದಹಾಗೆ, ಈ ದರೋಡೆಯು ವೆಬ್ ಸೀರೀಸ್‌ನಿಂದ ಪ್ರೇರಣೆ ಪಡೆದಿದೆ ಎಂದು ತನಿಖೆಯಲ್ಲಿ ತಿಳಿದು ಬಂದಿದ್ದು, ಆರೋಪಿಗಳು ಪರಪ್ಪನ ಅಗ್ರಹಾರ ಜೈಲಿನೊಂದಿಗೆ ಸಂಬಂಧ ಹೊಂದಿದ್ದಾರೆಯೇ ಎಂದು ಪರಿಶೀಲಿಸಲಾಗುತ್ತಿದೆ. ದರೋಡೆಕೋರರು ಡೈರಿ ಸರ್ಕಲ್ ಬಳಿ ಸಿಬ್ಬಂದಿಯನ್ನು ಬಿಟ್ಟುಬಿಟ್ಟು, ವ್ಯಾನ್‌ನ್ನು ಹೊಸೂರು ರಸ್ತೆಯಲ್ಲಿ ತೊರೆದುಹೋಗಿದ್ದರು.



ಈಗ ಆರೋಪಿಗಳ ವಿಚಾರಣೆಯಿಂದ ಹೊಸ ಸಾಕ್ಷ್ಯಗಳು ಬಹಿರಂಗವಾಗುತ್ತಿವೆ. ಒಟ್ಟಾರೆಯಾಗಿ, ಈ ಪ್ರಕರಣವು ರಾಜ್ಯದಲ್ಲಿ ಭದ್ರತಾ ವ್ಯವಸ್ಥೆಯ ಬಗ್ಗೆ ಚರ್ಚೆಗೆ ಕಾರಣವಾಗಿದ್ದು, ಸಾರಿಗೆ ಕಂಪನಿಗಳು ಹೆಚ್ಚಿನ ಸುರಕ್ಷತಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತದೆ.

ನವೆಂಬರ್ 19ರ ಬುಧವಾರ ಅಶೋಕ ಪಿಲ್ಲರ್ ಜಂಕ್ಷನ್ ಬಳಿಯ ರಸ್ತೆಯಲ್ಲಿ ಸಿಎಂಎಸ್ ಸೆಕ್ಯೂರಿಟಿ ಏಜೆನ್ಸಿಯ ಎಟಿಎಂ ಕ್ಯಾಶ್ ವ್ಯಾನ್ ಮೇಲೆ ಏಕಾಏಕಿ ದರೋಡೆಗಾರರು ದಾಳಿ ಮಾಡಿದ್ದರು. ಆರ್‌ಬಿಐ ಅಧಿಕಾರಿಗಳಂತೆ ಡ್ರೆಸ್ ಧರಿಸಿದ 56 ಮಂದಿ ಆಕ್ರಮಣಕಾರರು ವ್ಯಾನ್‌ನ್ನು ನಿಲ್ಲಿಸಿ, ಸಿಬ್ಬಂದಿಯನ್ನು ಧಮಕಿ ಹಾಕಿ, 7.11 ಕೋಟಿ ರೂಪಾಯಿ ದೋಚಿದ್ದರು. ದರೋಡೆಗಾರರು ವ್ಯಾನ್‌ನ ಡಿವಿಆರ್ (ಸಿಸಿಟಿವಿ ರೆಕಾರ್ಡರ್) ಸಹ ತೆಗೆದುಕೊಂಡಿದ್ದರಿಂದ ಆಂತರಿಕ ದೃಶ್ಯಗಳು ಲಭ್ಯವಾಗಿಲ್ಲ. ದರೋಡೆಯ ನಂತರ 45 ನಿಮಿಷಗಳ ನಂತರ ಮಾಹಿತಿ ಕಾಲ್ ಬಂದಿದ್ದರಿಂದ ಇನ್‌ಸೈಡರ್ ಮೇಲೆ ಶಂಕೆ ಮೂಡಿತ್ತು. ಈಗ ಅವರೆಲ್ಲರೂ ನಿಟ್ಟುಸಿರು ಬಿಟ್ಟಿದ್ದಾರೆ. ಕಾನ್‌ಸ್ಟೇಬಲ್ ಅಣ್ಣಪ್ಪ ನಾಯ್ಕ್ ಜೆ.ಪಿ. ನಗರದ ಪೊಲೀಸ್ ಲಾಕ್ ಅಪ್‌ನಲ್ಲಿ ಗ್ಯಾಸ್ ಬಿಡ್ತಾ ಇದ್ದಾನೆ!!

☯




# ಸಾಹಿತಿ ಪತ್ರಕರ್ತ ಶ್ರೀನಿವಾಸ ಜೋಕಟ್ಟೆ ಅವರಿಗೆ ಪತ್ನಿ ವಿಯೋಗ



ಸಾಹಿತಿ ಪತ್ರಕರ್ತ ಮುಂಬಯಿಯ ಜನಪ್ರಿಯ ಕರ್ನಾಟಕ ಮಲ್ಲ ದೈನಿಕದ ಹಿರಿಯ ಉಪಸಂಪಾದಕ ಶ್ರೀನಿವಾಸ ಜೋಕಟ್ಟೆ ಅವರ ಪತ್ನಿ ಕವಯಿತ್ರಿ ಜಯಲಕ್ಷ್ಮೀ ಜೋಕಟ್ಟೆ(55) ಅವರು ನವಂಬರ್ 24 ರಂದು ಬೆಳಗ್ಗೆ ಲಘು ಹೃದಯಾಘಾತದಿಂದ ನಿಧನರಾದರು.

ಮೂಲತ: ಉಡುಪಿ ಜಿಲ್ಲೆಯ ಬ್ರಹ್ಮಾವರದ ಶ್ರೀ ಮಹಾಲಿಂಗೇಶ್ವರ ದೇವಸ್ಥಾನ ಸುತ್ತಿನ ಕೆರೆಕಟ್ಟೆ ಮಹಾಗಣಪತಿ ದೇವಸ್ಥಾನದ ಮನೆತನದವರಾಗಿರುವ ಜಯಲಕ್ಷ್ಮಿ ಅವರು ಹಲವಾರು ಕವನಗಳನ್ನು ರಚಿಸಿದ್ದು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ನೂಪುರ ಪರಿಸರ ಕಾವ್ಯ ಸ್ಪರ್ಧೆಯಲ್ಲಿ ದ್ವಿತೀಯ ಬಹುಮಾನ ಪಡೆದಿದ್ದರು. ಸಮಷ್ಟಿ ಹೊತ್ತಿಗೆ, ಮಯೂರ, ಕರ್ಮವೀರ, ಯುಗಪುರುಷ ದೀಪಾವಳಿ... ಮೊದಲಾದ ಪತ್ರಿಕೆಗಳಲ್ಲಿ ಇವರ ಕವನಗಳು ಪ್ರಕಟವಾಗಿವೆ.ಮುಂಬಯಿ ಆಕಾಶವಾಣಿಯಲ್ಲಿ ಇವರ ಲೇಖನಗಳು, ಸಂದರ್ಶನ ಕಾರ್ಯಕ್ರಮಗಳು ಪ್ರಸಾರವಾಗಿವೆ.



☯

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 23.11.2025

# ಚಿತ್ರಹಿಂಸೆ ದೂರು ಕೊಟ್ಟ ಹೀರೋಯಿನ್! ಲಿವ್ ಇನ್ ಇದ್ದ ನಿರ್ಮಾಪಕನ ವರ್ಷನ್ ಏನು?

ಅರವಿಂದ್ ರೆಡ್ಡಿ ಮಹಾರಾಜ ಬಳ್ಳಾರಿ ಟಸ್ಕರ್ಸ್ ಕ್ರಿಕೆಟ್ ತಂಡದ ಮಾಲೀಕ. ಸಿನಿಮಾ ಪ್ರೊಡ್ಯೂಸರ್ ಕೂಡಾ ಹೌದು. ಚಲನಚಿತ್ರ ನಟ, ನಟಿಯರಿಗಾಗಿಯೇ ಹಲವು ಕ್ರಿಕೆಟ್ ಪಂದ್ಯಾವಳಿ ಕೂಡ ಆಯೋಜಿಸಿದ್ದ. ಅರವಿಂದ್ ರೆಡ್ಡಿ ಒಡೆತನದ ಎವಿಆರ್ ಗ್ರೂಪ್ ದುಬೈ, ಶ್ರೀಲಂಕಾ ಸೇರಿದಂತೆ ಹಲವು ಕಡೆ ನಡೆದ ಟೂರ್ನಮೆಂಟ್‌ಗೆ ಸ್ಪಾನ್ಸರ್ ಮಾಡಿತ್ತು.

ಬಿಗ್ ಬಾಸ್ ಮಾಜಿ ಸ್ಪರ್ಧಿಯೂ ಆಗಿರುವ, 8 ಕನ್ನಡ ಚಲನಚಿತ್ರಗಳಲ್ಲಿ ನಾಯಕಿಯಾಗಿರುವ ನಟಿ, ಈತನ ವಿರುದ್ಧ ಕಿರುಕುಳದ ದೂರು ಕೊಟ್ಟಿದ್ದಾರೆ.



ಆಕೆಯು ದೂರನ್ನು ಕೇಳಿದ ಮೇಲೆ... ನಿರ್ಮಾಪಕನ ವರ್ಷನ್ ಕೂಡಾ ತಿಳಿದುಕೊಳ್ಳಬೇಕಲ್ವೇ. ಆ ನಟಿ ನನಗೆ ಗೊತ್ತು. ಆಕೆಗಾಗಿ ನಾನು 3 ಕೋಟಿಗೂ ಹೆಚ್ಚು ಖರ್ಚು ಮಾಡಿದ್ದೇನೆ. ಆಕೆಯ ಜೊತೆ ಆತ್ಮೀಯತೆ ಇದ್ದಿದ್ದು ನಿಜ. ಆದರೆ... ಹುಡುಗ ಮನೆಗೆ ಬಂದು ಹೋಗೋದು ಗೊತ್ತಾಯ್ತು. ಅದನ್ನ ಕೇಳಿದಾಗ ನಾವಿಬ್ಬರೂ ದೂರ ಆದೆವು. 2023ರಲ್ಲಿ ಶ್ರೀಲಂಕಾದ ಟೂರ್ನಮೆಂಟ್‌ನಲ್ಲಿ ಪರಿಚಯವಾದೆವು. ನಂತರ ನನಗೆ ನನ್ನ ಸ್ನೇಹಿತರಿಗೆ ಹತ್ತಿರವಾದರು. ಬಳಿಕ ಲಿವ್ ಇನ್ ರಿಲೇಷನ್ ಶಿಪ್ ಸ್ಟಾರ್ಟ್ ಆಯ್ತು.

ಇವರು ಒಬ್ಬ ಹುಡುಗನ ಜೊತೆ ತಾಂಜೇನಿಯಾ ಟ್ರಿಪ್ ಹೋಗಿದ್ರು. ಬಳಿಕ ಹುಡುಗ ಮನೆಗೆ ಇವಳ ಮನೆಗೆ ಬಂದು ಹೋಗೋದು ಗೊತ್ತಾಯ್ತು. ಅದನ್ನ ಕೇಳಿದಾಗ ನಾವಿಬ್ಬರೂ ದೂರ ಆದೆವು. ಅವಳಿಗಾಗಿ 3 ಕೋಟಿಗೂ ಹೆಚ್ಚು ಖರ್ಚು ಮಾಡಿದ್ದೇನೆ. ಫ್ಲ್ಯಾಟ್ ಕೊಡಿಸಿದ್ದೇನೆ. ಪೋರ್ಷೆ ಕಾರು ಕೊಡಿಸಿದ್ದೇನೆ. ಅವಳ ತಮ್ಮನ ಮನೆ ಗೃಹಪ್ರವೇಶಕ್ಕೂ ಸಹಾಯ ಮಾಡಿದ್ದೆ. ಹೀಗಿದ್ದರೂ ಅವಳು ನನ್ನ ಬಿಟ್ಟು ಬೇರೆ ವ್ಯಕ್ತಿ ಜೊತೆಗೆ ಕಾಣಿಕೊಳ್ಳುತ್ತಿದ್ದಳು. ನಾನು ಯಾವುದೇ ಕಿರುಕುಳ ನೀಡಿಲ್ಲ, ಅವಳೇ ನನಗೆ ಮೋಸ ಮಾಡಿದ್ದಾಳೆ ಎನ್ನುವುದು ನಿರ್ಮಾಪಕ ಅರವಿಂದ್ ರೆಡ್ಡಿ ವಾದ.

'ಇಸವಿ 2024ರಲ್ಲಿ ಅವರ ಫೋಟೋಗಳನ್ನ ತಪ್ಪಾಗಿ ಅರ್ಥ ಬರುವಂತೆ ಪೋಸ್ಟ್ ಮಾಡಿದ್ದೀನಿ ಅಂತ ಆರೋಪ ಮಾಡಿದ್ರು. ಅದಕ್ಕೂ ನನಗೂ ಸಂಬಂಧ ಇರಲಿಲ್ಲ. ಅವಳ ಫ್ಯಾನ್ಸ್ ಗ್ರೂಪ್‌ನವರೇ ಮಾಡಿದ್ದರು. ಇನ್ನು ಅವರ ಮನೆ




ಓನರ್‌ಗೆ ಫೋಟೋ ಶೇರ್ ಮಾಡಿದ್ದೀನಿ ಎಂದು ಆರೋಪಿಸಿದ್ದಾರೆ. ಅದೂ ನನಗೆ ಗೊತ್ತಿರಲಿಲ್ಲ. ಬಿಸಿನೆಸ್ ಮೇಲೆ ಹೋಗಿದ್ದಾಗ ನೋಟಿಸ್ ಕೊಟ್ಟಿದ್ದಾರೆ. ವಾಪಸ್ ಬರುತ್ತಿದ್ದಂತೆ ಅರೆಸ್ಟ್ ಮಾಡಿದ್ದಾರೆ. ಯಾರು ಲೆಟರ್, ಫೋಟೋ ಕಳಿಸಿದ್ದಾರೆ ನನಗಂತೂ ಗೊತ್ತಿಲ್ಲ. ದುಬೈ ಸೈಮಾಗೆ ತಾಂಜೇನಿಯಾಗೆ ಹೋಗಲು ಸ್ಪಾನ್ಸರ್ ಮಾಡಿ ಕಳಿಸಿದ್ದೆ. ಅವರಿಗೆ ನನ್ನ ಪಾರ್ಟನರ್ ಆಗಿ ಏನು ಮಾಡಬೇಕು ಮಾಡ್ತಿದ್ದೆ. ಆದ್ರೆ ಆ ಹುಡುಗ ಜೊತೆ ರೆಗ್ಯೂಲರ್ ಇಂಟರಾಕ್ಟ್ ಮಾಡ್ತಿದ್ರು ಅನ್ನೋದು ಅರವಿಂದ್ ರೆಡ್ಡಿ ಪ್ರತ್ಯಾರೋಪ.

ಇವರಿಬ್ಬರ ವಾದ ಕೇಳಿದಾಗ ಅನಿಸೋದು ಇಷ್ಟು. ಆ ನಾಯಕಿ ಮತ್ತು ಈ ನಿರ್ಮಾಪಕರ ಮಧ್ಯೆ ಲಿವ್ ಇನ್... ಸಂಬಂಧ ಇದ್ದದ್ದು ಹೌದು. ಚೆನ್ನಾಗಿ ಇದ್ದಾಗ ಚೆನ್ನಾಗಿಯೇ ಇದ್ದ ಇಬ್ಬರೂ ಇದೀಗ ಮನಸ್ಸು ಕೆಡಿಸಿಕೊಂಡು ದೂರವಾಗಿರೋದು ಹೌದು. ಇಷ್ಟಕ್ಕೂ ಮನಸ್ಸು ಕೆಟ್ಟಿದ್ದು ಏಕೆ? ಅದಕ್ಕೆ ಆ ನಟಿಯ ಲೈಫಿನಲ್ಲಿ ಬಂದ ಇನ್ನೊಬ್ಬ ಹುಡುಗ ಕಾರಣವೋ... ಅಥವಾ ನಿರ್ಮಾಪಕ ಅರವಿಂದ ರೆಡ್ಡಿಯು 'ಎಣ್ಣೆ ಏಟು' ಕಾರಣವೋ...?!

☯

# ಮೆಡಿಕಲ್ ಕ್ಲಿನಿಕಲ್ ಟ್ರಯಲ್ ಮಾಫಿಯಾ ವೈರಲ್ ಇನ್ 'ದಿ ಟಾಸ್ಕ್'!

2019-2020ರಲ್ಲಿ ಜಗತ್ತನ್ನೇ ಅಲುಗಡಿಸಿದ 'ಕೋವಿಡ್' ಅನ್ನೋ ಮಹಾಮಾರಿ ಅದೆಷ್ಟೋ ಜನರ ಪ್ರಾಣ ಬಲಿ ತೆಗೆದುಕೊಂಡಿತು. ನಾವು ಬದುಕಿದ್ದಾಗಲೇ ನರಕ ತೋರಿಸಿತ್ತು. ಆಗ ಕೋವಿಡ್ ಲಸಿಕೆ ಕಂಡು ಹಿಡಿದು ತರಾತುರಿಯಲ್ಲಿ ಜನರ ಮೇಲೆ ನೇರವಾಗಿ ಪ್ರಯೋಗ ಮಾಡಲಾಗಿತ್ತು. ಕಾನೂನು ಮತ್ತು ಶಿಷ್ಟಾಚಾರದ ಪ್ರಕಾರ, ಕಂಡು ಹಿಡಿದ ಲಸಿಕೆಯನ್ನು ಇಲಿ, ಮೊಲ, ಹಂದಿ, ಮಂಗ ಮುಂತಾದ ಪ್ರಾಣಿಗಳ ಮೇಲೆ ಮೊದಲು ಪ್ರಯೋಗ ಮಾಡಿ ಅದು ಸಕ್ಸಸ್ ಆದಮೇಲೆ ಮನುಷ್ಯನಿಗೆ ನೀಡಬೇಕು! ಈ ಎಲ್ಲಾ ಪಕ್ರಿಯೆಗೆ ಸುಮಾರು ಎರಡು ವರ್ಷ ಬೇಕಾಗಬಹುದು. ಆದರೆ ಆಗಿನ ಪರಿಸ್ಥಿತಿಯಲ್ಲಿ ಇದಕ್ಕೆಲ್ಲಾ ಸಮಯವಿರಲಿಲ್ಲ.




ಅದೇ ರೀತಿ ಕೋವಿಡ್ ಮುಗಿದ ಮೇಲೆ ಲಸಿಕೆಯಿಂದ ಮನುಷ್ಯರಿಗೆ ಆಗುವ ದುಷ್ಪರಿಣಾಮಕ್ಕೆ ಮತ್ತೊಂದು ಲಸಿಕೆಯನ್ನು ಒಬ್ಬ ಮೆಡಿಕಲ್ ಮಾಫಿಯಾದ 'ಡಾನ್' ತನ್ನ ಸಂಜೀವಿನಿ ಸಂಸ್ಥೆಯ ಮೂಲಕ ಹೊಸದಾಗಿ ಕಾನೂನು ಬಾಹಿರವಾಗಿ 'ವ್ಯಾಕ್ಸಿನ್' ತಯಾರಿಸುತ್ತಾರೆ. ಅದನ್ನು ನೇರವಾಗಿ ಮನುಷ್ಯರ ಮೇಲೆ ಪ್ರಯೋಗ ಮಾಡಿ ಅದರಿಂದ ದೊಡ್ಡ ಅನಾಹುತ ಆಗುತ್ತದೆ. ಅದನ್ನು ನೋಡಿದವನ ಕೊಲೆಯಾಗುತ್ತದೆ! ಮತ್ತು ಅದನ್ನ ಆತ್ಮಹತ್ಯೆ ಅಂತ ಬಿಂಬಿಸಲಾಗುತ್ತದೆ. ಆದರೆ ಆ ಕೊಲೆಯನ್ನು ಹತ್ತನೇ ತರಗತಿ ಓದುವ ಒಂದು ಹುಡುಗಿ ನೋಡಿರುತ್ತಾಳೆ! ಆ ಹುಡುಗಿ ತಾನು ನೋಡಿದ್ದನ್ನು ತನ್ನ ಅಪ್ಪ, ಅಮ್ಮನಿಗೆ ಹೇಳುತ್ತಾಳೆ. ಭಯ ಭೀತಿಯಿಂದ ಅವರು ಆಕೆಯ ಬಾಯಿ ಮುಚ್ಚಿಸುತ್ತಾರೆ. ಆದರೆ ಆ ಹುಡುಗಿ ಸೋಷಿಯಲ್ ಮೀಡಿಯಾ ಮೂಲಕ ಒಬ್ಬ ಪ್ರಾಮಾಣಿಕ ಲಾಯರ್ ಅನ್ನು (ಸಂಗೀತ ಭಟ್) ಸಂಪರ್ಕಿಸಿ ವಿಷಯ ತಿಳಿಸುತ್ತಾಳೆ. ಆಗ ಮುಂದೆ ಆ ಹುಡುಗಿ ಬೆಂಗಳೂರಿಗೆ ಬಂದು ಸಾಕ್ಷಿ ಹೇಳಬೇಕಾಗುತ್ತದೆ. ಇಲ್ಲಿಂದ ಶುರುವಾಗುತ್ತದೆ ಅಸಲಿ ಸ್ಟೋರಿ!

ಆ ಹುಡುಗಿಯನ್ನು ಅವಳ ಹೆತ್ತವರ ಕಣ್ತಪ್ಪಿಸಿ ಬೆಂಗಳೂರಿಗೆ ಕರೆತರುವುದೇ ಅಸಲಿ ಟಾಸ್ಕ್!! ಇಬ್ಬರು ಯುವಕರಿಗೆ ಈ ಟಾಸ್ಕ್ ಕೊಡುವುದು ಓರ್ವ ನಿವೃತ್ತ ಪೋಲಿಸ್ ಅಧಿಕಾರಿ ರಾಜೇಶ್ (ಅಚ್ಯುತ್). ಅವರಿಬ್ಬರು ಮೀಸೆ ಮೂಡದ ಹದಿ ಹರೆಯದ ಹುಡುಗರು. ಹಾಸ್ಟಲ್ ನಲ್ಲಿ ವಾರ್ಡನ್ ಕಿರುಕುಳಕ್ಕೆ ತಿರುಗಿ ಬಿದ್ದು ಕೊಲೆ ಮಾಡಿ ಜೈಲು ಸೇರಿದವರು. ಅಲ್ಲಿಂದ ಅಚ್ಯುತ್ ಕುಮಾರ್ ಸಹಾಯದಿಂದ ಒಳ್ಳೆಯ ದಾರಿಯಲ್ಲಿ ನಡೆದು ನ್ಯಾಯಕ್ಕಾಗಿ ಹೋರಾಡುವ ಮನಸ್ಸಿನ ಹುಡುಗರಾಗಿ ಒಳ್ಳೆ ಜೀವನ ನಡೆಸುತ್ತಾರೆ. ಇಲ್ಲಿ ಆ ಹುಡುಗಿಯನ್ನು ಕಿಡ್ನ್ಯಾಪ್ ಮಾಡುವುದೇ ಒಂದು ರೋಚಕವಾಗಿದೆ.

ನಾಯಕ ನಟರಾದ ಜಯಸೂರ್ಯ ಮತ್ತು ಸಾಗರ್ ರಾಮ್ ಮೊದಲ ಬಾರಿಗೆ ಪೂರ್ಣ ಪ್ರಮಾಣದ ನಾಯಕ ನಟರಾಗಿ ಬಣ್ಣ ಹಚ್ಚಿದ್ದು, ಆಕ್ಷನ್ ಹೀರೋಗಳಾಗಿ ಮಿಂಚಿದ್ದಾರೆ. ಇಲ್ಲಿ ನಾಯಕ ನಟರುಗಳಿಗಿಂತ ಖಳ ನಟನಾಗಿ ಸುಂಟಿಕೊಪ್ಪದ ಲೋಕಲ್ ರೌಡಿಯಾಗಿ, ಭಯಂಕರವಾಗಿ ನಟಿಸಿರುವುದು ನಿರ್ದೇಶಕ ರಾಘು ಶಿವಮೊಗ್ಗ. ದುಷ್ಟ, ಅತ್ಯಾಚಾರಿ, ಸುಫಾರಿ ಕೊಲೆಗಾರ ಭರಮಪ್ಪನ ಪಾತ್ರದಲ್ಲಿ ರಾಘು ಶಿವಮೊಗ್ಗ ಅಕ್ಷರಶ ಜೀವಿಸಿಸಿದ್ದಾರೆ. ಇಡೀ ಚಿತ್ರದ ಹೈಲೈಟ್ ಈ ಪಾತ್ರ ಎನ್ನಬಹುದು. ಇನ್ನು, ದಕ್ಷ ಪೊಲೀಸ್ ಅಧಿಕಾರಿ ಪಾತ್ರದಲ್ಲಿ ಅಚ್ಯುತ್ ಕುಮಾರ್ ಕೂಡ ಅದ್ಭುತವಾಗಿ ನಟಿಸಿದ್ದಾರೆ. ಉಳಿದಂತೆ ಬೇಬಿ ಶ್ರೇಯಾ, ಸಂಗೀತಾ ಭಟ್, ಗೋಪಾಲ ಸರದೇಶಪಾಂಡೆ, ಹರಿಣಿ ಅಭಿನಯ ತೂಕವಾಗಿದೆ. ಒಟ್ಟಾರೆ, ಈ ವರ್ಷ ಸ್ಯಾಂಡಲ್ ವುಡ್ ನಲ್ಲಿ ಬಂದಿರೋ ಒಂದು ಅಪರೂಪದ ಕ್ರೈಂ ಥ್ರಿಲ್ಲರ್ 'ದಿ ಟಾಸ್ಕ್'. ಡೋಂಟ್ ಮಿಸ್!

☯

# ಕನ್ನಡ ಚಿತ್ರರಂಗ ಈ ಪರಿ ಯಕ್ಕುಟ್ಟಿ ಹೋದದ್ದೇಕೆ?

ಚಂದನವನ, ಗಾಂಧಿನಗರ, ಸ್ಯಾಂಡಲ್ ವುಡ್.... ಇದೆಲ್ಲಾ ಬಾಯಲ್ಲಿ ಹೇಳೋಕಷ್ಟೇ ಚಂದ. ನಾಮ್ ಕಾವಸ್ಥೆ ಗಷ್ಟೇ ಇದು ನಮ್ಮದು.. ಕನ್ನಡಿಗರದ್ದು. ಆದರಿಲ್ಲಿ ನಡೆಯೋದೆಲ್ಲ ಪರ ಭಾಷಿಕರ ಆಟ! ಇಲ್ಲಿ ಬಿಸಿನೆಸ್ ಮಾಡ್ತಿರೋ ಬಲಾಢ್ಯರು ಬಹುತೇಕ ಹೊರಗಿನವರು. ಹೊಂಬಾಳೆ ಫಿಲಂಸ್ ನವರೊಬ್ಬರನ್ನು ಬಿಟ್ರೆ ಉಳಿದವರು, ಸಣ್ಣ ಪುಟ್ಟ ನಿರ್ಮಾಪಕರು, ಹೊಸ ನಟರು ಇಲ್ಲಿ ಬದುಕುವುದೇ ದುಸ್ತರವಾಗಿದೆ.... ಅಲ್ರಿ, ಇದು ಕನ್ನಡ ನಾಡು. ಹೊಸಬರು ಆಸೆ ಆಕಾಂಕ್ಷೆ ಇಟ್ಟುಕೊಂಡು ಸಿನಿಮಾ ಮಾಡುತ್ತಾರೆ. ಆದರೆ, ನಮಗೆ ಚಿತ್ರಮಂದಿರ ಸಿಗುವುದಿಲ್ಲ! ಪರ ಭಾಷೆಯ ಸಿನಿಮಾಗಳಿಗೆ ನೂರಾರು ಸಂಖ್ಯೆಯಲ್ಲಿ ಸಿಗುತ್ತವೆ! ತಮಿಳು ತೆಲುಗಿನ ಹಳೆಯ ಸಿನಿಮಾ ರೀರಿಲೀಸ್ ಆದ್ರೂ ಇಲ್ಲಿ ನೂರಾರು ಚಿತ್ರಮಂದಿರ ಸಿಗುತ್ತವೆ. ಅದೇ ಇಲ್ಲಿನ ಕನ್ನಡ ಸಿನಿಮಾಗೆ ಎಲ್ಲೋ ಒಂದು ಕಡೆ ಮಾರ್ನಿಂಗ್ ಶೋ ಅಥವಾ ರಾತ್ರಿ ಒಂದು ಆಟ ಪ್ರದರ್ಶನಕ್ಕೆ ಅವಕಾಶ ಕೊಡುತ್ತಾರೆ!! ಇದೆಂಥ ಅನ್ಯಾಯ?

ಕಳೆದ ಶುಕ್ರವಾರ ಕನ್ನಡದ ಆರು ಸಿನಿಮಾಗಳು ರಿಲೀಸ್ ಆದವು. ಯಾವುದಕ್ಕೂ ಗರಿಷ್ಟ ಚಿತ್ರಮಂದಿರ ಸಿಕ್ಕಿಲ್ಲ. ದುನಿಯಾ ವಿಜಿ ಒಬ್ಬರ ಚಿತ್ರ ಬಿಟ್ಟು ಉಳಿದೆಲ್ಲರ ಪಾಡು ಹೇಳ ತೀರದು. ಹಿಂದೆಲ್ಲ ಕೆ.ಜಿ. ರೋಡ್‌ನ ಯಾವುದಾದರೊಂದು ಪ್ರತಿಷ್ಠಿತ ಚಿತ್ರಮಂದಿರದಲ್ಲಿ ಬಿಡುಗಡೆ ಮಾಡುವ ಹವ್ಯಾಸವಿತ್ತು. ಅದರೀಗ ಎಲ್ಲಿ ಸಿಗುತ್ತೋ ಅಲ್ಲಿ... ರಿಲೀಸ್ ಮಾಡಿದ್ರೆ ಸಾಕಪ್ಪ ಅನ್ನೋ ಪರಿಸ್ಥಿತಿ... ಎಲ್ಲೋ ಒಂದು ಮೂಲೆಯಲ್ಲಿ ಒಂದೋ ಎರಡೋ ಪ್ರದರ್ಶನಕ್ಕೆ ಚಾನ್ಸ್ ಸಿಕ್ಕಿ ಕನ್ನಡದ ಆರು ಸಿನಿಮಾ ರಿಲೀಸ್ ಆದವಲ್ಲ,ಅಂದೇ ತೆಲುಗಿನ ಹಳೇ ಸಿನಿಮಾ 'ಕೊದಮ ಸಿಂಹಂ', ತಮಿಳಿನ 'ಫ್ರೆಂಡ್ಸ್' ರೀ ರಿಲೀಸ್ ಆದವು! ಅವಕ್ಕೆ ಸಿಕ್ಕ ಚಿತ್ರಮಂದಿರ ಗಳೆಷ್ಟು? ನೂರಿನ್ನೂರು! ಅವನ್ನೇ ಕನ್ನಡ ಸಿನಿಮಾಗಳಿಗೆ ಕೊಡುವುದಕ್ಕೆ ಅಗುತ್ತಿರಲಿಲ್ವ? ಇಷ್ಟಕ್ಕೂ ಆರು ಚಿತ್ರಗಳು ಬಿಡುಗಡೆ ಆಗುತ್ತಿದ್ದಾಗ ಈ ಪರ ಭಾಷೆಯ ಹಳೇ ಸಿನಿಮಾಗಳನ್ನ ಅವತ್ತೇ ಬಿಡುಗಡೆ ಮಾಡುವುದೇನಿತ್ತು? ಒಟ್ಟಾರೆ, ಕನ್ನಡ ನೆಲದಲ್ಲೇ ಕನ್ನಡ ಸಿನಿಮಾಗಳ ಕೊಲೆ ಆಗುತ್ತಿದೆ! ಸೋ ಕಾಲ್ಡ್ ಕನ್ನಡ ಕಂಠೀರವರು,ಕನ್ನಡ ಕಲಿಗಳು, ಹೋರಾಟಗಾರರು, ಕರುನಾಡು ಅಭಿನವ ಚಕ್ರವರ್ತಿಗಳೆಲ್ಲ ಏನು ಮಾಡ್ತಿದ್ದಾರೆ?? ನೀವು ಬದುಕಿದರೆ ಸಾಕೆ??? ರಾಜ್ ಕುಮಾರ್, ವಿಷ್ಣುವರ್ಧನ್, ಅಂಬರೀಷ್ ಅವರು ಬದುಕಿದ್ದಾಗ ಈಗೆಲ್ಲ ಪರಿಸ್ಥಿತಿ ಇತ್ತೇ... ಛೇ...

☯

Vol. 41 No. 25 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 policenewsreporter@gmail.com
http//policenews.news https://www.facebook.com/profile.php?id=61579674874846 https://www.instagram.com/police_news?igsh=MWJ6bHJwZDRmZDc1aQ==